ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 21 ಬುಧವಾರ 2024


ಸಂಪುಟ: 44 | ಸಂಚಿಕೆ: 304 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಾ.1–22 ದ್ವಿತೀಯ ಪಿಯು, ಮಾ.25–ಏ.6 ಎಸ್‌ಎಸ್‌ಎಲ್‌ಸಿ ಪರೀಕ್ಷೆ



ಬೆಂಗಳೂರು, ಫೆ.20(ಕೆಎಂಶಿ)–ಲೋಕಸಭಾ ಚುನಾವಣಾ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಏಪ್ರಿಲ್ 6ರೊಳಗೆ ಪೂರ್ಣಗೊಳಿಸಲು ಸರ್ಕಾರ ಅಂತಿಮ ವೇಳಾಪಟ್ಟಿ ಪ್ರಕಟಿಸಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿಯಲ್ಲಿಂದು ವೇಳಾಪಟ್ಟಿ ಪ್ರಕಟಿಸಿ, ನ್ಯಾಯಾಲಯದ ನಿರ್ದೇಶನದಂತೆ ಸಮವಸ್ತ್ರ ನಿಯಮ ಪಾಲನೆ ಮಾಡುವುದಾಗಿ ಸ್ಪಷ್ಟಪಡಿಸಿದರು. ದ್ವಿತೀಯ ಪಿಯುಸಿ ಪರೀಕ್ಷೆ ಮಾರ್ಚ್ ಒಂದರಿಂದ 22 ರವರೆಗೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 25ರಿಂದ ಏಪ್ರಿಲ್ 6 ರವರೆಗೆ ನಡೆಯಲಿದೆ.

ಈ ವರ್ಷ ರಾಜ್ಯದಲ್ಲಿ 8,96,271 ಮಕ್ಕಳು ಎಸ್‌ಎಸ್‌ಎಲ್‌ಸಿ, 6,98,624 ಮಕ್ಕಳು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಾರೆ. ಒಟ್ಟಾರೆ 2,741 ಪರೀಕ್ಷಾ ಕೇಂದ್ರಗಳಿರುತ್ತವೆ. ಎಸ್‌ಎಸ್‌ಎಲ್‌ಸಿಯಲ್ಲಿ 20 ಅಂಕಗಳಿಗೆ ಆಂತರಿಕ ಪರೀಕ್ಷೆ ನಡೆಯಲಿದೆ, ಇನ್ನು ದ್ವಿತೀಯ ಪಿಯುಸಿ ಪರೀಕ್ಷೆ ಕಳೆದ ವರ್ಷದಂತೆ 80–20 ಅಂಕಗಳ ಮಾದರಿಯಲ್ಲಿರುತ್ತದೆ. ವಿದ್ಯಾರ್ಥಿ ಗಳು ಲಿಖಿತ ರೂಪದಲ್ಲಿ 80 ಅಂಕಗಳಿಗೆ ಪರೀಕ್ಷೆ ಬರೆಯುತ್ತಾರೆ, ಇನ್ನುಳಿದ 20 ಅಂಕಗಳು ಆಂತರಿಕ ಮೌಲ್ಯಮಾಪನದ ಮೂಲಕ ನೀಡಲಾಗುತ್ತದೆ ಎಂದರು. ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರಮುಖ ಘಟ್ಟವಾಗಿ ರುವ ಎರಡೂ ಪರೀಕ್ಷೆಗಳ ಫಲಿತಾಂಶ ಏಪ್ರಿಲ್ ಕೊನೆ ವಾರದಲ್ಲಿ ಪ್ರಕಟಗೊಳ್ಳಲಿದೆ ಎಂದರು.

ದ್ವಿತೀಯ ಪಿಯುಸಿ ಪರೀಕ್ಷೆ ವೇಳಾಪಟ್ಟಿ

01–03–2024	ಕನ್ನಡ ಹಾಗೂ ಅರೇಬಿಕ್
04–03–2024	ಗಣಿತ ಹಾಗೂ ಶಿಕ್ಷಣಶಾಸ್ತ್ರ
05–03–2024	ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ
06–03–2024	ಮಾಹಿತಿ ತಂತ್ರಜ್ಞಾನ ರಿಟೈಲ್, ಆಟೋಮೊಬೈಲ್, ಹೆಲ್ತ್‌ಕೇರ್, ಬ್ಯುಟಿ ಅಂಡ್ ವೆಲ್‌ನೆಸ್
07–03–2024	ಇತಿಹಾಸ ಹಾಗೂ ಭೌತಶಾಸ್ತ್ರ
09–03–2024	ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ
11–03–2024	ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ
13–03–2024	ಇಂಗ್ಲಿಷ್
15–03–2024	ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನಶಾಸ್ತ್ರ, ಮೂಲಗಣಿತ
16–03–2024	ಅರ್ಥಶಾಸ್ತ್ರ
18–03–2024	ಭೂಗೋಳಶಾಸ್ತ್ರ, ಜೀವಶಾಸ್ತ್ರ
20–03–2024	ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ
21–03–2024	ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್
22–03–2024	ಹಿಂದಿ

ಪರೀಕ್ಷೆ ಬೆಳಗ್ಗೆ 10.15ರಿಂದ ಮಧ್ಯಾಹ್ನ 1.30

ಎಸ್‌ಎಸ್‌ಎಲ್‌ಸಿ ಪರೀಕ್ಷೆ

25–03–2024	ಪ್ರಥಮ ಭಾಷೆ ಪರೀಕ್ಷೆ–ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ +ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ
27–03–2024	ಸಮಾಜ ವಿಜ್ಞಾನ
30–03–2024	ವಿಜ್ಞಾನ, ರಾಜ್ಯಶಾಸ್ತ್ರ
02–04–2024	ಗಣಿತ, ಸಮಾಜ ಶಾಸ್ತ್ರ
03–04–2024	ಅರ್ಥಶಾಸ್ತ್ರ
04–04–2024	ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲೀಷ್+ ಇಂಗ್ಲೀಷ್ (ಎನ್‌ಸಿಇಆರ್‌ಟಿ), ಸಂಸ್ಕೃತ (ತೃತೀಯ ಭಾಷೆ)
06–04–2024	ಇಂಗ್ಲೀಷ್, ಕನ್ನಡ (ದ್ವಿತೀಯ ಭಾಷೆ)

ಪರೀಕ್ಷೆ ಬೆಳಗ್ಗೆ 10.15ರಿಂದ ಮಧ್ಯಾಹ್ನ 1.30

ಮೈಸೂರು ಚೆಲುವಾಂಬ ಆಸ್ಪತ್ರೆಯಲ್ಲಿ ನವಜಾತ ಶಿಶುಗಳ ಸುರಕ್ಷಿತ ಕವಚ NICU



ನವಜಾತ ಶಿಶುಗಳಿಗೆ ತುರ್ತು ಚಿಕಿತ್ಸೆ ನೀಡುವ ಆಂಬುಲೆನ್ಸ್ ಎಂದೇ ಕರೆಯಲಾಗುವ ಮೊಬೈಲ್ ನಿಯೋನಾಟಲ್ ತುರ್ತು ಚಿಕಿತ್ಸಾ ಘಟಕದ ವಾಹನಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬೆಂಗಳೂರಿನಲ್ಲಿ ಇಂದು ಚಾಲನೆ ನೀಡಿದರು.

ಆಸ್ಪತ್ರೆಗಳಲ್ಲಿ ಸರಾಸರಿ ಹೆರಿಗೆ ಸಂಖ್ಯೆ

ಆಸ್ಪತ್ರೆಗಳು	2023ರ ಏಪ್ರಿಲ್‌ನಿಂದ ಆಗಸ್ಟ್ ತಿಂಗಳ ಹೆರಿಗೆ	2023ರ ಸೆಪ್ಟೆಂಬರ್‌ನಿಂದ 2024ರ ಜನವರಿ ತಿಂಗಳ ಹೆರಿಗೆ
ಚೆಲುವಾಂಬ	700–800	500–550
ಜಿಲ್ಲಾ ಆಸ್ಪತ್ರೆ	30–40	150–200
ಜಯನಗರ ಹೆರಿಗೆ ಆಸ್ಪತ್ರೆ	70–80	100–110
ವಿವಿ ಪುರಂ ಹೆರಿಗೆ ಆಸ್ಪತ್ರೆ	50–60	50–70
ಎಸ್‌ಎಂಟಿ ಆಸ್ಪತ್ರೆ	70–80	110–150
ನಾಗಮ್ಮ ಹೆರಿಗೆ ಆಸ್ಪತ್ರೆ	25–40	50–70
ಹೆಚ್.ಡಿ.ಕೋಟೆ	40–50	100–150
ಹುಣಸೂರು	30–40	60–70
ಕೆ.ಆರ್.ನಗರ	200–300	350–400
ನಂಜನಗೂಡು	50–70	90–120
ಪಿರಿಯಾಪಟ್ಟಣ	10–20	50–70
ತಿ.ನರಸೀಪುರ	30–50	50–100

ಮೈಸೂರು, ಫೆ. 20(ಆರ್‌ಕೆ)– ನವಜಾತ ಶಿಶುಗಳ ಮರಣ ಪ್ರಮಾಣ ಕಡಿಮೆ ಮಾಡಲು ಆರೋಗ್ಯ ಇಲಾಖೆಯು ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಮೊಬೈಲ್ ನಿಯೋನಾಟಲ್ ಇಂಟೆನ್ಸಿವ್ ಕೇರ್ ಯೂನಿಟ್ (NICU) ಒದಗಿಸಿದೆ.

ನವಜಾತ ಶಿಶುಗಳಿಗೆ ತುರ್ತು ಚಿಕಿತ್ಸೆ ನೀಡುವ ಆಂಬುಲೆನ್ಸ್ ಎಂದೇ ಕರೆಯಲಾಗುವ ಮೊಬೈಲ್ ನಿಯೋನಾಟಲ್ ತುರ್ತು ಚಿಕಿತ್ಸಾ ಘಟಕದ ವಾಹನಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬೆಂಗಳೂರಿನಲ್ಲಿ ಮಂಗಳವಾರ ಚಾಲನೆ ನೀಡಿದ್ದಾರೆ. ಇಂಟಿಗ್ರೇಟೆಡ್ ಮ್ಯಾನೇಜ್‌ಮೆಂಟ್ ಆಫ್ ನಿಯೋನೇಟಲ್ ಅಂಡ್ ಚೈಲ್ಡ್ ಐಸಿಯು ಅಡಿಯಲ್ಲಿ ಈ ಯೋಜನೆಯನ್ನು ರಾಜ್ಯದಾದ್ಯಂತ ಎಲ್ಲಾ ವಿಭಾಗಗಳಿಗೊಂದರಂತೆ ಎನ್‌ಐಸಿಯು ವಾಹನಗಳನ್ನು ಸರ್ಕಾರ ಪೂರೈಸಿದೆ. ಕುಗ್ರಾಮಗಳಲ್ಲಿ ಜನಿಸುವ ಮಕ್ಕಳ ಆರೋಗ್ಯ ಕಾಪಾಡುವುದು, ಅನಾರೋಗ್ಯದಿಂದಿರುವ ಶಿಶುಗಳಿಗೆ ಚಿಕಿತ್ಸೆ ನೀಡಿ ಸೌಲಭ್ಯಯುಳ್ಳ ತಾಲೂಕು ಸಾರ್ವಜನಿಕ ಆಸ್ಪತ್ರೆ ಅಥವಾ ಜಿಲ್ಲಾ ಕೇಂದ್ರಗಳ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಗೆ ಸುರಕ್ಷಿತವಾಗಿ ಕರೆತರುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ. ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ, ರಾಯಚೂರಿನ ರಾಯಚೂರ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಹಾಗೂ ಹುಬ್ಬಳ್ಳಿಯ ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್

●9ನೇ ಪುಟಕ್ಕೆ



ಮೊಬೈಲ್ ನವಜಾತ ಶಿಶು ತೀವ್ರ ನಿಗಾ ಘಟಕದ (NICU) ಒಳನೋಟ

ರಾಜಸ್ಥಾನದಿಂದ ರಾಜ್ಯಸಭೆಗೆ ಸೋನಿಯಾ ಗಾಂಧಿ ಅವಿರೋಧ ಆಯ್ಕೆ!



ಜೈಪುರ, ಫೆ.20– ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಅವಿರೋಧವಾಗಿ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ರಾಜಸ್ಥಾನದಿಂದ ಮೂರು ಸ್ಥಾನಗಳಿಗೆ ಮೂವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಮಂಗಳವಾರ ರಾಜಸ್ಥಾನ ವಿಧಾನ ಸಭೆಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭೆಯ ಚುನಾವಣಾಧಿಕಾರಿ ಮಹಾವೀರ ಪ್ರಸಾದ್ ಶರ್ಮಾ, ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳಾದ ಚುನ್ನಿ ಲಾಲ್ ಗರಾಸಿಯಾ, ಮದನ್ ರಾಥೋಡ್ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋನಿಯಾ ಗಾಂಧಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಿಸಿದರು. ಫೆಬ್ರವರಿ 20 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿತ್ತು.

●9ನೇ ಪುಟಕ್ಕೆ

ಕಾಲೇಜು ಸಹಪಾಠಿ ವಿದ್ಯಾರ್ಥಿನಿಯೊಂದಿಗೆ ಮಾತನಾಡಿದ ಮಾರನೇ ದಿನ ನೇಣು ಬಿಗಿದ ಸ್ಥಿತಿಯಲ್ಲಿ

ವಿದ್ಯಾರ್ಥಿ ಶವ ಪತ್ತೆ!



ಮುತ್ತುರಾಜ್



ತಪ್ಪಿತಸ್ಥರನ್ನು ಬಂಧಿಸುವಂತೆ ಗ್ರಾಮಾಂತರ ಪೊಲೀಸ್ ಠಾಣೆ ಎದುರು ಶವವನ್ನಿಟ್ಟು ಗ್ರಾಮಸ್ಥರು, ಕುಟುಂಬದವರು ಪ್ರತಿಭಟನೆ ನಡೆಸಿದರು.

ಹುಣಸೂರು, ಫೆ.20– ವಿದ್ಯಾರ್ಥಿಯೋರ್ವನ ಶವ ನೇಣು ಬಿಗಿದ ಸ್ಥಿತಿಯಲ್ಲಿ ತಾಲೂಕಿನ ರತ್ನಪುರಿ ಕಾಲೋನಿ ಸಮೀಪದ ದಾಸನಪುರ ಗ್ರಾಮದಲ್ಲಿ ಪತ್ತೆಯಾಗಿದೆ. ತಾಲೂಕಿನ ರತ್ನಪುರಿ ಕಾಲೋನಿ ವಿಎಸ್‌ಎಸ್ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿ, ದಾಸನಪುರ ಗ್ರಾಮದ ನಿವಾಸಿ ರವಿಕುಮಾರ್ ಪುತ್ರ ಮುತ್ತುರಾಜ್(17) ಅನುಮಾನಾಸ್ಪದವಾಗಿ ಸಾವಿಗೀಡಾದವನು.

ಈತ ತನ್ನ ಕಾಲೇಜು ಸಹಪಾಠಿ ಅನ್ಯ ಕೋಮಿನ ಯುವತಿಯನ್ನು ಮಾತನಾಡಿಸಿದ್ದಕ್ಕೆ ಗ್ರಾಮದ ಸಮೀಪದ ಕಾಲುವೆ ಬಳಿ ಸೋಮವಾರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಕೆಲ ಯುವಕರು ತೀವ್ರ ಹಲ್ಲೆ ನಡೆಸಿದ್ದರು. ಈ ವಿಷಯ ತಿಳಿದು ತಂದೆ ರವಿಕುಮಾರ್ ಮಗನನ್ನು ಎಲ್ಲೆಡೆ ಹುಡುಕಾಡಿದ್ದಾರೆ. ಕೊನೆಗೆ ತಮ್ಮ ಜಮೀನಿನ ಪಕ್ಕದ ಜಮೀನಿನಲ್ಲಿದ್ದ ಶುಂಠಿ ಶೆಡ್‌ನಲ್ಲಿ ಮುತ್ತುರಾಜ್ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ತಕ್ಷಣ ರವಿಕುಮಾರ್ ನನ್ನ ಮಗನ ಮೇಲೆ ಹಲ್ಲೆ ನಡೆಸಿ, ಹತ್ಯೆ ಮಾಡಲಾಗಿದೆ ಎಂದು ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ, ರಾತ್ರಿ 11 ಗಂಟೆ ವೇಳೆಗೆ ಶವವನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು. ಬಳಿಕ ಮಂಗಳವಾರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ದೇಹ ಒಪ್ಪಿಸಿದರು.

ಗ್ರಾಮಸ್ಥರು, ಕುಟುಂಬದವರಿಂದ ಪ್ರತಿಭಟನೆ: ಯುವಕನ ಮೇಲೆ ವಿನಾಕಾರಣ ಹಲ್ಲೆ ನಡೆಸಿ, ಹತ್ಯೆ ಮಾಡಿ ನೇಣು ಹಾಕಲಾಗಿದೆ. ಆರೋಪಿಗಳ ಬಂಧಿಸಬೇಕೆಂದು ಆಗ್ರಹಿಸಿ ಗ್ರಾಮಾಂತರ ಪೊಲೀಸ್ ಠಾಣೆ ಎದುರು ಶವವನ್ನಿಟ್ಟು ಗ್ರಾಮಸ್ಥರು, ಕುಟುಂಬದವರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಗೋಪಾಲಕೃಷ್ಣ, ಇನ್ಸ್‌ಪೆಕ್ಟರ್ ದೇವೇಂದ್ರ ಮತ್ತು ಸಿಬ್ಬಂದಿ ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಘಟನೆ

●9ನೇ ಪುಟಕ್ಕೆ



ಸರ್ಕಾರಕ್ಕೆ ಮತ್ತೆ ಜ್ಞಾನೋದಯ...!

ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ...

ಬೆಂಗಳೂರು, ಫೆ. 20– ಪ್ರತಿಪಕ್ಷಗಳು ಮತ್ತು ಸಾರ್ವಜನಿಕರ ಭಾರಿ ವಿರೋಧದ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವಸತಿ ಶಾಲೆಗಳಲ್ಲಿದ್ದ ಕುವೆಂಪು ಅವರ ಘೋಷವಾಕ್ಯವನ್ನು ಮಾರ್ಪಡಿಸಿದ್ದನ್ನು ಹಿಂಪಡೆದು 'ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ' ಘೋಷವಾಕ್ಯವನ್ನೇ ಮುಂದುವರೆಸುವಂತೆ ಆದೇಶ ನೀಡಿದೆ.

ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಈ ಕುರಿತು ಟೆಲಿಗ್ರಾಂ ಮೂಲಕ ಆದೇಶ ಹೊರಡಿಸಿ ಈ ತಕ್ಷಣದಿಂದ ಈ ಹಿಂದೆ ಇದ್ದಂತೆ ಕುವೆಂಪು ಅವರ ಘೋಷವಾಕ್ಯ 'ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ' ಮುಂದುವರೆಸುವಂತೆ ಎಲ್ಲಾ ವಸತಿಗಳ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ಎಲ್ಲಾ ವಸತಿಶಾಲೆಗಳಲ್ಲಿ 'ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ' ಎಂಬ ಘೋಷವಾಕ್ಯವಿತ್ತು. ಇದನ್ನು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ 'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸು' ಎಂದು ಬದಲಾಯಿಸುವಂತೆ ಮೌಖಿಕ ಆದೇಶ ನೀಡಿ, ಬದಲಾಯಿಸಿದ್ದರು. ಅದರಂತೆ ಈಗಾಗಲೇ ಕೆಲವು ವಸತಿ ಶಾಲೆಗಳು ಬದಲಾಯಿಸಿದ್ದವು. ಈ ವಿಚಾರ ಪ್ರತಿಪಕ್ಷಗಳು, ಸಾರ್ವಜನಿಕರು ಹಾಗೂ ಸಂಘ–ಸಂಸ್ಥೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ, ರಾಜ್ಯಾದ್ಯಂತ ಪ್ರತಿಭಟನೆ ನಡೆದಿದ್ದವು. ಬದಲಾವಣೆಯನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರು ಸೇರಿದಂತೆ ಸರ್ಕಾರದ ಸಚಿವರನೇಕರು ಸಮರ್ಥಿಸಿಕೊಂಡಿದ್ದರೆ, ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಟೀಕಿಸಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಸರ್ಕಾರ ಇಂದು ರಾತ್ರಿಯಿಂದಲೇ ತಾನು ನೀಡಿದ್ದ ಮಾರ್ಪಾಡು ಘೋಷವಾಕ್ಯವನ್ನು ಬದಲಾಯಿಸಿ ಕುವೆಂಪು ಅವರ ಘೋಷವಾಕ್ಯವನ್ನೇ ಮುಂದುವರೆಸುವಂತೆ ಆದೇಶಿಸಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಗೆಲುವು

ಬಿಜೆಪಿ–ಜೆಡಿಎಸ್ ಮೈತ್ರಿಗೆ ಮುಖಭಂಗ



ಬೆಂಗಳೂರು, ಫೆ.20–ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಫಲಿತಾಂಶ ಹೊರಬಿದ್ದಿದ್ದು ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗೆ ಸೋಲಾಗಿದೆ. ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪುಟ್ಟಣ್ಣ 1506 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಆರಂಭದಿಂದಲೂ ಮುನ್ನಡೆ ಕಾಯ್ದುಗೊಂಡಿದ್ದ ಪುಟ್ಟಣ್ಣ ಅಂತಿಮವಾಗಿ ಎ.ಪಿ.ರಂಗನಾಥ್ ವಿರುದ್ಧ ಗೆಲುವು ಸಾಧಿಸಿದ್ದಾರೆ. ಪುಟ್ಟಣ್ಣ ಗೆಲುವು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಂಭ್ರಮ ಮನೆ ಮಾಡಿದೆ.

ಪುಟ್ಟಣ್ಣ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ಕಳೆದ ಮಾರ್ಚ್‌ನಲ್ಲಿ ಬಿಜೆಪಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಉಪ ಚುನಾವಣೆ ನಡೆದಿದ್ದು ಇದೀಗ ಪುಟ್ಟಣ್ಣ ಅವರೇ ಗೆಲುವು ಸಾಧಿಸಿದ್ದಾರೆ.

ಕಾಂಗ್ರೆಸ್‌ನ ಪುಟ್ಟಣ್ಣ ಒಟ್ಟು 8,260 ಮತಗಳನ್ನು ಪಡೆದುಕೊಂಡಿದ್ದರೆ, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಎಪಿ ರಂಗನಾಥ್ ಅವರಿಗೆ ಒಟ್ಟು 6753 ಮತಗಳು ಬಿದ್ದಿವೆ. ಇನ್ನು 1239 ಮತಗಳು ತಿರಸ್ಕೃತಗೊಂಡಿವೆ.

ನಾವು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿ 77 ಸಾವಿರ ಕೋಟಿ ಹೂಡಿಕೆ ಆಗಿರುವುದೇ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆಗೆ ಸಾಕ್ಷಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ಕೇಂದ್ರದ ಅಸಹಕಾರದಲ್ಲೂ ಗ್ಯಾರಂಟಿ ಮೂಲಕ ಜನ ಕಲ್ಯಾಣ, ರಾಜ್ಯದ ಅಭಿವೃದ್ಧಿ ಮಾಡಿದ್ದೇವೆ
- ರಾಜ್ಯಪಾಲರ ಭಾಷಣದ ವಂದನಾ ಮೇಲಿನ ಚರ್ಚೆಗೆ ಉತ್ತರದ ವೇಳೆ ಬಿಜೆಪಿ, ಮೋದಿ, ಕೇಂದ್ರದ ವಿರುದ್ಧ ನಿರಂತರ ವಾಗ್ದಾಳಿ

ಬೆಂಗಳೂರು, ಫೆ.20(ಕೆಎಂಶಿ)–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ರಾಜ್ಯ ಸರ್ಕಾರ ಅಭಿವೃದ್ಧಿ ಮತ್ತು ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಜಾರಿ ಹಾಗೂ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ರಾಜ್ಯಪಾಲರ ಭಾಷಣದ ವಂದನಾ ಮೇಲಿನ ಚರ್ಚೆಗೆ ಉತ್ತರಿಸಿ, ಬಿಜೆಪಿ, ಕೇಂದ್ರ ಹಾಗೂ ಮೋದಿ ಅವರನ್ನು ತಮ್ಮ ಭಾಷಣದುದ್ದಕ್ಕೂ ತರಾಟೆಗೆ ತೆಗೆದುಕೊಂಡರು. ಮೋದಿ ಸರ್ಕಾರ ರೈತರ, ದಲಿತರ, ಬಡವರ, ಅಲ್ಪಸಂಖ್ಯಾತರ, ಮಹಿಳೆಯರ, ಕಾರ್ಮಿಕರ, ಸಂವಿಧಾನ ವಿರೋಧಿಯಾಗಿದೆ ಎಂದು ಆರೋಪಿಸಿದ ಅವರು, ರಾಜ್ಯದ ಬಹುತೇಕ ಭಾಗ ಬರಕ್ಕೆ ಸಿಲುಕಿದ್ದರೂ ಕೇಂದ್ರ ಸರ್ಕಾರ ಇದುವರೆಗೂ ಒಂದು ಪೈಸೆ ನೀಡಿಲ್ಲ, ಈ ಸಂಬಂಧ ಕೇಂದ್ರ ಸಚಿವರನ್ನು ಎರಡು ಬಾರಿ ಭೇಟಿ ಮಾಡಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ, ನಮ್ಮ ಪತ್ರಗಳಿಗೆ ಅವರಿಂದ ಸ್ಪಂದನೆಯೇ ಇಲ್ಲ ಎಂದರು.

ಇಂತಹ ಸರ್ಕಾರವನ್ನು ಏನೆಂದು ಕರೆಯಲು ಸಾಧ್ಯ, ಜನರಿಗೆ ಸಂವಿಧಾನದ ಜಾಗೃತಿ ಮೂಡಿಸಿ, ಕೆಲವರ ಕೊಳಕುತನವನ್ನು ಬಹಿರಂಗ ಮಾಡಲು ಜಾಗೃತಿ ಯಾತ್ರೆ ಆರಂಭಿಸಿದ್ದೇವೆ ಎಂದರು.

ನಾವು ಮನುವಾದದಲ್ಲಿ ನಂಬಿಕೆ ಇಟ್ಟಿಲ್ಲ, ಸಂವಿಧಾನದಲ್ಲಿ ನಂಬಿಕೆ ಇಟ್ಟಿರುವವರು, ಸರ್ವ ಜನಾಂಗದ ಶಾಂತಿಯ ತೋಟ ಎಂಬ ಮಾತಲ್ಲಿ ನಾವು ನಂಬಿಕೆ ಇರಿಸಿದ್ದೇವೆ. ಆದ್ದರಿಂದ ಎಲ್ಲಾ ವರ್ಗಗಳಿಗೆ ಶಕ್ತಿ ನೀಡಲು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೇವಲ 9 ತಿಂಗಳಲ್ಲಿ 77 ಸಾವಿರ ಕೋಟಿ



ರೂ. ಹೂಡಿಕೆ ಆಗಿರುವುದೇ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುಗಮವಾಗಿರುವುದಕ್ಕೆ ಸಾಕ್ಷಿ ಎಂದರು.

ಬಿಜೆಪಿ ಎಂದರೆ ಸುಳ್ಳು, ಸುಳ್ಳಿನ ಉತ್ಪಾದನೆಯಲ್ಲಿ ಬಿಜೆಪಿ ನಿಸ್ಸೀಮರು, ಅಭಿವೃದ್ಧಿ ಮರೆತು ಸುಳ್ಳುಗಳ ಆಸರೆ ಹೋಗಿದ್ದ ಬಿಜೆಪಿಯನ್ನು ರಾಜ್ಯದ ಜನತೆ ತಿರಸ್ಕರಿಸಿದ್ದಾರೆ. ರಾಜ್ಯದಲ್ಲಿ ಇವತ್ತಿನವರೆಗೂ ಬಿಜೆಪಿ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದೇ ಇಲ್ಲ, ಹಿಂಬಾಗಿಲ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ, ಬಿಜೆಪಿಯಿಂದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಸದಾನಂದಗೌಡ ಮುಖ್ಯಮಂತ್ರಿ ಆದರು, ಇವರ್‍ಯಾರೂ ಸ್ಪಷ್ಟ ಬಹುಮತ ಪಡೆದು ಮುಖ್ಯಮಂತ್ರಿ ಆದವರಲ್ಲ, ಆಪರೇಷನ್ ಕಮಲ ಮತ್ತು ಹಿಂಬಾಗಿಲ ಮೂಲಕ ಆಮಿಷವೊಡ್ಡಿ ಇತರ ಪಕ್ಷದ ಶಾಸಕರನ್ನು ಸೆಳೆದು ಅಧಿಕಾರಕ್ಕೇರಿದರು ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ನಾವು 2013 ಹಾಗೂ 2023ರಲ್ಲಿ ಸ್ಪಷ್ಟ ಬಹುಮತದ ಮೂಲಕ ಅಧಿಕಾರಕ್ಕೆ ಬಂದಿದ್ದೇವೆ, ಜನ ನಮ್ಮನ್ನು ತಿರಸ್ಕರಿಸಿ ವಿರೋಧ ಪಕ್ಷದಲ್ಲಿ ಕೂರಿಸಿದಾಗಲೂ ತಲೆಬಾಗಿ ಜನರ ತೀರ್ಮಾನವನ್ನು ಒಪ್ಪಿಕೊಂಡು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡಿ ಮತ್ತೆ ಅಧಿಕಾರಕ್ಕೆ ಬಂದಿದ್ದೇವೆ ಎಂದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೇಂದ್ರದ ಜತೆ ಸಂಘರ್ಷಕ್ಕೆ ಇಳಿಯಬಾರದು ಎಂದಿದ್ದಾರೆ, ನಾವು ಸಂಘರ್ಷಕ್ಕೆ ಇಳಿದಿಲ್ಲ, ರಾಜ್ಯದ ಪಾಲಿನ ಸಂವಿಧಾನಬದ್ಧ ಹಕ್ಕು, ಅನುದಾನ ಕೇಳುವುದು ಸಂಘರ್ಷ ಆಗುವುದಿಲ್ಲ ರಾಜ್ಯದಲ್ಲಿ ತೀವ್ರ ಬರಗಾಲವಿದೆ, ಪರಿಹಾರ ಕೋರಿ ಕೇಂದ್ರಕ್ಕೆ 17 ಬಾರಿ ಪತ್ರ ಬರೆದೆವು, ಒಂದು ಪತ್ರಕ್ಕೆ ಮಾತ್ರ, 'ನಿಮ್ಮ ಪತ್ರ ತಲುಪಿದೆ' ಎನ್ನುವ ಉತ್ತರ ಕೇಂದ್ರದಿಂದ ಬಂತು. ಉಳಿದ ಪತ್ರಗಳಿಗೆ ಉತ್ತರವೂ ಬರಲಿಲ್ಲ,

●9ನೇ ಪುಟಕ್ಕೆ

ಡೆಲಾಯ್ಟ್ ಗ್ಲೋಬಲ್ ಲಕ್ಷುರಿ ರ‍್ಯಾಂಕಿಂಗ್‌ನಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್‌ಗೆ 19ನೇ ರ‍್ಯಾಂಕ್



ಭಾರತದ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಸ್ಥಾನ

ಬೆಂಗಳೂರು, ಫೆ. 20– ಮುಂಚೂಣಿಯಲ್ಲಿರುವ ಆಭರಣ ರೀಟೇಲರ್ ಸಂಸ್ಥೆಗಳಲ್ಲಿ ಒಂದಾಗಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್ ಡೆಲಾಯ್ಟ್‌ನ ಗ್ಲೋಬಲ್ ಪವರ್ಸ್ ಆಫ್ ಲಕ್ಷುರಿ ಗೂಡ್ಸ್ 2023ರ ರ‍್ಯಾಂಕಿಂಗ್‌ನಲ್ಲಿ 19ನೇ ಸ್ಥಾನ ಗಳಿಸುವ ಮೂಲಕ ಪಾರುಪತ್ಯ ಮೆರೆದಿದೆ. ದೇಶದ ಐಷಾರಾಮಿ ಮಾರುಕಟ್ಟೆಯಲ್ಲಿ ತನ್ನ ಪ್ರಾಬಲ್ಯವನ್ನು ಪುನರುಚ್ಚರಿಸುವ ಮೂಲಕ ಬ್ರ್ಯಾಂಡ್ ಭಾರತದಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ.

ಡೆಲಾಯ್ಟ್ ಗ್ಲೋಬಲ್ ಪವರ್ಸ್ ಆಫ್ ಲಕ್ಷುರಿ ಗೂಡ್ಸ್ ಈ ಶ್ರೇಯಾಂಕ ಪಟ್ಟಿಯನ್ನು ಆಭರಣಗಳು, ಉಡುಪುಗಳು, ಕೈಗಡಿಯಾರಗಳು ಮತ್ತು ಸೌಂದರ್ಯ ಉತ್ಪನ್ನಗಳ ಜಾಗತಿಕ ಮಾರಾಟ ಮತ್ತು ಬ್ರ್ಯಾಂಡ್ ಮೌಲ್ಯವನ್ನು ನಿರ್ಣಯಿಸುವ ಮೂಲಕ ಸಿದ್ಧಪಡಿಸಲಾಗುತ್ತದೆ. ಜಾಗತಿಕ ಮಾರಾಟ ಮತ್ತು ಬ್ರ್ಯಾಂಡ್ ಮೌಲ್ಯದಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಅಸಾಧಾರಣ ಸಾಧನೆಯು ಅದನ್ನು ಈ ವಿಶಿಷ್ಟ ಪಟ್ಟಿಯಲ್ಲಿ ಸೇರಿಸಿದೆ ಇದು ಬ್ರ್ಯಾಂಡ್‌ಗೆ ಮಹತ್ವದ ಮೈಲಿಗಲ್ಲನ್ನು ಗುರುತಿಸಿದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಮುಂಚೂಣಿಯಲ್ಲಿ ಹೊರಹೊಮ್ಮಿರುವ ವಿಶ್ವದ ಎರಡನೇ ಅತೀ ದೊಡ್ಡ ಮಾರುಕಟ್ಟೆಯಾದ ಭಾರತದ ಆಭರಣ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿನ ಕ್ರಿಯಾತ್ಮಕ ಬದಲಾವಣೆಗಳನ್ನು ಡೆಲಾಯ್ಟ್ ವರದಿ ಎತ್ತಿ ತೋರಿಸುತ್ತದೆ. 30 ವರ್ಷಗಳ ಶ್ರೇಷ್ಠತೆಯನ್ನು ಆಚರಣೆ ಮಾಡುವ ಬ್ರ್ಯಾಂಡ್ ಸಮಕಾಲೀನ ಮತ್ತು ಸಾಂಪ್ರದಾಯಿಕ ಆಭರಣ ಶೈಲಿಗಳ ವ್ಯಾಪಕ ಸಂಗ್ರಹವನ್ನು ಹೊಂದಿದೆ. ಅದರ ವಿಶ್ವಾಸಾರ್ಹತೆ ಮತ್ತು ದೃಢೀಕರಣದ ಬದ್ಧತೆಯು ಮಲಬಾರ್ ಗೋಲ್ಡ್ & ಡೈಮಂಡ್ಸ್ ಅನ್ನು ಗ್ರಾಹಕರ ಮೆಚ್ಚಿನ ಸ್ಥಾನವನ್ನು ಗಳಿಸಿದೆ.

ಈ ಬಗ್ಗೆ ಮೆಚ್ಚುಗೆ ಮತ್ತು ಹರ್ಷ ವ್ಯಕ್ತಪಡಿಸಿರುವ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ.ಅಹ್ಮದ್, "ಡೆಲಾಯ್ಟ್‌ನಂತಹ ಜಾಗತಿಕ ವೇದಿಕೆಯಲ್ಲಿ ಗುರುತಿಸಿಕೊಂಡಿರುವುದು ನಮಗೆ ಸಿಕ್ಕಿರುವ ದೊಡ್ಡ ಗೌರವವಾಗಿದೆ. ಈ ಸಾಧನೆಯು ಗುಣಮಟ್ಟ, ಪಾರದರ್ಶಕತೆ ಮತ್ತು ಗ್ರಾಹಕರ ತೃಪ್ತಿಗೆ ನಮ್ಮ ಅಚಲವಾದ ಬದ್ಧತೆಗೆ ಸಾಕ್ಷಿಯಾಗಿದೆ. ನಾವು ಎಲ್ಲಾ ಗಡಿಗಳನ್ನು ಮೀರಿ ಈ ಸಾಧನೆ ಮಾಡಿದ್ದೇವೆ ಮತ್ತು ಆಭರಣ ಕ್ಷೇತ್ರದಲ್ಲಿ ಹೊಸ ಮಾನದಂಡಗಳನ್ನು ಹೊಂದಿಸಲು ಸಮರ್ಪಿತರಾಗಿದ್ದೇವೆ" ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಮೈಸೂರಲ್ಲಿ ಅರ್ಥಪೂರ್ಣ ಸಂವಿಧಾನ ಜಾಗೃತಿ ಜಾಥಾ

ಕುದುರೆ ಸಾರೋಟುಗಳ ಮೂಲಕ ಸಾಗಿದ ಜಾಗೃತಿ ಮೆರವಣಿಗೆ



ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ ಸಂವಿಧಾನ ಜಾಗೃತಿ ಜಾಥಾದ ಆರಂಭಕ್ಕೂ ಮುನ್ನ ವಿದೇಶಿ ಪ್ರಜೆ ಸೇರಿದಂತೆ ಸ್ಥಳೀಯರು ಸಂವಿಧಾನ ಪೀಠಿಕೆ ಓದಿದರು.

ಮೈಸೂರು, ಫೆ.20(ಬಿಎಲ್‌ಯು)– ಮೈಸೂರಿನಲ್ಲಿ ಮಂಗಳವಾರ ಕುದುರೆ ಸಾರೋಟುಗಳ ಮೂಲಕ ಸಂವಿಧಾನ ಜಾಗೃತಿ ಜಾಥಾವನ್ನು ಅರ್ಥಪೂರ್ಣವಾಗಿ ನಡೆಸಲಾಯಿತು.

ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ ಜಾಥಾಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಅಸಮಾನತೆ ಹೋಗಲಾಡಿಸಿ, ಸಮ ಸಮಾಜ ನಿರ್ಮಾಣದ ನಿಟ್ಟಿನಲ್ಲಿ ಸಂವಿಧಾನದ ಧ್ಯೇಯೋದ್ದೇಶಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಿಳಿಸುವ ಸಲುವಾಗಿ ಸಂವಿಧಾನ ಜಾಗೃತಿ ಜಾಥಾ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಭಾರತದ ಸಂವಿಧಾನ ಇಡೀ ವಿಶ್ವದಲ್ಲೇ ದೊಡ್ಡದಾದ ಲಿಖಿತ ಸಂವಿಧಾನವಾಗಿದ್ದು, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಭಾವನೆಯನ್ನು ಮೂಡಿಸಲಿದೆ. 448 ವಿಧಿಗಳನ್ನು ಹೊಂದಿದ್ದು, ಒಂದೊಂದು ವಿಧಿಯೂ ಒಂದೊಂದು ವಿಷಯವನ್ನು ಒಳಗೊಂಡಿದೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ನೇತೃತ್ವದ ಸಂವಿಧಾನ ಸಮಿತಿ ಅಂತಿಮ ರೂಪುರೇಷೆ ನೀಡಿದ್ದು, ಜಾತಿ ತಾರತಮ್ಯ, ವರ್ಣ ತಾರತಮ್ಯ, ಬಡತನ, ಹಸಿವು ತೊಲಗಿಸುವುದು ಸಂವಿಧಾನದ ಮೂಲ ಆಶಯವಾಗಿದೆ ಎಂಬುದು ಸೇರಿದಂತೆ ಹಲವು ವಿಚಾರಗಳನ್ನು ಸಂವಿಧಾನ ಜಾಗೃತಿ ಜಾಥದಲ್ಲಿ ಜನರಿಗೆ ಮನವರಿಕೆ ಮಾಡಿ ಕೊಡಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಸಹಾಯಕ ನಿರ್ದೇಶಕ ಸಿದ್ದಲಿಂಗು ಸೇರಿದಂತೆ ಸಿಬ್ಬಂದಿ ಜಾಥಾದಲ್ಲಿ ಹಾಜರಿದ್ದರು.

ಅಂಬೇಡ್ಕರ್ ಭಾವಚಿತ್ರವಿರುವ ಕುದುರೆ ಸಾರೋಟಿನ ಜಾಥಾದಲ್ಲಿ ಮೈಕ್ ಮೂಲಕ ಸಂವಿಧಾನದ ಮಹತ್ವವನ್ನು ಜನರಿಗೆ ತಿಳಿಸಿ ಹೇಳಲಾಯಿತು. ಅರಮನೆ ಉತ್ತರ ದ್ವಾರದಿಂದ ಹೊರಟ ಮೆರವಣಿಗೆ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಹಾರ್ಡಿಂಜ್ ವೃತ್ತ, ಗನ್‌ಹೌಸ್ ವೃತ್ತ, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ರಸ್ತೆ ಹಾಗೂ ವಿಶ್ವವಿದ್ಯಾನಿಲಯದ ಮೂಲಕ ಹಳೆ ಜಿಲ್ಲಾಧಿಕಾರಿ ಕಚೇರಿ ತಲುಪಿತು.

ವಿದೇಶಿ ಪ್ರಜೆಯಿಂದ ಸಂವಿಧಾನದ ಪೀಠಿಕೆ ವಾಚನ

ಸಂವಿಧಾನ ಜಾಗೃತಿ ಜಾಥದಲ್ಲಿ ವಿದೇಶಿ ಪ್ರಜೆಯೊಬ್ಬರು ಭಾರತದ ಸಂವಿಧಾನ ಪ್ರಸ್ತಾವನೆಯನ್ನು ಓದಿ ಅಚ್ಚರಿ ಮೂಡಿಸಿದರು.

ಮೈಸೂರು ಅರಮನೆ ಸೇರಿದಂತೆ ಪ್ರವಾಸಿ ತಾಣಗಳ ವೀಕ್ಷಣೆಗೆ ಆಗಮಿಸಿರುವ ಜರ್ಮನಿಯ ಪತ್ರಕರ್ತ ಎಬಿರಾರ್ಡ್ ಹನ್ನಿ, ಭಾರತದ ಸಂವಿಧಾನ ಜಾಗೃತಿ ಜಾಥಾ ವಿಚಾರವನ್ನು ಆಯೋಜಕರಿಂದ ತಿಳಿದು, ಸ್ಥಳೀಯರೊಡನೆ ಸೇರಿ ಇಂಗ್ಲಿಷ್‌ನಲ್ಲಿದ್ದ ಭಾರತದ ಸಂವಿಧಾನ ಪ್ರಸ್ತಾವನೆಯನ್ನು ಓದಿದರು. ನಂತರ ಪ್ರತಿಕ್ರಿಯಿಸಿದ ಎಬಿರಾರ್ಡ್ ಹನ್ನಿ, ಸಮಾನತೆಯ ಸಮಾಜ ನಿರ್ಮಾಣ ಮಾಡುವ ಬಗ್ಗೆ ಭಾರತದ ಸಂವಿಧಾನದಲ್ಲಿ ಮಹತ್ವದ ಬಹಳಷ್ಟು ಅಂಶಗಳಿವೆ ಎಂಬುವುದನ್ನು ಕೇಳಿದ್ದೆ. ಆದರೆ ಈಗ ಎಲ್ಲರ ಸಮ್ಮುಖದಲ್ಲಿ ಸಂವಿಧಾನದ ಪ್ರಸ್ತಾವನೆ ಓದಿ ನನಗೆ ಮನವರಿಕೆಯಾಯಿತು. ಇದರಿಂದ ನನಗೆ ತುಂಬಾ ಸಂತೋಷವಾಯಿತು ಎಂದರು.

50ನೇ ಖಜುರಾಹೋ ಅಂತರರಾಷ್ಟ್ರೀಯ ನೃತ್ಯೋತ್ಸವದಲ್ಲಿ ಕೃಪಾ ಫಡ್ಕೆ ನೃತ್ಯ ಪ್ರದರ್ಶನ



ಮೈಸೂರು, ಫೆ. 20– ಮಧ್ಯಪ್ರದೇಶ ಸರ್ಕಾರದ ಅಂತರರಾಷ್ಟ್ರೀಯ 50ನೇ ಖಜುರಾಹೋ ನೃತ್ಯ ಸಮಾರೋಪ ಸಮಾರಂಭದಲ್ಲಿ ಮೈಸೂರಿನ ನೃತ್ಯಗಿರಿ ತಂಡವು ಭಾಗವಹಿಸಲಿದ್ದು, ನೃತ್ಯಗಿರಿ ತಂಡದ ನಿರ್ದೇಶಕರಾದ ಕೃಪಾ ಫಡ್ಕೆ ಫೆ.26ರಂದು ಕಾರ್ಯಕ್ರಮ ನೀಡಲಿದ್ದಾರೆ. ತಂಡದಲ್ಲಿ ವಿದುಷಿ ರೂಪಶ್ರೀ ಮಧುಸೂಧನ್ (ಬೆಂಗಳೂರು)–ನಟುವಾಂಗ, ವಿದ್ವಾನ್ ಉಡುಪಿ ಶ್ರೀನಾಥ್ (ಟ್ರಿವಾಂಡ್ರಮ್)–ಹಾಡುಗಾರಿಕೆ, ವಿದ್ವಾನ್ ನಾಗೈ ಪಿ ಶ್ರೀರಾಮ್ (ಚೆನ್ನೈ)–ಮೃದಂಗ ಹಾಗೂ ವಿದ್ವಾನ್ ಎ.ಪಿ.ಕೃಷ್ಣಪ್ರಸಾದ್ (ಮೈಸೂರು)–ಕೊಳಲು ಹಾಗೂ ವಿದ್ಯಾರ್ಥಿನಿಯರಾದ ಶ್ರೀಪ್ರಿಯಾ, ಸುರಕ್ಷಾ ದೀಕ್ಷಿತ್, ಪೂಜಾ ಸುಗಮ್, ಸಮಿಕ್ಷ ಮನುಕುಮಾರ್, ಸ್ಫೂರ್ತಿ ಎಸ್.ರಾವ್ ಭಾಗವಹಿಸಲಿದ್ದಾರೆ.

ಮೈಸೂರು ವಿವಿ ತಂಡಕ್ಕೆ ಖೋ ಖೋ ಪಂದ್ಯಾವಳಿಯಲ್ಲಿ ಕಂಚಿನ ಪದಕ



ಮೈಸೂರು, ಫೆ. 20– 2023–24ನೇ ಸಾಲಿನ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಖೋ ಖೋ ಪಂದ್ಯಾವಳಿಯು ಫೆಬ್ರವರಿ 15ರಿಂದ 18ರವರೆಗೆ ಪುಣೆಯ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾನಿಲಯದಲ್ಲಿ ನಡೆಯಿತು. ಈ ಪಂದ್ಯಾವಳಿಯಲ್ಲಿ ಸುಮಾರು 15 ವಿಶ್ವವಿದ್ಯಾನಿಲಯಗಳು ಭಾಗವಹಿಸಿದ್ದವು.

ಪಂದ್ಯಾವಳಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಿಳೆಯರ ಖೋ–ಖೋ ತಂಡವು ಕಂಚಿನ ಪದಕ ಪಡೆದುಕೊಂಡಿತು. ವಿಜೇತ ತಂಡಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್.ರೇಖಾ ಅಭಿನಂದಿಸಿದರು. ಈ ವೇಳೆ ಐಶ್ವರ್ಯ, ಮೇಘನಾ, ವಿನೂತಾ .ಎಸ್, ನಾಗವೇಣಿ .ಎ.ಎಸ್, ನಿಸರ್ಗ .ಕೆ.ಎಂ, ಅರ್ಪಿತಾ.ಆರ್, ಸಹನಾ.ಎಂ, ಪ್ರಿಯಾ ಎಂ, ಮಾದಲಾಂಬಿಕಾ ಎಂ, ವಿದ್ಯಾ.ಎಲ್, ಐಶ್ವರ್ಯ ವಿ., ಶ್ರೀ ಲೀಲಾ.ಎಸ್, ಕೀರ್ತನ.ಎಸ್ ಮೋನಿಕಾ ಎಲ್, ಡಾ.ಕೆ.ಎಸ್ ಭಾಸ್ಕರ್. (ವ್ಯವಸ್ಥಾಪಕರು), ಡಾ.ಸಿ.ವೆಂಕಟೇಶ್ ನಿರ್ದೇಶಕರು, ಶ್ರೀಮತಿ ರೇಖಾ ಕೆ.ಎಸ್ ಹಣಕಾಸು ಅಧಿಕಾರಿಗಳು, ಕಾಂತರಾಜು ಬಿ ಡಿ(ತರಬೇತುದಾರರು) ತೇಜಸ್ವಿನಿ ಕೆ.ಎಸ್ (ನಾಯಕಿ) ಉಪಸ್ಥಿತರಿದ್ದರು.

ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ


ಮೈಸೂರು,ಫೆ.20–ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ನಾಲ್ಕು ವರ್ಷಗಳ ಪೂರ್ಣಕಾಲಿಕ ಬಿ.ಎ ಆನರ್ಸ್, ಬಿ.ಎಸ್ಸಿ ಆನರ್ಸ್ ಮತ್ತು ದ್ವಿ–ಪದವಿ ಬಿ.ಎಸ್ಸಿ–ಬಿ.ಎಡ್ ವಿಷಯಗಳ ಪದವಿ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಕೋರ್ಸ್‌ಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಗುಣವಾಗಿ ರೂಪಿಸಿ ವಿನ್ಯಾಸಗೊಳಿಸಲಾಗಿದೆ. ಇದರ ಗುರಿಯು ಉನ್ನತ ಪ್ರೇರಣೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಹೊಂದಿರುವ, ಚಿಂತನಶೀಲ ಹಾಗೂ ಸ್ವಕಲಿಕೆಯ ಸಾಮರ್ಥ್ಯವುಳ್ಳ ಯುವ ನಾಗರಿಕರನ್ನು ರೂಪಿಸುವುದಾಗಿದೆ. ವಿಶೇಷ ಅಧ್ಯಯನವನ್ನೊಳಗೊಂಡ ಶೈಕ್ಷಣಿಕ ಶಿಸ್ತು, ಉದ್ಯೋಗದ ಸಿದ್ಧತೆಯ ಭಾಗವಾಗಿ ಆಳವಾದ ಇಂಟರ್ನ್‌ಶಿಪ್‌ನೊಂದಿಗೆ ಸಂಯೋಜಿಸಲಾದ ಅಂತರ್–ಶಿಸ್ತೀಯ ಆಯಾಮ, ಸಾಮರ್ಥ್ಯವೃದ್ಧಿಗಾಗಿ ಬುನಾದಿ ಕೋರ್ಸುಗಳು ಮತ್ತು ವಿಸ್ತೃತವಾದ ಆಸಕ್ತಿಯ ವಿಷಯಗಳ ಶೋಧನೆಗೆ ಪೂರಕವಾದ ಆಯ್ಕೆಗೆ ಅವಕಾಶವಿದೆ.

ವಿದ್ಯಾರ್ಥಿಗಳಲ್ಲಿ ಸಶಕ್ತ ಶಿಕ್ಷಣದೊಂದಿಗೆ ಪರಿಣತಿ ಮತ್ತು ಸಾಮಾಜಿಕ ಬದ್ಧತೆಯನ್ನು ಬೆಳೆಸುವ ಮೂಲಕ ಅರ್ಥಪೂರ್ಣ ವೃತ್ತಿ ಅವಕಾಶಗಳಿಗೆ ಕಾರಣವಾಗುವ ಗುರಿಯನ್ನು ಹೊಂದಿದೆ. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮಾರ್ಚ್ 6, ಹೆಚ್ಚಿನ ಮಾಹಿತಿಗೆ ಮೊ. 8971889988, ಇ–ಮೇಲ್: outreach@apu.edu.in, ವೆಬ್‌ಸೈಟ್: www. azimpremjiuniversity.edu.in ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಎಂ.ವಿ.ಶೇಷಾದ್ರಿ



ಮೈಸೂರು, ಫೆ.20– ನಗರದ ಸರಸ್ವತಿಪುರಂ ಬಡಾವಣೆ ನಿವಾಸಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಲೇಟ್ ಎಂ.ಎಸ್.ವೆಂಕಟಾಚಲಯ್ಯ ಅವರ ಪುತ್ರ ಎಂ.ವಿ.ಶೇಷಾದ್ರಿ ಅವರು ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಅವಿವಾಹಿತರಾಗಿದ್ದ ಮೃತರು ತಮ್ಮ ಕಣ್ಣುಗಳನ್ನು ಲಯನ್ಸ್ ಕ್ಲಬ್‌ಗೆ ದಾನ ಮಾಡಿದ್ದಾರೆ. ಇವರು ತಾಯಿ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಹಾರ ಧಾನ್ಯಗಳ ಕೃಷಿಗೆ ಹೆಚ್ಚಿನ ಗಮನ ಅಗತ್ಯ: ಸುತ್ತೂರು ಶ್ರೀ ಅಭಿಮತ



ವಿಜಯಪುರ ಜಿಲ್ಲೆ ಬೊಮ್ಮನಹಳ್ಳಿ ಗ್ರಾಮದಲ್ಲಿ ವಿದೇಶಗಳಿಗೆ ರಫ್ತು ಮಾಡುವ ಒಣದ್ರಾಕ್ಷಿ ಸಂಸ್ಕರಣಾ ಘಟಕ ವಿಪಿಬಿ ಎಕ್ಸ್‌ಪೋರ್ಟ್ಸ್ ಕಂಪನಿಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮಿಗಳು, ಶ್ರೀ ವಿಠ್ಠಲಗೌಡ ಬಿರಾದಾರ್ ಹಾಗೂ ಕುಟುಂಬವರ್ಗದವರುಗಳಿದ್ದಾರೆ.

ಮೈಸೂರು, ಫೆ. 20– ಆಹಾರ ಧಾನ್ಯಗಳನ್ನು ಒದಗಿಸುವ ಕೃಷಿಯೆಡೆಗೆ ಹೆಚ್ಚಿನ ಗಮನ ಕೊಡಬೇಕು ಎಂದು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ತಿಳಿಸಿದರು.

ಫೆಬ್ರವರಿ 16ರಂದು ವಿಜಯಪುರ ಜಿಲ್ಲೆ ಬೊಮ್ಮನಹಳ್ಳಿ ಗ್ರಾಮದಲ್ಲಿ ವಿದೇಶಗಳಿಗೆ ರಫ್ತು ಮಾಡುವ ಒಣದ್ರಾಕ್ಷಿ ಸಂಸ್ಕರಣಾ ಘಟಕ ವಿಪಿಬಿ ಎಕ್ಸ್‌ಪೋರ್ಟ್ಸ್ ಕಂಪನಿಗೆ ಚಾಲನೆ ನೀಡಿ, ನಂತರ ಶ್ರೀ ವಿಠ್ಠಲಗೌಡ ಬಿರಾದರ್‌ರವರ ಗುರುದೇವಪುರ ತೋಟದಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಅವರು ಮಾತನಾಡಿದರು.

ಮನುಷ್ಯ ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳದೆ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಪರಿಸರಕ್ಕೆ ಹಾನಿಯಾದಷ್ಟು ಮನುಷ್ಯನೇ ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇತ್ತೀಚೆಗೆ ಭಾರತ ರತ್ನ ಪುರಸ್ಕಾರಕ್ಕೆ ಭಾಜನರಾಗಿರುವ ಸ್ವಾಮಿನಾಥನ್‌ರವರು ಹೇಳುವಂತೆ ಮುಂದಿನ ದಿನಮಾನಗಳಲ್ಲಿ ಬಂದೂಕುಗಳನ್ನು ಖರೀದಿ ಮಾಡಬಹುದು. ಆದರೆ ಆಹಾರ ಧಾನ್ಯಗಳನ್ನು ಖರೀದಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಜನರು ಹೆಚ್ಚು ಕೃಷಿಗೆ ಆದ್ಯತೆ ನೀಡಬೇಕು. ವಿಠ್ಠಲಗೌಡರು ಇಲ್ಲಿ ಗಿಡಮರಗಳನ್ನು ಕಡಿಯದೇ ಪರಿಸರಕ್ಕೆ ಪೂರಕವಾದ ಕೃಷಿ ಮಾಡುತ್ತಿದ್ದಾರೆ. ಅವರ ತೋಟದಲ್ಲಿ ಬೆಳೆದ ಹಣ್ಣು ಹಂಪಲುಗಳು ಮೊದಲು ಹಕ್ಕಿಪಕ್ಷಿಗಳಿಗೆ ಸಲ್ಲುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮೀಜಿ, ಶ್ರೀ ಹರ್ಷಾನಂದ ಸ್ವಾಮೀಜಿ, ಶ್ರೀ ವಿಠ್ಠಲಗೌಡ ಬಿರಾದಾರ್ ಮತ್ತು ಕುಟುಂಬವರ್ಗದವರು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.

ಪಿಎಚ್.ಡಿ ಪದವಿ



ಮೈಸೂರು: ಡಾ.ಎಸ್.ಮರಿಗೌಡ ಅವರ ಮಾರ್ಗದರ್ಶನದಲ್ಲಿ ಎಸ್. ಸಹನಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ




ಮೈಸೂರು,ಫೆ.20–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ–264 ಅಂಗವಾಗಿ ವಿದ್ವಾನ್ ಕುನ್ನಕ್ಕುಡಿ ಎಂ.ಬಾಲಮುರಳಿಕೃಷ್ಣ ಅವರಿಂದ ಗಾಯನ ಕಾರ್ಯಕ್ರಮವನ್ನು ಫೆ.24ರಂದು ಸಂಜೆ 6 ಗಂಟೆಗೆ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು. ಪಕ್ಕವಾದ್ಯದಲ್ಲಿ ವಿದ್ವಾನ್ ಭಾಸ್ಕರ್–ವಯೋಲಿನ್, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜಂ–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಫೆ.24, ಎಂ.ವಿ.ನಾಗೇಂದ್ರಬಾಬು ಅವರ ವ್ಯಂಗ್ಯಚಿತ್ರ ಸಿಂಹಾವಲೋಕನ ಕೃತಿ ಬಿಡುಗಡೆ



ನಾಗೇಂದ್ರಬಾಬು



ಮೈಸೂರು, ಫೆ. 20– ಬೆಂಗಳೂರಿನ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಖ್ಯಾತ ವ್ಯಂಗ್ಯ ಚಿತ್ರಕಾರ, ಫುಲ್ ಬ್ರೈಟರ್ ಎಂ.ವಿ.ನಾಗೇಂದ್ರಬಾಬು ರಚಿಸಿರುವ 'ವ್ಯಂಗ್ಯಚಿತ್ರ ಸಿಂಹಾವಲೋಕನ' ಕೃತಿ ಬಿಡುಗಡೆ ಸಮಾರಂಭ ಫೆ.24ರಂದು ಸಂಜೆ 5.30 ಗಂಟೆಗೆ ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಉದ್ಘಾಟಿಸುವರು. ಸಂಸದ ಪ್ರತಾಪ್ ಸಿಂಹ ಕೃತಿ ಬಿಡುಗಡೆ ಮಾಡುವರು. ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಕೃತಿ ಕುರಿತು ಮಾತನಾಡುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷ ವಿ.ಆರ್.ಸಿ.ಶೇಖರ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕರ್ನಾಟಕ ಮುಕ್ತ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಎಸ್.ರಾಮಪ್ರಸಾದ್, ಲಕ್ಷ್ಮೀನರಸಿಂಹ ದೇವಸ್ಥಾನ, ಯದುಗಿರಿ ಮಠದ ಸಿಇಓ ಕೆ.ಆರ್. ಯೋಗಾನರಸಿಂಹನ್, ಯೋಗ ವಿತ್ ಶ್ರೀನಾಥ್ ಸಂಸ್ಥಾಪಕ ಶ್ರೀನಾಥ್ ಭಾಗವಹಿಸುವರು.


ಕನ್ನಡ ಬುಕ್ ಆಫ್ ರೆಕಾರ್ಡ್‌ಗೆ ಸಿ.ವಾಣಿ ರಾಘವೇಂದ್ರ ದಾಖಲು





ಮೈಸೂರು: ಕವಯತ್ರಿ, ಸಾಹಿತಿ ಹಾಗೂ ಸದ್ವಿವೇಕ ಶಾಲೆಯ ಶಿಕ್ಷಕಿ ಸಿ.ವಾಣಿ ರಾಘವೇಂದ್ರ ಅವರು ಕನ್ನಡ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆಯಾಗಿದ್ದಾರೆ. ಹಾವೇರಿಯ ಬಸವ ಕೇಂದ್ರದಲ್ಲಿ ಕರುನಾಡ ಹಣತೆಯ ಸಹಯೋಗದಿಂದ ನಡೆಸಿದ್ದ ಶರಣ ಶರಣೆಯರ ಕುರಿತು ಕವಿತೆ ಬರೆಯುವ ಕಾರ್ಯಕ್ರಮದಲ್ಲಿ ಸಿ.ವಾಣಿ ರಾಘವೇಂದ್ರ ಅವರು 20 ನಿಮಿಷ 24 ಸೆಕೆಂಡ್ ಕಾಲದಲ್ಲಿ ಕವಿತೆ ಬರೆದು 'ಕನ್ನಡ ಬುಕ್ ಆಫ್ ರೆಕಾರ್ಡ್'ನಲ್ಲಿ ದಾಖಲೆ ನಿರ್ಮಿಸಿದ್ದಾರೆ ಎಂದು ಕನ್ನಡ ಬುಕ್ ಆಫ್ ರೆಕಾರ್ಡ್ ಸಂಸ್ಥೆಯ ಸಂಸ್ಥಾಪಕ ಮಂಜುನಾಥ್ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.2.2024 ಬುಧವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ :** ಪಕ್ಷದ ಬೃಹತ್ ಬೈಕ್ ಜಾಥಾ, ರವಿಕೃಷ್ಣಾರೆಡ್ಡಿ ಅವರಿಂದ ಬೃಹತ್ ಸಭೆ, ಸ್ಥಳ: ಪುರಭವನ ಆವರಣ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಆರ್‌ವಿಪಿಬಿ ಪದವಿಪೂರ್ವ ಕಾಲೇಜು:** ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಎನ್.ಪ್ರಸಾದ್, ಅಧ್ಯಕ್ಷತೆ: ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಉಪಸ್ಥಿತರು: ಟಿ.ಪಿ.ದಿನೇಶ್, ಪಿ.ಹರಿಪ್ರಸಾದ್, ಅಂತ್ರಿ ಮಲ್ಲಿಕಾರ್ಜುನ, ಡಾ.ಸಿ.ಕೆ.ರೇಣುಕಾರ್ಯ, ಕೆ.ಎಂ.ಮಹೇಂದ್ರ, ಸ್ಥಳ: ಟೂರಿಸಂ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಮೈಸೂರು ಜಿಲ್ಲಾ ಸಮಿತಿ :** ಎಸ್‌ಯುಸಿಐ ಸಂಸ್ಥಾಪಕ ಕಾಮ್ರೇಡ್ ಶಿವದಾಸ್ ಘೋಷ್ ರಚಿಸಿರುವ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭ, ಸ್ಥಳ: ಎಸ್‌ಯುಸಿಐ ಪಕ್ಷದ ಕಚೇರಿ, ಡಿ. ಸುಬ್ಬಯ್ಯ ರಸ್ತೆ, ಬೆಳಗ್ಗೆ 11ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ :** ವಚನ ಸಾಹಿತ್ಯ ಪ್ರಬಂಧ ಸ್ಪರ್ಧೆ ಹಾಗೂ ಚಿಂತನಾಗೋಷ್ಠಿ, ಉದ್ಘಾಟನೆ : ಶ್ರೀ ಛಾಯಾದೇವಿ ವಿದ್ಯಾನಿಕೇತನ ಟ್ರಸ್ಟ್ ಅಧ್ಯಕ್ಷ ಡಾ. ಬಾನುಪ್ರಕಾಶ್, ಶ್ರೀ ರಾಮಕೃಷ್ಣ ವಿದ್ಯಾಶಾಲೆ ನಿವೃತ್ತ ಪ್ರಾಧ್ಯಾಪಕ ಎಸ್.ಎಸ್. ರಮೇಶ್ ಅವರಿಂದ ಆಧುನಿಕ ಬದುಕಿನ ಸವಾಲುಗಳು ಮತ್ತು ವಚನ ಸಾಹಿತ್ಯ ಕುರಿತು ಉಪನ್ಯಾಸ, ಪ್ರಶಸ್ತಿ ಪತ್ರ ವಿತರಣೆ : ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಅಂತೋಣಿ ಪಾಲ್‌ರಾಜ್, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ, ರಾಜೇಂದ್ರನಗರ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ಹಗಲು–ರಾತ್ರಿ ಬಲಿಪ್ರಧಾನ ಉತ್ಸವ, ಸಂಜೆ 6.30ಕ್ಕೆ ಗಿರಿಜಾ ಕಲ್ಯಾಣ ಮಹೋತ್ಸವ ನಂತರ ವೃಷಭ ವಾಹನೋತ್ಸವ, ಸ್ಥಳ: ದೇವಸ್ಥಾನ, ಅರಮನೆ ಆವರಣ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಸುಮಧ್ವ–ವಿಜಯ ಎಕ್ಸ್‌ಪ್ರೆಸ್, ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ, ವಿದುಷಿ ಶ್ರೀಮತಿ ಶುಭಾ ಸಂತೋಷ್, ಪಂಡಿತ್ ಪವಮಾನಾಚಾರ್ಯ ಕಲ್ಲಾಪುರ ಅವರಿಂದ ಸುಮಧ್ವ ವಿಜಯ 7 ಮತ್ತು 8ನೇ ಸರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಕೆ.ಆರ್. ಯಲ್ಲಪ್ಪರಾಯರ ಶ್ರೀ ಯಲ್ಲಮ್ಮನವರ ದೇವಸ್ಥಾನ :** ಬೇವಿನಮರದ ಶ್ರೀ ಯಲ್ಲಮ್ಮನವರ 76ನೇ ವರ್ಷದ ಮಹೋತ್ಸವ, ಬೆಳಗ್ಗೆ 11.30 ರಿಂದ ಮೇಷ ಲಗ್ನದಲ್ಲಿ ದೇವಿಗೆ ಅರಿಶಿನ, ಕುಂಕುಮ ಲೇಪನ, ಸ್ಥಳ: ದೇವಸ್ಥಾನ, ನಾಲಾ ಬೀದಿ, ಕೃಷ್ಣರಾಜ ಮೊಹಲ್ಲಾ.

■ **ಭಾವಿ ಸಮೀರ ಶ್ರೀ ವಾದಿರಾಜ ಸೇವಾ ಸಮಿತಿ, ಶ್ರೀ ಕೃಷ್ಣಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ಭಾವೀ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮರ ಜಯಂತಿಯ ಪರ್ವದಿನ, ಸಂಜೆ 4.30ಕ್ಕೆ ಭಜನಾ ತಂಡದ ಸದಸ್ಯರಿಂದ ಶ್ರೀ ಲಕ್ಷ್ಮೀ ಶೋಬಾನೆ, ಸಂಜೆ 5ಕ್ಕೆ ಸಭಾ ಕಾರ್ಯಕ್ರಮ, ಸಂಜೆ 7.30ಕ್ಕೆ ಮಂತ್ರತುಲ್ಯಕೃತಿ 'ಶ್ರೀ ಲಕ್ಷ್ಮೀ ಶೋಬಾನೆ'ಯ ವಿಶೇಷತೆ, ವಿಶಿಷ್ಟತೆ, ಸಂಜೆ 7.30ಕ್ಕೆ ರಂಗಪೂಜೆ : ಶ್ರೀ ಕೃಷ್ಣನಿಗೆ, ಸಂಜೆ 5.30ಕ್ಕೆ ವಿಶೇಷ ಉಪನ್ಯಾಸ, ಉಪಸ್ಥಿರು : ವಿದ್ವಾನ್ ಡಾ. ವಸಂತ ಭಾರದ್ವಾಜ್ ಕಬ್ಬಿನಾಲೆ,


■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ 87ನೇ ವರ್ಷದ ಆರಾಧನಾ ಮಹೋತ್ಸವ, ಪ್ರತಿನಿತ್ಯ ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಕಠೋಪನಿಷತ್‌ನಲ್ಲಿನ ಸಂವಾದ, ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಹಸ್ತಾಮಲಕ ಸ್ತೋತ್ರ ಕುರಿತು ಪ್ರವಚನ, ಸ್ಥಳ: ದೇವಸ್ಥಾನ, ಉಪ್ಪಿನಕೇರಿ, ಮಂಡಿ ಮೊಹಲ್ಲಾ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, 9.05 ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುವವರು ಡಾ.ಶರಣಪ್ಪ ವಿ.ಹಲಸೆ, 10.00 ಕೆ.ಎನ್.ಸುರೇಂದ್ರ–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಶಾಂತಲಾ ವಟ್ಟಂ, 3.00 ಎನ್. ವಿಜಯ ಶಿವ–ಹಾಡುಗಾರಿಕೆ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಮೊದಲ ಡಾಕ್ಟರೇಟ್ ಪದವಿ ಪಡೆದ ಆದಿವಾಸಿ ಜನಾಂಗದ ಪ್ರತಿಭೆ ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ, ಪ್ರಸ್ತುತಿ–ಡಾ.ಮಾಧವಿ ಭಂಡಾರಿ, 6.50 ಕೃಷಿರಂಗ–ಹೈನುಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಕುರಿತು ಸಂವಾದ. ಭಾಗವಹಿಸುತ್ತಾರೆ ಕೃಷಿಕ ದಂಪತಿ ದಿಲೀಪ್ ಸಿ. ಮತ್ತು ಶಾಂತಾ ಎಸ್., 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಸಂಗೀತ, ಪಂಡಿತ್ ಎಂ.ವೆಂಕಟೇಶ್‌ಕುಮಾರ್– ಗಾಯನ, 10.00 ಹಳ್ಳೀಹಾಡು, 10.30 ಸವಿನೆನಪು

ಬಿಎಸ್‌ವೈ ಕೈ ಸೇರಿದ ಪ್ರತಾಪ್ ಸಿಂಹ ಸಾಧನೆ ಕೈಪಿಡಿ



ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಮಂಗಳವಾರ ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಧುರೀಣ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ತಮ್ಮ 10 ವರ್ಷದ ಸಾಧನೆಯ ಕೈಪಿಡಿಯನ್ನು ನೀಡಿ, ಅವರ ಆಶೀರ್ವಾದ ಪಡೆದರು.

ಮೈಸೂರಲ್ಲಿ ಹೆಚ್ಚುತ್ತಿರುವ ತಾಪಮಾನ

ಕೆಎಸ್‌ಎನ್‌ಡಿಎಂಸಿ ವರದಿಯಲ್ಲಿ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ದಾಖಲು



ಮೈಸೂರು,ಫೆ20(ಪಿಎಂ)– ಮೈಸೂರಲ್ಲಿ ಬಿಸಿಲಿನ ಝಳ ಹೆಚ್ಚುತ್ತಿದ್ದು, ಜಿಲ್ಲೆಯೂ ಸೇರಿದಂತೆ ಇಡೀ ರಾಜ್ಯದಲ್ಲಿ ಬೇಸಿಗೆ ವಾತಾವರಣ ಈಗಾಗಲೇ ಪ್ರಾರಂಭ ಗೊಂಡಿದೆ. ಮಾರ್ಚ್‌ಗೆ ಬೇಸಿಗೆ ಕಾಲ ರಾಜ್ಯದಲ್ಲಿ ಆರಂಭವಾಗುವುದು ಸಹಜವಾಗಿದೆಯಾದರೂ ಈ ಬಾರಿ ಮುಂಗಡವಾಗಿಯೇ ಬಿಸಿಲಿನ ತಾಪ ಜನತೆಯನ್ನು ಬಾಧಿಸತೊಡಗಿದೆ.

ಮೈಸೂರು ಜಿಲ್ಲೆಯಲ್ಲಿ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಗಡಿ ಮುಟ್ಟಿದ್ದು, ದಿನದಿಂದ ದಿನಕ್ಕೆ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿದೆ. ಸೋಮವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಮೈಸೂರಿನಲ್ಲಿ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಗಡಿಯನ್ನು ಮುಟ್ಟಿದೆ ಎಂದು ಹವಾಮಾನ ಮೇಲ್ವಿಚಾರಣೆ ನಡೆಸುವ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ(ಕೆಎಸ್‌ಎನ್‌ಡಿಎಂಸಿ) ದಾಖಲಿಸಿದೆ.

ಫೆ.18ರ ಸೋಮವಾರ ಬೆಳಗ್ಗೆ 8.30 ರಿಂದ ಫೆ.19ರ ಮಂಗಳವಾರ ಬೆಳಗ್ಗೆ 8.30ರ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ತಾಪಮಾನ 35.0 ಡಿಗ್ರಿ ಸೆಲ್ಸಿಯಸ್ ಗಡಿಗೆ ಮುಟ್ಟಿದೆ (24 ಗಂಟೆಗಳ ಅವಧಿಯ ರಾಜ್ಯದ ಹವಾಮಾನ ಕುರಿತ ಕೆಎಸ್‌ಎನ್‌ಡಿಎಂಸಿ ದೈನಂದಿನ ವರದಿ). ಇದೇ ಅವಧಿಯಲ್ಲಿ (ಅದೇ ವರದಿಯಂತೆ) ನೆರೆಯ ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ ತಾಪಮಾನ 34.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಚಾಮರಾಜನಗರದಲ್ಲಿ 34.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಬೇಸಿಗೆಯಲ್ಲಿಯೂ ತಾಪಮಾನ ತಗ್ಗಿಸುವ ತಾಣ ಎಂದೇ ಕರೆಯುವ ಕೊಡಗು ಜಿಲ್ಲೆಯ ಗರಿಷ್ಠ ತಾಪಮಾನವು 33.7 ಡಿಗ್ರಿ ಸೆಲ್ಸಿಯಸ್ ಆಗಿದ್ದು, ಕನಿಷ್ಠ ತಾಪಮಾನವು ನೆರೆ ಜಿಲ್ಲೆಗಳಿಗಿಂತ ಹೆಚ್ಚಾಗಿದೆ.

ಕೆಎಸ್‌ಎನ್‌ಡಿಎಂಸಿ ಪ್ರಕಾರ, ಸೋಮವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಕನಿಷ್ಠ ತಾಪಮಾನ 20.2 ಡಿಗ್ರಿ ಸೆಲ್ಸಿಯಸ್ ಆಗಿದ್ದರೆ, ಮೈಸೂರು ಜಿಲ್ಲೆಯಲ್ಲಿ ಕನಿಷ್ಠ ತಾಪಮಾನ 19.2 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ 18 ಡಿಗ್ರಿ ಸೆಲ್ಸಿಯಸ್, ಚಾಮರಾಜನಗರ ಜಿಲ್ಲೆಯಲ್ಲಿ 18.6 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಮೈಸೂರಿನಲ್ಲಿ ಫೆಬ್ರವರಿ ತಿಂಗಳಲ್ಲಿ ಅತ್ಯಧಿಕ ತಾಪಮಾನವು 1931ರ ಫೆ.28ರಂದು ವರದಿಯಾಗಿದ್ದು, ಅಂದು 36.1 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಅತ್ಯಂತ ಕಡಿಮೆ ತಾಪಮಾನವು 2006ರ ಫೆ.14ರಂದು (8.6 ಡಿಗ್ರಿ ಸೆಲ್ಸಿಯಸ್) ದಾಖಲಾಗಿರುವುದನ್ನು ಭಾರತೀಯ ಹವಾಮಾನ ಇಲಾಖೆಯ ದಾಖಲೆಗಳಲ್ಲಿ ಕಾಣಬಹುದು. ಕೆಎಸ್‌ಎನ್‌ಡಿಎಂಸಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ದಾಖಲಿಸಿರುವ ಸೋಮವಾರದ ತಾಪಮಾನದ ಮಟ್ಟವನ್ನು ಗಮನಿಸಿದರೆ ಮುಂದಿನ ದಿನಗಳಲ್ಲಿ ತಾಪಮಾನದ ಮಟ್ಟ ಹೆಚ್ಚಾಗುವ ಕಳವಳ ಇದೆ. ಮೈಸೂರಿನಲ್ಲಿ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಾಗರಿಕರು ಎಳನೀರು ಸೇರಿದಂತೆ ತಂಪು ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಮಧ್ಯಾಹ್ನದ ವೇಳೆಯಂತೂ ಬಿಸಿಲಿನ ಝಳದ ಹಿನ್ನೆಲೆಯಲ್ಲಿ ಹಲವರು ಹೊರ ಬರುವುದನ್ನೂ ಕಡಿಮೆ ಸಹ ಮಾಡಿದ್ದಾರೆ. ಮಧ್ಯ ಮತ್ತು ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ತಾಪಮಾನವು ಗರಿಷ್ಠ 36 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದ್ದು, ಈ ಭಾಗಗಳಿಗೆ ಹೋಲಿಸಿದರೆ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳ ವಾತಾವರಣ ತಂಪಾಗಿಯೇ ಇದೆ. ಕೆಎಸ್‌ಎನ್‌ಡಿಎಂಸಿ ದಾಖಲೆಗಳ ಪ್ರಕಾರ ಬಾಗಲಕೋಟೆಯಲ್ಲಿ ತಾಪಮಾನವು ಗರಿಷ್ಠ 37.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಕಲಬುರಗಿ ಮತ್ತು ಗದಗದಲ್ಲಿ 36.8 ಡಿಗ್ರಿ ಸೆಲ್ಸಿಯಸ್ ಮತ್ತು ರಾಯಚೂರಿನಲ್ಲಿ 37.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ವಾಸ್ತವದಲ್ಲಿ ಮೈಸೂರು ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಮುಟ್ಟಿಲ್ಲ



ಮೈಸೂರು,ಫೆ.20(ಪಿಎಂ)– ಇಡೀ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಸರಾಸರಿ ಅಂಕಿ ಅಂಶದಲ್ಲಿ ಹವಾಮಾನ ಮಾಪನ ಮಾಡಿರುವ ಹಿನ್ನೆಲೆಯಲ್ಲಿ ಕೆಎಸ್‌ಎನ್‌ಡಿಎಂಸಿ ವರದಿಯಲ್ಲಿ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಆದರೆ ವಾಸ್ತವದಲ್ಲಿ ಆ ಮಟ್ಟಕ್ಕೆ ಮೈಸೂರು ಜಿಲ್ಲೆಯ ತಾಪಮಾನ ತಲುಪಿಲ್ಲ. ಒಂದು ವೇಳೆ ತಲುಪಿದ್ದರೆ ಮಳೆಯಾಗಬೇಕಿತ್ತು ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದ ಮೈಸೂರು ಜಿಲ್ಲೆಯ ಹವಾಮಾನ ಅವಲೋಕಿಸಿದ್ದು, ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ದಾಟಿದರೆ ಮೈಸೂರಿನಲ್ಲಿ ಮಳೆಯಾಗುವ ವಾಡಿಕೆ ಇದೆ. ಈ ಮಟ್ಟದ ತಾಪಮಾನಕ್ಕೆ ಮೈಸೂರು ಜಿಲ್ಲೆ ಮುಟ್ಟಿಲ್ಲ. ಇಷ್ಟು ಏರಿಕೆಯಾಗಿದ್ದರೆ ಈಗಾಗಲೇ ನೀರಿನ ಅಭಾವ ಸೃಷ್ಟಿಯಾಗುತ್ತಿತ್ತು. ಮಾರ್ಚ್ ತಿಂಗಳಾಂತ್ಯದಲ್ಲಿ ಗರಿಷ್ಠ ತಾಪಮಾನವು 35 ಡಿಗ್ರಿ ಸೆಲ್ಸಿಯಸ್ ಗಡಿ ಮುಟ್ಟುವುದು ಮೈಸೂರಲ್ಲಿ ಸಾಮಾನ್ಯ. ಪ್ರಸ್ತುತ ತೇವಾಂಶ ಭೂಮಿಯಲ್ಲಿ ಇನ್ನೂ ಇದೆ ಎಂದು ಹೇಳಿದರು.

ಕೆಎಸ್‌ಎನ್‌ಡಿಎಂಸಿ ಡಿಜಿಟಲ್ ತಂತ್ರಜ್ಞಾನ ಬಳಸುವ ಹಿನ್ನೆಲೆಯಲ್ಲಿಯೂ ಈ ರೀತಿ ವ್ಯತ್ಯಾಸ ಬರುವುದು ಸಾಮಾನ್ಯ. ಮಳೆ ಮುನ್ಸೂಚನೆ ಮತ್ತು ತಾಪಮಾನಕ್ಕೆ ಸಂಬಂಧಿಸಿದಂತೆ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗ ಹಾಗೂ ಕೆಎಸ್‌ಎನ್‌ಡಿಎಂಸಿ ಹವಾಮಾನ ವರದಿಯಲ್ಲಿ ಅಂದಾಜು 2 ಡಿಗ್ರಿ ಸೆಲ್ಸಿಯಸ್ ವ್ಯತ್ಯಾಸ ಈ ಮೊದಲಿನಿಂದಲೂ ಇದೆ. ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದಲ್ಲಿ 8 ಕಿ.ಮೀ. ಸುತ್ತಳತೆ (ವಿಭಾಗದಿಂದ) ವ್ಯಾಪ್ತಿಯ (ರೇಡಿಯಸ್) ಹವಾಮಾನ ವರದಿ ದಾಖಲಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಮೈಸೂರು ಸಿಗ್ಮಾ ಆಸ್ಪತ್ರೆಯಲ್ಲಿ ಎನ್‌ಐಸಿಯು ವ್ಯವಸ್ಥೆ

ನವಜಾತ ಶಿಶುಗಳಿಗೆ ಸಂಪೂರ್ಣ ಆರೋಗ್ಯ ಸುರಕ್ಷೆ



ಡಾ.ರಾಜೇಶ್ವರಿ ಮಾದಪ್ಪ
ಮುಖ್ಯ ಮಕ್ಕಳ ತಜ್ಞರು



ಡಾ.ನದಿತಾ ನಂದಕುಮಾರ್
ಹಿರಿಯ ಮಕ್ಕಳ ತಜ್ಞರು



ಡಾ.ಎಂ.ಎಸ್.ಕನ್ಯಾ
ಹಿರಿಯ ಮಕ್ಕಳ ತಜ್ಞರು

ಮೈಸೂರು, ಫೆ.20–ಮೈಸೂರು ಸಿಗ್ಮಾ ಆಸ್ಪತ್ರೆಯಲ್ಲಿ ನಿಯೋನಾಟಲ್ ಇಂಟೆನ್ಸಿವ್ ಕೇರ್ ಯೂನಿಟ್ (ಎನ್‌ಐಸಿಯು) ಕಲ್ಪಿಸಲಾಗಿದ್ದು, ಇದರಿಂದ ನವಜಾತ ಶಿಶು, ರೋಗಗ್ರಸ್ಥ ಮತ್ತು ಅವಧಿ ಪೂರ್ವ ಜನಿಸುವ ಮಕ್ಕಳ ಸುರಕ್ಷತೆಗೆ ತುಂಬಾ ಅನುಕೂಲಕಾರಿ. ಇಂತಹ ಮಕ್ಕಳಿಗೆ ವೈದ್ಯಕೀಯ ಇಲ್ಲವೆ ಸರ್ಜಿಕಲ್ ಕೇರ್‌ಗೆ ಈ ವ್ಯವಸ್ಥೆ ಅತ್ಯಂತ ಅನುಕೂಲಕಾರಿ.

ಈ ವ್ಯವಸ್ಥೆಯಡಿ 24X7 ವೈದ್ಯಕೀಯ ಸೇವೆ ಲಭ್ಯವಿದೆ ಎಂದು ಆಸ್ಪತ್ರೆ ಪ್ರಕಟಣೆ ತಿಳಿಸಿದೆ. ಸಾಮಾನ್ಯವಾಗಿ 10ರಲ್ಲಿ ಒಂದು ಮಗು ಅವಧಿ ಪೂರ್ವ ಜನಿಸಬಹುದು. ಇಂತಹ ಮಗುವಿಗೆ ಅಗತ್ಯವಿರುವ ಚಿಕಿತ್ಸೆಗೆ ಎನ್‌ಐಸಿಯು ಅವಶ್ಯವಾಗಿದೆ. ಉಸಿರಾಟ, ಕಡಿಮೆ ತೂಕ, ನಾನಾ ಸೋಂಕು, ಜಾಂಡೀಸ್, ಕಡಿಮೆ ರಕ್ತದೊತ್ತಡ ಇತ್ಯಾದಿ ಆರೋಗ್ಯ ಸಮಸ್ಯೆವುಳ್ಳ ಮಗುವಿಗೆ ಎನ್‌ಐಸಿಯು ವ್ಯವಸ್ಥೆ ಅವಶ್ಯವಾಗಿದೆ. ಕೆಲವೊಮ್ಮೆ ನವಜಾತ ಶಿಶು ಹೃದಯ ಸಮಸ್ಯೆ ಹೊಂದಿದ್ದು, ಅಂತಹ ಮಕ್ಕಳಿಗಂತೂ ಎನ್‌ಐಸಿಯು ಅನಿವಾರ್ಯವಾಗಿರುತ್ತದೆ. ಸಿಗ್ಮಾ ಆಸ್ಪತ್ರೆಯಲ್ಲಿ ನಿಯೋನಾಟಲ್ ವೆಂಟಿಲೇಟರ್, ಬಬಲ್ ಸಿಪಿಎಪಿ, ಹೈಫ್ಲೋ ನಾಸಲ್ ಕೆನೂಲಾ ಆಕ್ಸಿಜನ್, ಎಲ್‌ಇಡಿ ಫೋಟೋ ಥೆರಪಿ, ಯೂನಿಟ್ಸ್, ಟೋಟಲ್ ಪೆರೆಂಟೆರಲ್ ನ್ಯೂಟ್ರಿಷನ್, ಬೆಡ್ ಸೈಡ್ ಎಕ್ಸರೇ, ಎಕೋ ಮತ್ತು ನ್ಯೂರೋ ಸೋನೋಗ್ರಾಮ್ ಸೌಕರ್ಯ ಲಭ್ಯವಿದೆ. ಕಳೆದ 10 ವರ್ಷಗಳಿಂದ ಸಿಗ್ಮಾ ಆಸ್ಪತ್ರೆ ಮಕ್ಕಳ ರೋಗಗಳಿಗೆ ಪರಿಣಾಮಕಾರಿ ಚಿಕಿತ್ಸಾ ವ್ಯವಸ್ಥೆಯೊಂದಿಗೆ ಪೋಷಕರ ವಿಶ್ವಾಸಕ್ಕೆ ಪಾತ್ರವಾಗಿದೆ.

ಮುಖ್ಯ ಮಕ್ಕಳ ತಜ್ಞರಾದ ಡಾ.ರಾಜೇಶ್ವರಿ ಮಾದಪ್ಪ, ಹಿರಿಯ ಮಕ್ಕಳ ತಜ್ಞರಾದ ಡಾ. ನಂದಿತಾ ನಂದಕುಮಾರ್, ಡಾ.ಎಂ.ಎಸ್. ಕನ್ಯಾ ಚಿಕಿತ್ಸಾ ಉಸ್ತುವಾರಿ ವಹಿಸಿದ್ದಾರೆ.

ಅರಣ್ಯ ಇಲಾಖೆ ನೋಟಿಸ್: ಆಘಾತದಿಂದ ವಿಷ ಸೇವಿಸಿ ಆತ್ಮಹತ್ಯೆಗೆತ್ನಿಸಿದ ರೈತನ ಸ್ಥಿತಿ ಗಂಭೀರ



ಗಿರಿಗೌಡ

ಮೈಸೂರು, ಫೆ.20(ಎಸ್‌ಪಿಎನ್)– ತನ್ನ ಒಂದೂವರೆ ಎಕರೆ ಜಮೀನನ್ನು ಅರಣ್ಯ ಇಲಾಖೆ ಕಸಿದುಕೊಳ್ಳುವ ಆತಂಕದಿಂದ ರೈತನೋರ್ವ ತನ್ನ ಜಮೀನಿನಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಕಣಿಯನಹುಂಡಿಯಲ್ಲಿ ಮಂಗಳವಾರ ನಡೆದಿದೆ.

ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿ ಕಣಿಯನಹುಂಡಿ ಗ್ರಾಮದ ನಿವಾಸಿ ರೈತ ಗಿರಿಗೌಡ ಆತ್ಮಹತ್ಯೆಗೆ ಯತ್ನಿಸಿದವರು. ಇವರು ಸೋಮವಾರ ಬೆಳಗ್ಗೆ ಮೈಸೂರು ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಆಗಮಿಸಿ, 2024ರ ಜ.25ರಂದು ಅರಣ್ಯ ಇಲಾಖೆ ಹೊರಡಿಸಿದ್ದ ಆದೇಶದ ಪ್ರಕಾರ, ಕಣಿಯನಹುಂಡಿಯಲ್ಲಿ 1.5 ಎಕರೆ ಜಮೀನಿನಲ್ಲಿ ತನ್ನ ಪೂರ್ವಜರ ಕಾಲದಿಂದಲೂ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಹಾಗಾಗಿ ಈ ಜಮೀನು ನಮಗೆ ಸೇರಿದ್ದು ಎಂದು ಅರ್ಜಿ ಸಲ್ಲಿಸಿದ್ದಾರೆ. ಇದನ್ನು ಪರಿಶೀಲಿಸಿದ ಅರಣ್ಯ ಅಧಿಕಾರಿಗಳು, ನಿಮ್ಮ ಜಮೀನು ಎಂದು ಹಕ್ಕು ಮಂಡಿಸಲು ನಿಮ್ಮ ಬಳಿ (ಗಿರಿಗೌಡರ ಬಳಿ) ಯಾವುದೇ ಪೂರಕ ದಾಖಲೆಗಳಿಲ್ಲ. ಹಾಗಾಗಿ ನಿಮ್ಮ ಅರ್ಜಿ ಊರ್ಜಿತವಲ್ಲ ಎಂದು ಗಿರಿಗೌಡರಿಗೆ ತಿಳಿಸಿದ್ದಾರೆ. ಇದರಿಂದ ಗಾಬರಿಗೊಂಡ ಗಿರಿಗೌಡ, ಮಂಗಳವಾರ ಮುಂಜಾನೆ ತನ್ನ ಜಮೀನಿಗೆ ತೆರಳಿ ಮಾವಿನ ಮರದ ಕೆಳಗೆ ವಿಷ ಸೇವಿಸಿ ಮಾಡಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಇದನ್ನು ಗಮನಿಸಿದ ಅಕ್ಕ-ಪಕ್ಕದ ರೈತರು, ಊರಿನ ಮುಖಂಡರಿಗೆ ತಿಳಿಸಿದ್ದಾರೆ. ತಕ್ಷಣ ಗಿರಿಗೌಡರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಿರಿಗೌಡರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಇನ್ನು 48 ಗಂಟೆಕಾಲ ಏನನ್ನು ಹೇಳಲಾಗದು ಎಂದಿದ್ದಾರೆ ಎಂದು ಮುಖಂಡರಾದ ಜಯಣ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಮ್ಮನ್ನು ಗ್ರಾಮದಿಂದ ಹೊರಹಾಕಬೇಡಿ: ಕಣಿಯನಹುಂಡಿ ಗ್ರಾಮದ ನೂರಾರು ಹೆಕ್ಟೇರ್ ಭೂಮಿಯನ್ನು ಮೀಸಲು ಅರಣ್ಯವಾಗಿಸಲು ಹೊರಡಿಸಿರುವ ಜ.25ರ ಆದೇಶವನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು. ಈ ಆದೇಶದಿಂದ ಕಣಿಯನ ಹುಂಡಿ ಗ್ರಾಮಸ್ಥರನ್ನು ಅರಣ್ಯ ಇಲಾಖೆ ಯಾವುದೇ ಸಮಯದಲ್ಲಾದರೂ ಒಕ್ಕಲೆಬ್ಬಿಸುವ ಆತಂಕ ಎದುರಾಗಿದೆ ಎಂದು ರೈತ ಮುಖಂಡ ಕೃಷ್ಣ ಹಾಗೂ ಗ್ರಾಮದ ಮುಖಂಡ ಜಯಣ್ಣ ಸೇರಿದಂತೆ ಇತರರು ತಮ್ಮ ಅಳಲು ತೋಡಿಕೊಂಡರು.

ಆತ್ಮಹತ್ಯೆಗೆ ಯತ್ನಿಸಿರುವ ರೈತ ಗಿರಿಗೌಡ ಅನಕ್ಷರಸ್ತರಾಗಿದ್ದು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಜೀವನಕ್ಕೆ 1.5ಎಕರೆ ಭೂಮಿಯೇ ಆಧಾರ. ಇವರಿಗೆ ತಾವು ಉಳಿಮೆ ಮಾಡಿಕೊಂಡಿದ್ದ ಜಮೀನಿಗೆ ಸಾಗುವಳಿ ಚೀಟಿ, ಆರ್‌ಟಿಸಿ, ಪೋಡಿ ಸೇರಿದಂತೆ ಇತರೆ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಹಾಗಾಗಿ ಇವರಿಗೆ ಇಂತಹ ಸ್ಥಿತಿ ಬಂದಿದೆ ಇವರಂತೆ ಅನೇಕರು ಇದೇ ಪರಿಸ್ಥಿತಿಯಲ್ಲಿದ್ದಾರೆ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಪ್ರವೇಶಿಸಿ, ಕಣಿಯನ ಹುಂಡಿ ರೈತರ ಸಮಸ್ಯೆ ಬಗೆಹರಿಸಬೇಕು. ಗ್ರಾಮದ ಯಾವುದೇ ರೈತರನ್ನು ಒಕ್ಕಲೆಬಿಸದಂತೆ ಒತ್ತಾಯಿಸಿದರು. ಈ ವೇಳೆ ಗ್ರಾಮಸ್ಥರಾದ ರಾಮು, ನಾಗಣ್ಣ, ಹಿರೇಗೌಡ, ರಮೇಶ್, ಬಸವರಾಜು, ಸಣ್ಣಲಿಂಗೇಗೌಡ, ರಾಮಚಂದ್ರು, ಚಂದ್ರಸ್ವಾಮಿ, ಗಿರಿಗೌಡ, ಕೆ.ಎಂ.ಬಸವರಾಜು, ಬೋರೇಗೌಡ, ಗಿರೀಶ್ ಹಾಗೂ ಇತರರಿದ್ದರು.



ಹೆಚ್.ಡಿ.ಕೋಟೆ ತಾಲೂಕು ಕಣಿಯನ ಹುಂಡಿ ರೈತರ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ರೈತ ಮುಖಂಡರು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿರುವ ದೃಶ್ಯ

ಹಾಲಿನ ಪ್ರೋತ್ಸಾಹ ಧನ; ಸರ್ಕಾರ ರಾಜ್ಯಪಾಲರಿಂದ ಸುಳ್ಳು ಹೇಳಿಸಿದೆ



ಬೆಂಗಳೂರು, ಫೆ.20– 8.65 ಲಕ್ಷ ಹಾಲು ಉತ್ಪಾದಕರಿಗೆ 757 ಕೋಟಿ ರೂ. ಹಾಲಿನ ಪ್ರೋತ್ಸಾಹ ಧನವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ ಎಂದು ಹೇಳುವ ಮೂಲಕ ಕರ್ನಾಟಕ ಸರ್ಕಾರವು ಈ ವಿಚಾರದಲ್ಲಿ ರಾಜ್ಯಪಾಲರಿಂದ ಸುಳ್ಳು ಹೇಳಿಸಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹೇಳಿದ್ದಾರೆ. ಕಳೆದ ಆರು ತಿಂಗಳಿನಿಂದ ಯಾವುದೇ ಪ್ರೋತ್ಸಾಹ ಧನವನ್ನು ನೀಡಿಲ್ಲ. ಸರ್ಕಾರ ರಾಜ್ಯಪಾಲರಿಂದ ಸುಳ್ಳು ಹೇಳಿಸಿದೆ ಎಂದು ದೂರಿದರು. ಹಿಂದಿನ ಬಿಜೆಪಿ ಆಡಳಿತದಲ್ಲಿ ಹೊಸ ಬಸ್‌ಗಳನ್ನು ಖರೀದಿಸಿಲ್ಲ ಎಂದು ರಾಜ್ಯಪಾಲರು ಮತ್ತೆ ಸುಳ್ಳು ಹೇಳುವಂತೆ ಮಾಡಿದ್ದಾರೆ. ನಾಲ್ಕು ನಿಗಮಗಳಿಗೆ ಹೊಸ ಬಸ್‌ಗಳನ್ನು ಖರೀದಿಸಲಾಗಿದೆ ಎಂಬುದು ಸತ್ಯ. 2022-23ರಲ್ಲಿ ನಾಲ್ಕು ನಿಗಮಗಳಿಗೆ 3,526 ಹೊಸ ಬಸ್‌ಗಳನ್ನು ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. ನಾವು ಬಿಎಂಟಿಸಿಗೆ 1,311 ಬಸ್‌ಗಳು, ಕೆಎಸ್‌ಆರ್‌ಟಿಸಿಗೆ 50 ಪವರ್ ಪ್ಲಸ್ ಬಸ್‌ಗಳು ಮತ್ತು 20 ವೋಲ್ವೋ ಬಸ್‌ಗಳನ್ನು ಖರೀದಿಸಿದ್ದೇವೆ ಎಂದರು.

ಎಎಪಿಯ ಕುಲದೀಪ್ ಕುಮಾರ್ ಚಂಡೀಗಢದ ಚುನಾಯಿತ ಮೇಯರ್

ಸುಪ್ರೀಂಕೋರ್ಟ್ ಘೋಷಣೆ



ನವದೆಹಲಿ, ಫೆ.20– ಆಮ್ ಆದ್ಮಿ ಪಕ್ಷದ(ಎಎಪಿ) ಅಭ್ಯರ್ಥಿ ಕುಲದೀಪ್ ಕುಮಾರ್ ಅವರು ಚಂಡೀಗಢದ ಚುನಾಯಿತ ಮೇಯರ್ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಘೋಷಿಸಿದೆ.

ಇದಕ್ಕೂ ಮುನ್ನ 8 'ಅಸಿಂಧು' ಮತಗಳನ್ನು ಸೇರಿಸಿ ಮತಗಳ ಮರುಎಣಿಕೆ ಮಾಡುವಂತೆ ನಿರ್ದೇಶಿಸಿದ್ದ ಸುಪ್ರೀಂ ಕೋರ್ಟ್, ಮರು ಎಣಿಕೆಯ ನಂತರ ಫಲಿತಾಂಶ ಪ್ರಕಟಿಸಿದೆ.


ಈ ಹಿಂದೆ ಮತಪತ್ರಗಳನ್ನು ತಿರುಚಿ ಬಿಜೆಪಿ ಅಭ್ಯರ್ಥಿಯನ್ನು ಮೇಯರ್ ಎಂದು ಘೋಷಿಸಿದ್ದ ರಿಟರ್ನಿಂಗ್ ಅಧಿಕಾರಿ ಅನಿಲ್ ಮಸೀಹ್ ಅವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಆದೇಶಿಸಿದೆ. ಚುನಾವಣಾ ಅಧಿಕಾರಿ ಉದ್ದೇಶಪೂರ್ವಕವಾಗಿ ಮತಪತ್ರಗಳನ್ನು ತಿರುಚಿದ್ದಾರೆ. ಅವರ ದುಷ್ಕೃತ್ಯಕ್ಕಾಗಿ ಕಾನೂನು ಕ್ರಮ ಜರುಗಿಸಲು ಸುಪ್ರೀಂ ಕೋರ್ಟ್ ಸೂಚಿಸಿದೆ.

ಸೋಮವಾರ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಹಾಜರಾದ ಚುನಾವಣಾ ಅಧಿಕಾರಿ ಅನಿಲ್ ಮೆಸೀಹ್ ಅವರು ಮತಪತ್ರಗಳನ್ನು ತಿರುಚಿದ್ದನ್ನು ಒಪ್ಪಿಕೊಂಡಿದ್ದರು. ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ಪೀಠ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿತ್ತಲ್ಲದೆ ಕುದುರೆ ವ್ಯಾಪಾರದ ವಿರುದ್ಧ ಕಳವಳ ವ್ಯಕ್ತಪಡಿಸಿತ್ತು.

ಐಪಿಎಸ್ ಪ್ರತಾಪ್ ರೆಡ್ಡಿ ರಾಜೀನಾಮೆ ಅಂಗೀಕರಿಸಿದ ರಾಜ್ಯ ಸರ್ಕಾರ

ಬೆಂಗಳೂರು, ಫೆ.20– ರಾಜ್ಯ ಆಂತರಿಕ ಭದ್ರತಾ ವಿಭಾಗದ(ಐಎಸ್‌ಡಿ) ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸಿಎಚ್ ಪ್ರತಾಪ್ ರೆಡ್ಡಿ ಅವರ ರಾಜೀನಾಮೆಯನ್ನು ರಾಜ್ಯ ಸರ್ಕಾರ ಅಂಗೀಕರಿಸಿದೆ. 1991ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಪ್ರತಾಪ್ ರೆಡ್ಡಿ ಅವರ ಸೇವಾವಧಿ ಇನ್ನೂ ನಾಲ್ಕೂವರೆ ತಿಂಗಳು ಬಾಕಿ ಇರುವಾಗಲೇ ಸ್ವಯಂ ನಿವೃತ್ತಿ ಕೋರಿ ಜನವರಿ 22ರಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಇದೀಗ ಸರ್ಕಾರ ಪ್ರತಾಪ್ ರೆಡ್ಡಿಯವರ ಸ್ವಯಂ ನಿವೃತ್ತಿ ಪತ್ರವನ್ನು ಅಂಗೀಕರಿಸಿದ್ದು, ಏಪ್ರಿಲ್ 30ಕ್ಕೆ ಇಲಾಖೆಯಿಂದ ಬಿಡುಗಡೆಗೊಳಿಸುವಂತೆ ಆದೇಶಿಸಿದೆ. ಕರ್ನಾಟಕದ ಆಂತರಿಕ ಭದ್ರತೆ ವಿಭಾಗದ ಡಿಜಿಪಿಯಾಗಿ (DGP) ಕಾರ್ಯ ನಿರ್ವಹಣೆ ಮಾಡುತ್ತಿದ್ದ ಪ್ರತಾಪ್ ರೆಡ್ಡಿ ವೈಯುಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದರು.

ಹೃದಯ ಸ್ತಂಭನದಿಂದ ಜನಪ್ರಿಯ ಕಿರುತೆರೆ ನಟ ರಿತುರಾಜ್ ಸಿಂಗ್ ನಿಧನ



ಮುಂಬಯಿ, ಫೆ.20– ಹೃದಯಸ್ತಂಭನದಿಂದ ಖ್ಯಾತ ಕಿರುತೆರೆ ನಟ ರಿತುರಾಜ್ ಸಿಂಗ್ (59) ನಿಧನರಾಗಿದ್ದಾರೆ.

ಅವರಿಗೆ ತಡರಾತ್ರಿ 12:30ರ ವೇಳೆಗೆ ಹೃದಯ ಸ್ತಂಭನವಾಗಿದೆ. ಅವರು ಕಳೆದ ಕೆಲ ಸಮಯದಿಂದ ಪ್ಯಾಂಕಿಯಾಟಿಕ್ ಕಾಯಿಲೆಯಿಂದ (ಮೇದೋಜ್ಜೀರಕ ಗ್ರಂಥಿಗೆ ಸಂಬಂಧಿಸಿದ ಸಮಸ್ಯೆ) ಬಳಲುತ್ತಿದ್ದರು. ಇದಕ್ಕೆ ಅವರು ಚಿಕಿತ್ಸೆಯನ್ನು ಪಡೆಯುತ್ತಿದ್ದರು ಎಂದು ವರದಿಯಾಗಿದೆ. ಕಿರುತೆರೆಯಲ್ಲಿ ಬಹಳ ವರ್ಷದಿಂದ ಬಣ್ಣ ಹಚ್ಚಿರುವ ಅವರು, ಇತ್ತೀಚೆಗೆ ಹಿಂದಿಯ ಜನಪ್ರಿಯ ಧಾರಾವಾಹಿ 'ಅನುಪಮಾ'ದಲ್ಲಿ ಕಾಣಿಸಿಕೊಂಡಿದ್ದರು. ಟಿವಿ ಹಾಗೂ ಸಿನಿಮಾರಂಗ ಎರಡರಲ್ಲೂ ಗುರುತಿಸಿಕೊಂಡಿದ್ದ ಅವರು,'ಬನೇಗಿ ಅಪ್ನಿ ಬಾತ್' , 'ಯೇ ರಿಶ್ತಾ ಕ್ಯಾ ಕೆಹ್ಲಾತಾ ಹೈ', 'ತ್ರಿದೇವಿಯಾನ್', 'ದಿಯಾ ಔರ್ ಬಾತಿ ಹಮ್' ಮುಂತಾದ ಧಾರಾವಾಹಿ ಸೇರಿದಂತೆ ವರುಣ್ ಧವನ್ ಮತ್ತು ಆಲಿಯಾ ಭಟ್ ಜೊತೆಗೆ 'ಹಂಪ್ಟಿ ಶರ್ಮಾ ಕಿ ದುಲ್ಹನಿಯಾ' ಸಿನಿಮಾದಲ್ಲಿ ನಟಿಸಿದ್ದರು. ಆರ್ ಮಾಧವನ್, ದಿವಂಗತ ನಟ ಇರ್ಫಾನ್ ಮತ್ತು ಸುರೇಖಾ ಸಿಕ್ರಿ, ಇತರರೊಂದಿಗೆ ನಟಿಸಿದ್ದರು.

ಶ್ರೀ ರಾಮಕೃಷ್ಣ ವಿದ್ಯಾಶಾಲಾ ಪ್ರಾಂಶುಪಾಲ ಎಸ್.ಬಾಲಾಜಿ ಅವರಿಗೆ ಹೃದಯಸ್ಪರ್ಶಿ ಅಭಿನಂದನೆ



ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಪ್ರಾಂಶುಪಾಲ ಎಸ್.ಬಾಲಾಜಿ (ಕುಳಿತವರಲ್ಲಿ ಎಡದಿಂದ ಮೂರನೇಯವರು) ಪ್ರಸಕ್ತ ತಿಂಗಳಾಂತ್ಯದಲ್ಲಿ ನಿವೃತ್ತರಾಗಲಿರುವ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರ ಗುರುಗಳಾದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿದರು.

ಮೈಸೂರು, ಫೆ.20(ಎಸ್‌ಬಿಡಿ)– ಮೈಸೂರಿನ ಯಾದವಗಿರಿಯಲ್ಲಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಸುದೀರ್ಘ ಸೇವೆ ಸಲ್ಲಿಸಿ ಪ್ರಸಕ್ತ ತಿಂಗಳಾಂತ್ಯದಲ್ಲಿ ನಿವೃತ್ತರಾಗುತ್ತಿರುವ ಪ್ರಾಂಶುಪಾಲ ಎಸ್. ಬಾಲಾಜಿ ಅವರನ್ನು ಸಂಸ್ಥೆ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ವಿದ್ಯಾಶಾಲೆ ಸಭಾಂಗಣದಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ 9 ವರ್ಷ ರಸಾಯನಶಾಸ್ತ್ರ ಉಪನ್ಯಾಸಕರಾಗಿ ಹಾಗೂ 25 ವರ್ಷಗಳಿಂದ ಪ್ರಾಂಶುಪಾಲರಾಗಿ ಒಟ್ಟು 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿರುವ ನಂಜನಗೂಡು ಮೂಲದ ಎಸ್.ಬಾಲಾಜಿ ಅವರ ಕಾರ್ಯ ವೈಖರಿ, ಬದ್ಧತೆ, ದಕ್ಷತೆಯನ್ನು ಗಣ್ಯರು ಬಣ್ಣಿಸಿದರು.

ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ ಬೇಲೂರು ಶ್ರೀರಾಮಕೃಷ್ಣ ಮಿಷನ್‌ನ ಟ್ರಸ್ಟಿ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ(ಕರೆಸ್ಪಾಂಡೆಂಟ್) ಸ್ವಾಮಿ ಯುಕ್ತೇಶಾನಂದಜೀ ಹಾಗೂ ಸ್ವಾಮಿ ಮಹಿಪಾಲಾನಂದಜೀ ಅವರು, ಎಸ್.ಬಾಲಾಜಿ ಅವರ ಸಾಧನೆಯನ್ನು ಪ್ರಶಂಸಿಸಿದರು. ಉತ್ತಮ ಸೇವೆಯಿಂದ ರಾಜ್ಯಮಟ್ಟದ 'ಚಂದನ ಶ್ರೀ', ರಾಜ್ಯ ಮಟ್ಟದ 'ಅತ್ಯುತ್ತಮ ಪ್ರಾಂಶುಪಾಲ' ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಬಾಲಾಜಿ ಅವರು, ಸಂಪನ್ಮೂಲ ವ್ಯಕ್ತಿ, ಪ್ರಾಯೋಗಿಕ ಪರೀಕ್ಷೆಯ ಸದಸ್ಯ ಇನ್ನಿತರ ಹಲವು ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಪ್ರಾಂಶುಪಾಲರಾಗಿ 25 ವರ್ಷಗಳ ಇವರ ಸೇವಾವಧಿಯಲ್ಲಿ 22 ವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದು 'ಗುಣಾತ್ಮಕ ಸಾಧಕ ಶಾಲೆ' ಹೆಗ್ಗಳಿಕೆ ಗಳಿಸಿರುವುದು ಇವರ ದಕ್ಷತೆಗೆ ನಿದರ್ಶನವಾಗಿದೆ ಎಂದು ಕೊಂಡಾಡಿದರು.

ಎಸ್.ಬಾಲಾಜಿ ಅವರ ಗುರುಗಳಾದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಬಾಲಾಜಿ ಅವರ ಶಿಸ್ತು, ಬದ್ಧತೆ ಹಾಗೂ ಪ್ರಾಂಶುಪಾಲರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಿಯೋಜಿತ ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್, ಹಿರಿಯ ಸಹದ್ಯೋಗಿಗಳಾದ ಎಸ್.ಪಿ.ಸುರೇಶ್, ಕೆ.ಎಸ್.ಮುರುಗೇಶ್, ಸಿ..ಶ್ರೀನಿವಾಸ್ ಬಾಬು, ಶಿಕ್ಷಕರಾದ ವಿದ್ವಾನ್ ಜಿ.ಚಂದ್ರಶೇಖರ್, ಜಿ.ಎನ್.ಮನೋಹರ್, ಸರಗೂರು ಮಹೇಶ್ ಸೇರಿದಂತೆ ಹಲವರು ಬಾಲಾಜಿ ಅವರೊಂದಿಗಿನ ಒಡನಾಟವನ್ನು ಸ್ಮರಿಸಿಕೊಂಡು ಭಾವುಕರಾದರು. ಪ್ರಾಂಶುಪಾಲರಾಗಿ ಮಾತ್ರವಲ್ಲದೆ ಮನೆಯ ಹಿರಿಯ ವ್ಯಕ್ತಿಯಂತೆ ವಿದ್ಯಾರ್ಥಿಗಳನ್ನು ಅತ್ಯಂತ ಕಾಳಜಿ ಹಾಗೂ ಪ್ರೀತಿಯಿಂದ ನೋಡಿಕೊಂಡಿದ್ದನ್ನು ಹಿರಿಯ ವಿದ್ಯಾರ್ಥಿಗಳು ಸ್ಮರಿಸಿಕೊಂಡರು.

ಸ್ವಾಮೀಜಿಗಳು, ವಿದ್ಯಾಶಾಲೆಯ ಬೋಧಕ ಮತ್ತು ಬೋಧಕೇತರ ವೃಂದ ಹಾಗೂ ಹಿರಿಯ ವಿದ್ಯಾರ್ಥಿಗಳಿಂದ ಆತ್ಮೀಯ ಸನ್ಮಾನ ಸ್ವೀಕರಿಸಿದ ಬಾಲಾಜಿ ಅವರು ಸೇವಾವಧಿಯ ದಿನಗಳು, ಸಹೋದ್ಯೋಗಿಗಳು ಹಾಗೂ ವಿದ್ಯಾರ್ಥಿಗಳೊಂದಿಗಿನ ಒಡನಾಟವನ್ನು ನೆನೆದು ಭಾವುಕರಾದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕ ಎ.ಸುಧೀಂದ್ರ ಹೆಬ್ಬಾರ್, ಹಿರಿಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಪಾರ್ಥಸಾರಥಿ ಉಪಸ್ಥಿತರಿದ್ದರು. ಹಿರಿಯ ವಿದ್ಯಾರ್ಥಿಗಳು, ಬಾಲಾಜಿ ಅವರ ಸ್ನೇಹಿತರು, ಸಂಬಂಧಿಕರು, ವಿದ್ಯಾರ್ಥಿಗಳು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : "ಎಷ್ಟೋ ವರ್ಷಗಳಿಂದ ಮನೆಯಲ್ಲಿ ಉಪದ್ರವ ಕೊಡುತ್ತಿದ್ದ ಇಲಿಗಳು ಸದ್ಯ ಪರಾರಿಯಾಗಿವೆ"

ತಿಮ್ಮ : ಹೌದಾ! ಹೇಗೆ ಸಾಧ್ಯವಾಯಿತು?

ಗುಂಡ : ನನ್ನ ಹೆಂಡ್ತಿ 'ಹೊಸ ರುಚಿ' ಮಾಡಲು ಪ್ರಾರಂಭಿಸಿದ ಮೇಲೆ ಮನೆ ಬಿಟ್ಟು ತೊಲಗಿದವು!"

ಮೈಸೂರು ಮಿತ್ರ

ಬುಧವಾರ, 21 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಂಯಮ ಹಾಗೂ ತ್ಯಾಗ ಮಾರ್ಗದಿಂದ
ಆನಂದ ಮತ್ತು ಶಾಂತಿ ಸ್ಥಾಪನೆ ಸಾಧ್ಯ – ಐನ್‌ಸ್ಟೀನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಸಿದು ಹಲಸಿನ ಹಣ್ಣು ತಿನ್ನು, ಉಂಡು ಮಾವಿನ ಹಣ್ಣು ತಿನ್ನು

ನಿಮ್ಮ ಪತ್ರಗಳು

ಈ ನಿವಾಸಿಗಳ ಅಳಲನ್ನು ಕೇಳುವವರ್‍ಯಾರು?



ಮಾನ್ಯರೇ,

ಮೈಸೂರಿನ ಬಸವೇಶ್ವರ ರಸ್ತೆ, 10ನೇ ಕ್ರಾಸ್ ಪಶ್ಚಿಮಕ್ಕೆ ಇರುವ ಕನ್ಸರ್‌ವೆನ್ಸಿ (ಗಲ್ಲಿ)ಯಲ್ಲಿ ವಾಸವಾಗಿರುವ ಜನರ ದಿನನಿತ್ಯದ ಅಳಲೆಂದರೆ ಇವರಿಗೆ ಮೊದಲಿನಿಂದಲೂ ಒಳಚರಂಡಿ ವ್ಯವಸ್ಥೆ ಇಲ್ಲದೇ ಎಲ್ಲಾ ಕಲುಷಿತವಾದ ಸ್ನಾನದ ನೀರು, ಬಟ್ಟೆ ಒಗೆಯುವ ನೀರು ಮತ್ತೆ ಮಳೆಗಾಲದಲ್ಲಿ ಮಧ್ವಾಚಾರ್ ರಸ್ತೆ, 8ನೇ ಕ್ರಾಸ್ (ನಂಜುಮಳಿಗೆ) ಮೇಲಿಂದ ಬರುವ ನೀರು, ಕಸ ಕಡ್ಡಿ, ಗಿಡ ಗಂಟೆ ಎಲ್ಲವೂ ಇವರುಗಳ ಮನೆಯ ಮುಂದೆಯೇ ಹರಿಯುತ್ತಿರುವುದು ವಿಪರ್ಯಾಸ. ಇದರಿಂದ ಇಲ್ಲಿನ ವಾತಾವರಣ ಅನೈರ್ಮಲ್ಯದಿಂದ ಕೂಡಿದೆ. ಸುತ್ತಮುತ್ತಲಿನ ಜನರು ಆಗಾಗ್ಗೆ ಜ್ವರ, ಕೆಮ್ಮು, ನೆಗಡಿ ಹಾಗೂ ಚರ್ಮರೋಗದಿಂದ ನರಳುತ್ತಿದ್ದಾರೆ. ಅಲ್ಲದೇ ಗಬ್ಬು ದುರ್ನಾತ ಸಹಿಸದೇ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಇಲ್ಲಿಯ ಜನರು ಬಟ್ಟೆಯನ್ನು ಇಲ್ಲಿಯೇ ಒಗೆಯುತ್ತಾರೆ, ಸ್ನಾನ–ಶೌಚಾಲಯವೂ ಇಲ್ಲಿಯೇ ನಡೆಯುತ್ತಿದೆ. ಜೊತೆಗೆ ಅಡುಗೆಯನ್ನು ಮಾಡಿ ಗಲೀಜು ಮಾಡುತ್ತಿದ್ದಾರೆ. ನೊಂದ ನಿವಾಸಿಗಳು ಅನೇಕ ಬಾರಿ ಸ್ಥಳೀಯ ನಗರಪಾಲಿಕೆ ಸದಸ್ಯರಿಗೆ, ಆರೋಗ್ಯಾಧಿಕಾರಿಗಳಿಗೆ ದೂರು ನೀಡಿದರೂ ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಸ್ಥಳಕ್ಕೆ ತಕ್ಷಣ ಭೇಟಿ ನೀಡಿ ಆದಷ್ಟು ಬೇಗ ತೆರೆದ ಕಾಲುವೆಯನ್ನು ಮುಚ್ಚಿಸಿ, ಒಳಚರಂಡಿ ಪೈಪ್ ಅಳವಡಿಸಿ ಜನರು ನೆಮ್ಮದಿಯ ಜೀವನ ನಡೆಸಲು ಅನುವು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

– ನೊಂದ ನಿವಾಸಿಗಳು, 10ನೇ ಕ್ರಾಸ್, ಬಸವೇಶ್ವರ ರಸ್ತೆ, ಮೈಸೂರು

ಗ್ರಂಥಪಾಲಕರಿಗೆ ವೇತನ ಹೆಚ್ಚಳ ಸ್ವಾಗತಾರ್ಹ

ಮಾನ್ಯರೆ,

ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಸರ್ಕಾರಿ ಕಾರ್ಯಾಲಯಗಳ ಸೂಕ್ತ ನಿರ್ವಹಣೆ ಶ್ರಮದಾಯಕವಾಗಿರುತ್ತದೆ.ಸೂಕ್ತ ಕಟ್ಟಡಗಳ ಕೊರತೆ, ಅನುಭವಿಲ್ಲದ ಮೇಲ್ವಿಚಾರಕರ ಕೊರತೆ, ಗ್ರಾಮಗಳಿಂದ ದೂರವಿರುವ ಕಟ್ಟಡಗಳು... ಹೀಗೆ ಹಲವಾರು ರೀತಿಯ ಕೊರತೆಗಳಿರುತ್ತವೆ. ಇದೇ ಹಾದಿಯಲ್ಲಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಗ್ರಂಥಾಲಯಗಳ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ.

ಇಂತಹ ಕೊರತೆಗಳ ನಡುವೆಯು ಗ್ರಂಥಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಂಥಪಾಲಕರು ಹಲವಾರು ವರ್ಷಗಳ ಬೇಡಿಕೆಯಾದ ಕನಿಷ್ಠ ವೇತನವನ್ನು ಸೆಪ್ಟೆಂಬರ್ ತಿಂಗಳಿಂದ ಅನ್ವಯವಾಗುವಂತೆ ಹೆಚ್ಚಳ ಮಾಡಿರುವ ಸರ್ಕಾರದ ಕ್ರಮ ಸ್ವಾಗಾತಾರ್ಹವಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಂಥಾಲಯಗಳ ನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳೆ ಮಾಡುತ್ತಿದ್ದವು. ಗ್ರಂಥಪಾಲಕರುಗಳಿಗೆ ಸೂಕ್ತ ವೇತನ ಮತ್ತು ಸೌಲಭ್ಯಗಳನ್ನು ನೀಡುತ್ತಿರಲ್ಲಿಲ್ಲವೆಂಬ ಆರೋಪ ಕೇಳಿಬರುತ್ತಿತ್ತು.

ಇದರ ಅಂಗವಾಗಿ ಗ್ರಂಥಪಾಲಕರ ಕೆಲಸದ ಅವಧಿಯನ್ನು 6 ಗಂಟೆಯಿಂದ 8 ಗಂಟೆಗಳಿಗೆ ವಿಸ್ತರಿಸಿ, 16,382 ರೂ.ಗಳ ಕನಿಷ್ಠ ವೇತನ ಮತ್ತು 1542 ರೂ.ಗಳ ತುಟ್ಟಿ ಭತ್ಯೆ ಎರಡು ಸೇರಿ ತಿಂಗಳಿಗೆ 17,924 ರೂ.ಗಳ ವೇತನ ಜಾರಿಗೊಳಿಸಿರುವುದು ಗ್ರಂಥಪಾಲಕರ ಜೀವನ ನಿರ್ವಹಣೆಯನ್ನು ಉತ್ತಮಗೊಳಿಸಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಂಥಾಲಯಗಳ ಗ್ರಂಥಪಾಲಕರುಗಳ ವೇತನ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರಕ್ಕೆ ರಾಜ್ಯದ ಎಲ್ಲಾ ಗ್ರಂಥಪಾಲಕರುಗಳ ಪರವಾಗಿ ಧನ್ಯವಾದಗಳು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಶುದ್ಧ ಕುಡಿಯುವ ನೀರಿನ ಘಟಕ ಬೇಕು

ಮಾನ್ಯರೆ,

ಮೈಸೂರಿನ ಹೊರ ವಲಯದ ಜೆಎಸ್‌ಎಸ್ 2ನೇ ಹಂತದ ಬಡಾವಣೆಗೆ 5 ರೂಪಾಯಿಯ ನಾಣ್ಯದ ಶುದ್ಧ ಕುಡಿಯುವ ನೀರಿನ ಘಟಕ ಇಲ್ಲದಿರುವುದರಿಂದ ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು 5 ರೂಪಾಯಿ ಶುದ್ಧ ಕುಡಿಯುವ ನೀರಿನ ಘಟಕ ಮತ್ತು ರೀಚಾರ್ಜ್ ಕಾರ್ಡ್ ಅನ್ನು ಅಳವಡಿಸಿ ನಿವಾಸಿಗಳ ತೊಂದರೆಯನ್ನು ನಿವಾರಿಸಬೇಕೆಂದು ಮನವಿ.


– ಟಿ.ಪಿ. ಲೋಕೇಶ್ ಮೂರ್ತಿ, ಜೆಎಸ್‌ಎಸ್ ಬಡಾವಣೆ.

ಜಾಣ್ಮೆಯ ಸಮತೋಲನ ಬಜೆಟ್

ಮಾನ್ಯರೆ,

ಯಾವುದೇ ಸರ್ಕಾರ ಬಜೆಟ್ ಮಂಡನೆ ಮಾಡಿದಾಗ ವಿರೋಧ ಪಕ್ಷದ ನಾಯಕರು ಎಂದು ಉತ್ತಮ ಬಜೆಟ್ ಎಂದು ಹೇಳಿದ ಇತಿಹಾಸ ಇಲ್ಲ. ಸಾರ್ವಜನಿಕ ವಲಯದಲ್ಲಿ ಕೆಲವರು ಆಶಾದಾಯಕ ಎಂದರೆ ಮತ್ತೆ ಕೆಲವರು ನಿರಾಶಾದಾಯಕ ಪ್ರತಿಕ್ರಿಯೆ ನೀಡುತ್ತಾರೆ. ಒಟ್ಟಾರೆ ಬಜೆಟ್ ಗಮನಿಸಿದರೆ ಪಂಚ ಗ್ಯಾರಂಟಿ ಒದಗಿಸುವುದರ ಜೊತೆಗೆ ನೀರಾವರಿ, ಆರೋಗ್ಯ, ಶಿಕ್ಷಣ, ನಗರಾಭಿವೃದ್ಧಿ ಯೋಜನೆ, ಕೃಷಿಗೆ ಹೆಚ್ಚಿನ ಒತ್ತು ನೀಡಿದ್ದಾರೆ.ಇದೆಲ್ಲದರ ವರತಾಗಿಯೋ ಏನಿಲ್ಲ ಏನಿಲ್ಲ ಎನ್ನುತ್ತಿದೆ ಬಿಜೆಪಿ. ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಶಕ್ತಿ, ಅನ್ನಭಾಗ್ಯ ಎಲ್ಲದರ ಜೊತೆಗೆ ಒಳ್ಳೆಯ ಸಮತೋಲನದ ಬಜೆಟ್ ಮಂಡಿಸಿರುವುದು ರಾಜ್ಯದ ಜನತೆಗೆ ಸಮಾದಾನ ತಂದಿರುತ್ತದೆ. ಏನಿಲ್ಲ ಅಂದರೆ ಎಲ್ಲವೂ ನಿನ್ನದೆ ನನ್ನದೆನಿಲ್ಲ ಎಂಬರ್ಥ ವಿರಬೇಕು. ಇದಲ್ಲದೆ ಚಾಮರಾಜನಗರ ಮತ್ತು ಕೊಡಗಿಗೂ ಸ್ವಲ್ಪ ಔದಾರ್ಯ ತೋರಬೇಕಿತ್ತು ಸಿ.ಎಂ. ಸಿದ್ದರಾಮಯ್ಯ. ಬಜೆಟ್ ಹೊರತಾಗಿ ವಿಶೇಷ ಅನುದಾನ ಬಿಡುಗಡೆ ಮಾಡಿದರೆ ಉತ್ತಮ. ಈ ಎರಡು ಜಿಲ್ಲೆಗಳಿಗೆ. ಒಟ್ಟಾರೆ ಜನ ಸಾಮಾನ್ಯರ ಮೆಚ್ಚುಗೆ ಬಜೆಟ್ ಎಂದರೂ ತಪ್ಪಲ್ಲ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.




ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಕನಕ ಕಥನಾಮೃತ

ಕನಕದಾಸರು ಕನ್ನಡ ಸಾಹಿತ್ಯ ಪರ್ವತದ ಕನಕ ಶಿಖರ. ಅವರ **ನಳಚರಿತ್ರೆಯ** ಪದ್ಯಗಳನ್ನು ನಾವು ಪಠ್ಯ ಪುಸ್ತಕಗಳಲ್ಲಿ ಓದಿ ಕಂಠಪಾಠ ಮಾಡಿದ್ದೆವು. 'ಆರಿವಳು ವನಲಕ್ಷ್ಮಿಯೋ ಸುರನಾರಿಯೋ' ಮುಂತಾದ ಸುಂದರ ಪದ್ಯಗಳವು. ಅಲ್ಲದೆ ಅವರು ರಚಿಸಿದ್ದ ಹಾಡುಗಳೂ ಮನಸೆಳೆಯುತ್ತವೆ. **ರಾಮ ಧಾನ್ಯ ಚರಿತೆಯಲ್ಲಿ** ಅವರು ರಾಗಿಯ ಮಹಿಮೆಯನ್ನು ವರ್ಣಿಸಿದ್ದಾರೆ. **ಮೋಹನ ತರಂಗಿಣಿ** ಕನ್ನಡ ಸಾಹಿತ್ಯದ ರತ್ನಾಭರಣ. ಕನಕದಾಸ ಎಂಬ ಚಲನಚಿತ್ರ ಕನ್ನಡಿಗರ ಮನಸ್ಸನ್ನು ಸೆಳೆದ ಶ್ರೇಷ್ಠ ಚಿತ್ರ 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ' ಎಂಬ ಹಾಡು ಯಾರ ಮನದಲ್ಲಿ ನೆಲೆಸಿಲ್ಲ?



ಕನಕದಾಸರ ಬಗೆಗೆ ಹಲವು ಗ್ರಂಥಗಳು, ವಿಮರ್ಶೆಗಳು ಬಂದಿರಬಹುದು. ಆದರೆ ಅವರಿಗೆ ಅತ್ಯಂತ ಪ್ರಿಯವಾಗಿದ್ದ ಭಾಮಿನೀ ಷಟ್ಪದಿಯಲ್ಲಿ ಕನ್ನಡದ ಕಾವ್ಯ ಕುಸುಮವೊಂದು ಅರಳಿರುವುದು ಖುಷಿ ಕೊಡುವ ವಿಷಯ. ಕವಿ ಮಿತ್ರ ಎಂಬ ಕಾವ್ಯಾಭಿಧಾನವನ್ನು ಹೊಂದಿರುವ ಪಿ.ಎಸ್.ಸಿದ್ದಾಚಾರ್ 'ಕನಕ ಕಥನಾಮೃತ' ಎಂಬ ಮಹಾ ಕಾವ್ಯವನ್ನು ರಚಿಸಿ ಕನ್ನಡ ನಾಡಿಗೆ ನೀಡಿದ್ದಾರೆ. ಕನ್ನಡದಲ್ಲಿ ಇಷ್ಟು ಸಾಹಿತ್ಯವು ಷಟ್ಪದೀ ಛಂದಸ್ಸಿನಲ್ಲಿ ಇಪ್ಪತ್ತೊಂದನೆಯ ಶತಮಾನದಲ್ಲಿ ಹುಟ್ಟಿರುವುದು ಸಂತಸದ ವಿಷಯ. ಸಾಮಾನ್ಯವಾಗಿ ಮುಕ್ತ ಛಂದಸ್ಸಿನಲ್ಲಿ ಈಗ ಕಾವ್ಯಗಳ ರಚನೆಯಾಗುತ್ತಿದೆ. ಷಟ್ಪದಿಯ ರಚನೆ ಅಷ್ಟು ಸುಲಭವಲ್ಲ. ಇದರಲ್ಲಿ ದ್ವಿತೀಯಾಕ್ಷರ ಪ್ರಾಸವಿರಬೇಕು.

ಪಿ.ಎಸ್. ಸಿದ್ದಾಚಾರ್ ಅವರು ಹೊಸದಾಗಿ ಕಾವ್ಯ ಪ್ರಪಂಚಕ್ಕೆ ಬಂದವರಲ್ಲ. ಇವರು ಹತ್ತೊಂಬತ್ತು ಕೃತಿಗಳನ್ನು ಈಗಾಗಲೇ ರಚಿಸಿದ್ದಾರೆ. ಮೊದಲೇ ಅವರು ವಾರ್ಧಕ ಷಟ್ಪದಿಯಲ್ಲಿ ಮೈಸೂರಿನ ಅರಸರನ್ನು ಕುರಿತು ಮಹಾರಾಜ ಚರಿತಾಮೃತ ಎಂಬ ಮಹಾಕಾವ್ಯವನ್ನು ಬರೆದಿದ್ದಾರೆ. ಈ ಕೃತಿಗಳು ಪ್ರಸಿದ್ಧವಾಗಿ ಜನಪ್ರಿಯವಾಗಬೇಕು. ಪ್ರಸ್ತುತ ಕೃತಿಗೆ ಮುನ್ನುಡಿ ಬರೆದಿರುವ ಪ್ರಖ್ಯಾತ ಸಾಹಿತಿ ಪ್ರದೀಪಕುಮಾರ ಹೆಬ್ರಿಯವರು "ಮಹಾಕವಿ ಸಿದ್ದಾಚಾರ್ ಸರ್ ಅವರು ಕನ್ನಡ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ತಮ್ಮ ವಿದ್ವತ್ತನ್ನು ತೋರಿದವರು. ಅವರ ಅಂಗೈಯಲ್ಲಿ ತಾಯಿ ಶಾರದೆ ನೆಲೆಸಿದ್ದಾಳೆ" ಎಂದು ಶ್ಲಾಘಿಸಿದ್ದಾರೆ. ಹೊನ್ನುಡಿಯನ್ನು ಕೊಟ್ಟ ಪ್ರಸಿದ್ಧ ಗಮಕಿ ಕೃ.ಪಾ.ಮಂಜುನಾಥ್ ಸಿದ್ದಾಚಾರ್ ಅವರ ಬಗೆಗೆ "ತಮ್ಮ ಆಲೋಚನೆ ಹಾಗೂ ವಿವೇಚನೆಯ ಸಾಂಗತ್ಯದೊಂದಿಗೆ ಔಚಿತ್ಯಪೂರ್ಣ ಕಾವ್ಯಾನುಸಂಧಾನಕ್ಕೆ ಅವಕಾಶ ಮಾಡಿಕೊಟ್ಟಿರುವುದೇ ಶ್ರೀಯುತರ ಹೆಗ್ಗಳಿಕೆ ಎಂದು ಭಾವಿಸುತ್ತೇನೆ" ಎಂದಿದ್ದಾರೆ. ಅಂಕಣ ಬರಹಗಾರ ಡಾ.ವಿ.ರಂಗನಾಥ್ ಅವರು "ಯಾವುದೋ ಒಂದು ಪುಟ್ಟ ಪುಸ್ತಕದಿಂದ ಕನಕದಾಸರ ಕಿರು ಪರಿಚಯ ನಮಗಾಗಿದೆ. ಆದರೆ ಅವರ ಇಡೀ ಜೀವನದ ಬಗ್ಗೆ ಶೋಧಿಸಿ, ಸಂಶೋಧಿಸಿ ಮನೋಗತ ಮಾಡಿಕೊಂಡು ಈ ಬೃಹತ್ ಮಹಾ ಕಾವ್ಯ ರಚಿಸಿರುವ ಸಿದ್ದಾಚಾರ್‌ಗೆ ನಾವು ಯಾವುದೇ ಪ್ರಶಂಸೆಯ ಮಾತನಾಡಿದರೂ ಕಡಿಮೆಯೇ" ಎಂದು ಪ್ರಶಂಸಿಸಿದ್ದಾರೆ.

ಮಹಾಭಾರತದಲ್ಲಿ ಹದಿನೆಂಟು ಪರ್ವಗಳಿರುವುದು ಎಲ್ಲರಿಗೂ ತಿಳಿದ ವಿಷಯ. ಕನಕ ಕಥನಾಮೃತದಲ್ಲೂ ಹದಿನೆಂಟು ಅಧ್ಯಾಯಗಳಿದ್ದು ಅವನ್ನು ಪರ್ವಗಳೆಂದು ಕರೆಯಲಾಗಿದೆ. ವಿಜಯನಗರ ಸಾಮ್ರಾಜ್ಯದ ಇತಿಹಾಸದಿಂದ ಇಲ್ಲಿ ಕಥೆ ಶುರುವಾಗುತ್ತದೆ.

ಹಕ್ಕರಾಯರ ಜೊತೆಗೆ ಸೇರುತ
ಬುಕ್ಕರಾಯರು ಕೂಡಿಕೊಳ್ಳುತ
ಚಿಕ್ಕದಾಗಿಯೆ ಶುರುವುಗೊಂಡಿಹ ನಾಡು ಬೆಳೆಸಿದರು
ತಕ್ಕುದಾಗಿಹ ಮಾರ್ಗದರುಶನ
ಸಿಕ್ಕಿ ವಿದ್ಯಾರಣ್ಯಗುರುವಿಂ
ಚೊಕ್ಕವಾಗಿಯೆ ಹಂಪೆ ರಾಜ್ಯವು ಬೆಳೆಯತೊಡಗಿತದು

ಎಂದು ಸಾಮ್ರಾಜ್ಯದ ಕಥೆಯನ್ನು ಹೇಳತೊಡಗುತ್ತಾರೆ. ಶ್ರೀ ಸಿದ್ದಾಚಾರ್, ಕುಮಾರ ರಾಮನ ಕಥೆಯೂ ಇಲ್ಲಿ ಬಂದಿದೆ. ಸಂಗಮ, ಸಾಳ್ವ, ತುಳುವ, ಅರವೀಡು ವಂಶದ ದೊರೆಗಳ ಇತಿಹಾಸವೂ ಇಲ್ಲಿ ವರ್ಣಿತವಾಗಿದೆ. ಕೃಷ್ಣದೇವರಾಯನ ಬಗೆಗೆ ಕವಿ ಸಿದ್ದಾಚಾರ್ಯರು ಬರೆದಿದ್ದಾರೆ–

ವಿಷ್ಣು ಪರಮಾತ್ಮನವತಾರದ
ಕೃಷ್ಣ ಹೆಸರಲಿಯಾಗಮಿಸಿರೊಸ–
ಹಿಷ್ಣು ಸರ್ವಸಮಾನರೂಪದ ಸದ್ಗುಣದ ಕೂರ
ಪ್ರಶ್ನೆಗುತ್ತರವೆನುವ ರೀತಿಯ
ಕೃಷ್ಣ ದೇವಾರಾಯ ದೊರೆ ತಾನ್
ನಿಷ್ಠತೆಯಲಿಯೆ ನಾಡನಾಳಲು ಬಂದ ಹಮ್ಮೀರ

ಈ ಕಾವ್ಯದ ವಿಶೇಷತೆ ಎನೆಂದರೆ ಎಲ್ಲೂ ವ್ಯಾಖ್ಯಾನದ ಅವಶ್ಯಕತೆ ಇಲ್ಲ. ಸರಳ ಭಾಷೆಯಲ್ಲಿ ನಿರೂಪಿತವಾಗಿರುವ ವಿಷಯಗಳು ಸುಲಭವಾಗಿ ಗ್ರಾಹ್ಯವಾಗಿವೆ. ಈ ಕವಿ ಸಂಸ್ಕೃತ ಭೂಯಿಷ್ಠವಾದ ಪಂಡಿತ ಪ್ರಿಯವಾದ ಭಾಷೆಯನ್ನು ಬಳಸಿಲ್ಲ. ಸಾಮಾನ್ಯರಿಗೂ ಅರ್ಥವಾಗುವ ಸರಳ ಭಾಷೆಯನ್ನೇ ಉಪಯೋಗಿಸಿದ್ದಾರೆ. ಬೀರನಾಯಕ ದಂಪತಿಗಳು ಸಂತತಿಗಾಗಿ ಹಂಬಲಿಸಿ ತಿರುಪತಿಗೆ ಹೋಗಿ ತಿಮ್ಮಪ್ಪನನ್ನು ಬೇಡಿದಾಗ ನಡೆದ ಘಟನೆಯನ್ನು ಅವರು ವರ್ಣಿಸಿದ ಪರಿಯನ್ನು ನೋಡಿ.

ಫಳಫಳಿಸೆ ಮೂರುತಿಯ ಮೊಗವದು
ಮೊಳಗಿತದು ಗುಡಿ ತುಂಬಿ ನಾದವು
ಕಳೆಯಗಟ್ಟುತಲಭಯ ಹಸ್ತವು ಬಾಗಿತೊಮ್ಮೆಯದು।
ಕಳಚಿ ಜಾರಿತು ವರದರೂಪದಿ
ಬಲದ ಹಸ್ತದ್ ಹೂವುದಂಡೆಯು
ಫಲವು ಲಭಿಸುವ ಸೂಚ್ಯ ದೊರಕಿತು ದಂಪತೀಗಳಿಗೆ॥

ಕನಕದಾಸರೂ ಸಾಮಾನ್ಯ ಜನರಿಗೂ ವೇದಾಂತ ರಹಸ್ಯಗಳು ತಿಳಿಯುವಂತಾಗಲೆಂದು ತಿಳಿಗನ್ನಡದಲ್ಲಿ ತಮ್ಮ ಕಾವ್ಯಗಳನ್ನೂ ಹಾಡುಗಳನ್ನೂ ರಚಿಸಿದರೆಂಬುದು ಲೋಕವಿದಿತ. ಇದರ ಬಗೆಗೆ ಸಿದ್ದಾಚಾರ್ ಹೀಗೆ ಬರೆದಿದ್ದಾರೆ–

ಕ್ಲಿಷ್ಟವೆನಿಸುವ ಹಲವು ವಿಷಯವ
ಸ್ಪಷ್ಟ ಕನ್ನಡ ಸರಳ ಭಾಷೆಲಿ
ಕಷ್ಟ ರಹಿತದೆ ತಿಳಿಯೊ ಪರಿಯಲಿ ನುಡಿದು ರಚಿಸಿದರು
ಕಷ್ಟ ಕಬ್ಬಿಣ ಕಡಲೆಯಂಥಹ
ಕ್ಲಿಷ್ಟವ ಸುಲಿದ ಬಾಳೆ ಹಣ್ಣಿನ
ಯಿಷ್ಟವಾಗುವ ರೀತಿ ಸುಲಭ ಸ್ವರೂಪಗೊಳಿಸಿದರು॥

ಕನಕ ಕಥನಾಮೃತವನ್ನು ಸುಂದರವಾಗಿ ಮುದ್ರಿಸಿದ್ದಾರೆ. ಆದರೆ ಅನೇಕ ಮುದ್ರಣ ದೋಷಗಳಿವೆ. ಅಲ್ಪಪ್ರಾಣ–ಮಹಾಪ್ರಾಣಗಳ ವ್ಯತ್ಯಾಸ ಅಧಿಕವಾಗಿದೆ. ಉದಾಹರಣೆಗೆ 38ನೆಯ ಪುಟವನ್ನು ನೋಡಿದರೆ ತಪ್ಪುಗಳ ಅರಿವಾಗುತ್ತದೆ. ಬುದ್ಧ ಎಂಬುದಕ್ಕೆ ಬುದ್ದ, ಭಿನ್ನ ಎಂಬುದಕ್ಕೆ ಬಿನ್ನ, ಶ್ರೇಷ್ಠ ಎಂಬುದಕ್ಕೆ ಶ್ರೇಷ್ಟ, ಸೃಷ್ಟಿ ಎಂಬುದಕ್ಕೆ ಸೃಷ್ಠಿ, ತುಷ್ಟಿ ಎಂಬುದಕ್ಕೆ ತುಷ್ಠಿ, ಮುಷ್ಟಿ ಎಂಬುದಕ್ಕೆ ಮುಷ್ಠಿ ಎಂದು ತಪ್ಪು ರೂಪಗಳು ಮುದ್ರಿತವಾಗಿವೆ. ಈ ರೀತಿಯ ತಪ್ಪುಗಳು ಬರದ ಹಾಗೆ ನೋಡಿಕೊಂಡಿದ್ದರೆ ಚೆನ್ನಾಗಿತ್ತು. ಕಾವ್ಯದ ಮೊದಲನೆಯ ಲಕ್ಷಣ ನಿರ್ದೋಷತ್ವ. ಅದರಲ್ಲೂ ವ್ಯಾಕರಣ ದೋಷವನ್ನು ಸರ್ವತಾ ತಪ್ಪಿಸಬೇಕು.

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗಡೆಯವರೂ ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳೂ, ಉಡುಪಿ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದಂಗಳವರೂ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳೂ ಶುಭವನ್ನು ಕೋರಿ ಶ್ರೀ ಸಿದ್ಧಾಚಾರ್ ಕವಿಮಿತ್ರರ ಕಾವ್ಯರಚನೆಯನ್ನು ಪ್ರೋತ್ಸಾಹಿಸಿದ್ದಾರೆ. ಅವರೆಲ್ಲರ ಆಶೀರ್ವಾದದಿಂದ ಕವಿಮಿತ್ರರ ಸಾಹಿತ್ಯವು ಜನಪ್ರಿಯವಾಗಲೆಂದೂ ಅವರ ಮುಂದಿನ ಕೃತಿಗಳು ಇತೋಪ್ಯತಿಶಯದಿಂದ ಸರಸವಾಗಿ, ಸಾಲಂಕಾರವಾಗಿ ಶೋಭಿಸಲೆಂದೂ ಕೋರುತ್ತೇನೆ.

ಭವ್ಯ ಶೈಲಿಯ ಗುಣದಿ ರಾಜಿಪ
ಕಾವ್ಯ ಹುಟ್ಟಲಿ ಸರಸ ಕೋಮಲ
ನವ್ಯತೆಯ ಪೊಂದಿರ್ದು ರಸಿಕರ ಮನವ ಮುದಗೊಳಿಸಿ।
ಹವ್ಯವನು ಸವಿದಿರ್ದ ವಿಬುಧರ
ದಿವ್ಯ ಹೃದಯವ ಗೆದ್ದು ಸುಜನರ
ಸುವ್ಯವಸ್ಥೆಯ ತರಲಿ ಸಿದ್ದಾಚಾರ್ಯ ಕವಿಮಿತ್ರ॥

ಜ್ಞಾನ ದೇಗುಲವಿದು ಮಾರಾಯ್ರೆ..., ವಿದ್ಯಾರ್ಥಿಗಳ ರಕ್ಷಿಸಿ...!



ಪ್ರಶಾಂತ್‌ಕುಮಾರ್ ಎ.ಪಿ.
ಸಹಾಯಕ ಪ್ರಾಧ್ಯಾಪಕರು,
ಕಂಪ್ಯೂಟರ್ ಸೈನ್ಸ್
ಇಂಜಿನಿಯರಿಂಗ್ ವಿಭಾಗ,
ಮೈಸೂರು ರಾಯಲ್ ತಾಂತ್ರಿಕ ಮಹಾವಿದ್ಯಾಲಯ.
ಮೊ: 9844859950



ಸುಮ್ಮನೆ ಇರಲಾರದೆ ಇರುವೆ ಬಿಟ್ಟು ಕೊಳ್ಳುವುದೇ ಜೀವನ ಎಂಬುದಕ್ಕೆ ಸೂಕ್ತ ನಿದರ್ಶನವಾಗಿದೆ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಇಂದಿನ ದಿನಗಳಲ್ಲಿ ತೆಗೆದುಕೊಳ್ಳುತ್ತಿರುವ ಹಾಸ್ಯಾಸ್ಪದ ನಿರ್ಧಾರಗಳು.

ರಾಜ್ಯದಲ್ಲಿರುವ ವಸತಿ ಶಾಲೆಗಳ ಮುಖ್ಯ ಪ್ರವೇಶ ದ್ವಾರದಲ್ಲಿ ಹಲವಾರು ವರ್ಷಗಳಿಂದಲೂ ಅರ್ಥಪೂರ್ಣವಾಗಿ ರಾರಾಜಿಸುತ್ತಿದ್ದ ರಾಷ್ಟ್ರಕವಿ, ರಸಋಷಿ ಕುವೆಂಪು ವಿರಚಿತ **'ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ'** ಘೋಷ ವಾಕ್ಯದ ಬದಲಾಗಿ ದಿಢೀರನೆ ಯಾರೋ ಒಬ್ಬ ಅಜ್ಞಾನಿ, ಅವಿವೇಕಿ ವಿರಚಿತ **'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸು'** ಎಂಬ ವಾಕ್ಯ ಪ್ರದರ್ಶನವಾಗಿದೆ.

ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆಗಳಿಗೆ ಸಾಧಕರ, ಮಹಾನುಭಾವರುಗಳ ನಾಮಾಕಿಂತವನ್ನು ಇಡಲಾಗಿದೆ. ಮೋರಾರ್ಜಿ ದೇಸಾಯಿ ವಸತಿ ಶಾಲೆ, ಇಂದಿರಾ ವಸತಿ ಶಾಲೆ, ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಏಕಲವ್ಯ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹೀಗೆ. ಅಯ್ಯೋ ಪಾಪ, ಈ ಎಲ್ಲಾ ಮಹಾನುಭಾವರುಗಳ ಆತ್ಮ 'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸು' ಎಂಬ ವಾಕ್ಯವನ್ನು ನೋಡಿ ಸಂಕಟ ಪಡುತ್ತಿವೆ, ಮರುಗುತ್ತಿವೆ.

ಅದೇನೆ ಇರಲಿ. ತಮ್ಮದೇ ವಸತಿ ಶಾಲೆಯ ವಿದ್ಯಾರ್ಥಿಯೊಬ್ಬ ನಿಮ್ಮ ಹೊಸ ವಾಕ್ಯವನ್ನು ಶಿರಸಾ ಪಾಲಿಸಿ ಈ ವಾಕ್ಯವನ್ನು ಸಂಶೋಧಿಸಿದ ಮಹಾಜ್ಞಾನಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಮತ್ತು ಘನ ಸರ್ಕಾರಕ್ಕೆ ಧೈರ್ಯವಾಗಿ ಈ ಕೆಳಗಿನ ಅಂಶಗಳನ್ನು ಪ್ರಶ್ನಿಸುತ್ತಿದ್ದಾನೆ. ಉತ್ತರಿಸುವ ಧೈರ್ಯವನ್ನು ತಾವು ಯಾರಾದರೂ ತೋರುವಿರಾ?

- ಬಹುತೇಕ ವಸತಿ ಶಾಲೆಗಳು ಇಂದಿಗೂ ಕೂಡ ಕಿರಿದಾದ ಬಾಡಿಗೆ ಕಟ್ಟದಲ್ಲಿಯೇ ನಡೆಯುತ್ತಿವೆ. ಯಾವಾಗ ಸ್ವಂತ ಸುಸಜ್ಜಿತ ಕಟ್ಟಡದ ಭಾಗ್ಯ ಕಲ್ಪಿಸುವಿರಿ.
- ಬಡ ಹಾಗೂ ಮಧ್ಯಮ ವರ್ಗದ ಮಕ್ಕಳುಗಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿರುವ ವಸತಿ ಶಾಲೆಗಳಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳನ್ನು ನೀಡುವ ಗ್ಯಾರಂಟಿಯನ್ನು ಯಾವಾಗ ಕೊಡುತ್ತೀರಿ?
- ಚೆನ್ನಾಗಿ ಓದುವ ಕನಸು ಹೊತ್ತು ವಸತಿ ಶಾಲೆಗೆ ಸೇರಿರುವ ನಮಗೆ ಕೆಲವು ಶಿಕ್ಷಕರು ನೀಡುವ ಶಾಲೆಯ ಶೌಚಾಲಯ, ಮಲ ಮೂತ್ರ ಗುಂಡಿಯನ್ನು ಸ್ವಚ್ಛಗೊಳಿಸುವ ಕಾರ್ಯದಿಂದ ಯಾವಾಗ ಮುಕ್ತಿಗೊಳಿಸುತ್ತೀರಿ?
- ಆರೋಗ್ಯಕರವಾಗಿ ಬೆಳೆಯುವ ಈ ವಯಸ್ಸಿನಲ್ಲಿ ಅತ್ಯಗತ್ಯವಾಗಿ ಬೇಕಾದ ಪೋಷಕಾಂಶಯುಕ್ತ ಉತ್ತಮ ಗುಣಮಟ್ಟದ ಆಹಾರವನ್ನು ಎಂದಿನಿಂದ ನೀಡುತ್ತೀರಿ ತಿಳಿಸುವಿರಾ?
- ಮಳೆ ಬಂದಾಗ ಸೋರುವ, ಹಾವು ಚೇಳುಗಳ ಕಾಟವಿರುವ, ಸೂಕ್ತ ರಕ್ಷಣೆಯಿಲ್ಲದ ಕೆಲವು ವಸತಿ ಕಟ್ಟಡಗಳಿಂದ ಯಾವಾಗ ನಮ್ಮನ್ನು ಉತ್ತಮ ಕಟ್ಟಡಕ್ಕೆ ವರ್ಗಾಯಿಸುವಿರಿ ಹೇಳುವಿರಾ?
- ಕೆಲವೇ ಕೆಲವು ಶಿಕ್ಷಕರುಗಳಿಂದ ಆಗುತ್ತಿರುವ ಮಾನಸಿಕ ಹಾಗೂ ದೈಹಿಕ ಕಿರುಕುಳದಿಂದ ಎಂದು ತಪ್ಪಿಸುವಿರಿ?
- ಅರ್ಹ ಖಾಯಂ ಶಿಕ್ಷಕರುಗಳನ್ನು ಎಂದು ನೇಮಿಸುವಿರಿ? ಇನ್ನೂ ಎಷ್ಟು ವರ್ಷಗಳು ಬೇಕು ಹೇಳುವಿರಾ?
- ಶುದ್ಧ ಕುಡಿಯುವ ನೀರು, ಸ್ವಚ್ಛವಾದ ಶೌಚಾಲಯಗಳು, ಉತ್ತಮ ಶೈಕ್ಷಣಿಕ ಪರಿಸರ, ಕ್ರೀಡಾ ಸೌಲಭ್ಯಗಳನ್ನು ನಾವು ಇದೇ ಶಾಲೆಯಲ್ಲಿ ಓದು ಮುಗಿಸುವುದರೊಳಗೆ ಒದಗಿಸುವಿರಾ?
- ಬಹು ಮುಖ್ಯವಾಗಿ, ರಾಜಕಾರಣಿಗಳೇ, ಮಂತ್ರಿಗಳೇ ಹಾಗೂ ಇಲಾಖೆಯ ಅಧಿಕಾರಗಳೇ ನಿಮ್ಮ ಸ್ವಂತ ಮಕ್ಕಳೂ ಸಹ ಇದೇ ರೀತಿ ದುಸ್ಥಿತಿಯಲ್ಲಿರುವ ವಸತಿ ಶಾಲೆಗಳಲ್ಲಿ ಓದುತ್ತಿದ್ದಾರೆಯೇ? ಓದಲು ಬಿಡುತ್ತೀರಾ?
- ರಾಜಕಾರಣವನ್ನು ಬದಿಗೊತ್ತಿ ಒಮ್ಮೆಯಾದರು ಮಾನವೀಯ ನೆಲೆಗಟ್ಟಿನಲ್ಲಿ ಯೋಚಿಸಿ ನಮಗೆ ನ್ಯಾಯಯುತವಾಗಿ, ಸಂವಿಧಾನತ್ಮಕವಾಗಿ, ಕಾನೂನಾತ್ಮಕವಾಗಿ ಸಲ್ಲಬೇಕಾದ ಎಲ್ಲಾ ಸವಲತ್ತುಗಳನ್ನು ಕಲ್ಪಿಸಿ ಭವಿಷ್ಯದ ಉತ್ತಮ ಪ್ರಜೆಗಳಾಗಲು ಒಂದು ಅವಕಾಶ ನೀಡುವಿರಾ?
- ನಮಗಂತಲೇ ಒದಗಿಸುವ ಅನ್ನ, ತರಕಾರಿ, ಬೇಳೆ ಕಾಳುಗಳು, ಮೊಟ್ಟೆ, ಹಣ್ಣುಗಳಲ್ಲಿ ಪಾಲು ಕೇಳದೆ ನಮಗೆ ಸಂಪೂರ್ಣವಾಗಿ ಬಿಟ್ಟು ಕೊಡುವಿರಾ?
- ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳೆಂದು ತಿಳಿದು ಮೇಲಿನ ಎಲ್ಲಾ ತೊಂದರೆಗಳಿಂದ ಕಾಪಾಡುವಿರಾ? ಅದನ್ನು ಬಿಟ್ಟು ಧೈರ್ಯವಾಗಿ ಪ್ರಶ್ನಿಸು ಎಂದು ಮತ್ತೆ ಕೇಳುವಿರಾ?

'ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ' ಎಂಬ ಘೋಷ ವಾಕ್ಯದಲ್ಲಿ ಒಬ್ಬ ಮಂತ್ರಿವರ್ಯ ಹೇಳುವ ಹಾಗೆ ಕೈ ಮುಗಿದು ಒಳಗೆ ಬಾ ಎನ್ನುವುದು ಬೇಡುವುದನ್ನು, ಅಂಗಲಾಚುವುದನ್ನು ಸೂಚಿಸುವುದಿಲ್ಲ. ಬದಲಾಗಿ, ದೇವಸ್ಥಾನದಂತಿರುವ ಶಾಲೆಗೆ, ವಿದ್ಯಾಧರಿತ್ರಿ ಸರಸ್ವತಿ ಮಾತೆ ನೆಲೆಸಿರುವ ಪವಿತ್ರ ಜಾಗಕ್ಕೆ ಹೋಗುವ ಮೊದಲು ನಮ್ರತೆಯಿಂದ, ವಿನಯ ಪೂರ್ವಕವಾಗಿ, ಶ್ರದ್ಧಾ ಭಕ್ತಿಯಿಂದ ನಮಸ್ಕರಿಸುವುದನ್ನು ತಿಳಿಸುತ್ತದೆ, ದೇವಸ್ಥಾನದಲ್ಲಿ ದೇವರಿದ್ದಾನೆ ಎಂಬ ಬಲವಾದ ನಂಬಿಕೆ ನಮಗೆ ಹೇಗಿದೆಯೋ, ಹಾಗೆಯೇ ದೇವಸ್ಥಾನಕ್ಕೆ ಸಮನಾದ ಶಾಲೆಯಲ್ಲಿ ಮಕ್ಕಳೆಂಬ ದೇವರಿರುತ್ತಾರೆ.

ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಶಾಲೆ ಪಾವಿತ್ರ್ಯತೆಯುಳ್ಳ ಸ್ಥಳಕ್ಕೆ, ಗುರು ಹಿರಿಯರಿಗೆ ನಮಸ್ಕರಿಸುವುದನ್ನು, ಗೌರವ ಕೊಡುವುದನ್ನು ಕಲಿಸಿದರೆ ಸಾಕು, ನಂತರ ಧೈರ್ಯ ತನ್ನಂತಾನೆ ಬರುತ್ತದೆ. ಅದನ್ನು ಬಿಟ್ಟು ಧೈರ್ಯದಿಂದ ಪ್ರಶ್ನಿಸಿ ಎಂದು ಪ್ರವೇಶ ದ್ವಾರದಲ್ಲಿ ದೊಡ್ಡದಾಗಿ ಬರೆದು ತೋರಿಸಬೇಕಿಲ್ಲ. ಕೈ ಮುಗಿಯುವುದು ಬೇಡುವುದನ್ನು, ಜೀತ ಪದ್ದತಿಯನ್ನು ತೋರಿಸುತ್ತದೆ ಎಂದಾದರೆ, ರಾಜಕಾರಣಿಗಳಾದ ನೀವು ಚುನಾವಣಾ ಸಂದರ್ಭದಲ್ಲಿ ಮತದಾರರಿಗೆ ಕೈ ಮುಗಿಯುತ್ತೀರಿ? ಬೇಡುತ್ತೀರಿ? ಹಾಗಾದರೆ ನೀವು ಜೀತದಾಳುಗಳೇ? ಬೇಡುವ ಭಿಕ್ಷಕರೇ? ಮತ್ತೊಂದೆಡೆ ನಿಮ್ಮ ಇಲಾಖೆಯ ಅಧಿಕಾರಿಗಳು ನಿಮ್ಮನ್ನು ನೋಡಿ ಕೈ ಮುಗಿಯುತ್ತಾರೆ. ಹಾಗಾದರೆ, ನಿಮ್ಮ ಅಧಿಕಾರಿಗಳು ಜೀತದಾಳುಗಳೇ? ಭಿಕ್ಷುಕರೇ?

ನೆನಪಿರಲಿ, ಭೂಮಿಯ ಮೇಲಿರುವ ಮನುಷ್ಯರೆಲ್ಲರೂ ಒಂದರ್ಥದಲ್ಲಿ ಬಿಕ್ಷುಕರೆ. ನಾವು ಜೀವಿಸಲು ತಿನ್ನುವ ಅನ್ನ, ಕುಡಿಯುವ ನೀರು, ಉಸಿರಾಡುವ ಗಾಳಿ ಎಲ್ಲವೂ ಭೂಮಿ ತಾಯಿ ನಮಗೆ ಪ್ರತೀ ದಿನ ಪ್ರತೀ ಕ್ಷಣ ನೀಡುತ್ತಿರುವ ಭಿಕ್ಷೆ. ಅಷ್ಟೇ ಏಕೆ ಈ ಜೀವವೇ ತಂದೆ–ತಾಯಿ, ದೇವರು ನೀಡಿರುವ ಭಿಕ್ಷೆ ಅಲ್ಲವೇ?

'ಜ್ಞಾನ ದೇಗುಲವಿದು, ಕೈ ಮುಗಿದು ಒಳಗೆ ಬಾ. ಬಂದು ವಿದ್ಯಾರ್ಥಿಗಳನ್ನು ರಕ್ಷಿಸಿ. ನಂತರ ಪ್ರಶ್ನಿಸಿ' ಆಯ್ತು ಮಾರಾಯರೆ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visvesvaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚುನಾವಣಾ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಪಾಲಿಸಿ

ಅಧೀನ ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ





ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಲೋಕಸಭಾ ಚುನಾವಣಾ ನೀತಿ ಸಂಹಿತೆ ಸಂಬಂಧ ತರಬೇತಿ ನೀಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳನ್ನು ಎಡಚಿತ್ರದಲ್ಲಿ ಕಾಣಬಹುದು.

ಚೆಕ್‌ಪೋಸ್ಟ್ ಸ್ಥಾಪಿಸಿ

“ಅಗತ್ಯವಿರುವೆಡೆ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಪ್ರಮುಖ ರಸ್ತೆಗಳಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಿ ಬರುವ ಹಾಗೂ ಹೋಗುವ ವಾಹನಗಳನ್ನು ತಪಾಸಣೆ ಮಾಡಿ ಅಕ್ರಮವಾಗಿ ಚಿನ್ನಾಭರಣ, ಗೃಹ ಬಳಕೆ ವಸ್ತುಗಳು, ಹಣ, ಮಾದಕ ವಸ್ತು, ಮದ್ಯ ಸಾಗಣೆಯಾಗದಂತೆ ತಡೆದರೆ ಎಷ್ಟೋ ಸಮಸ್ಯೆಗಳು ಉದ್ಭವಿಸುವುದಿಲ್ಲ. ಸಾಧ್ಯವಾದರೆ ಕೆಲ ಸಮಸ್ಯೆಗಳನ್ನು ನಿಮ್ಮ ಹಂತದಲ್ಲೇ ಬಗೆಹರಿಸಿ ವ್ಯಾಪ್ತಿ ಮೀರಿದ ವಿವಾದಗಳನ್ನು ಉನ್ನತ ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿ.
–ಡಾ.ಕೆ.ವಿ.ರಾಜೇಂದ್ರ, ಡಿಸಿ.

ಮೈಸೂರು,ಫೆ.20(ಆರ್‌ಕೆ)–ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಪರಿಣಾಮಕಾರಿಯಾಗಿ ಯಾವುದೇ ಲೋಪವಾಗದಂತೆ ಕರ್ತವ್ಯ ನಿರ್ವಹಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಇಂದಿಲ್ಲಿ ಅಧೀನ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮಾರ್ಗಸೂಚಿಯನ್ವಯ ಕೆಲಸ ಮಾಡಿ: ಕಲಾಮಂದಿರದಲ್ಲಿ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆಯು ಯಾವ ಸಂದರ್ಭದಲ್ಲಾದರೂ ಘೋಷಣೆಯಾಗಬಹುದಾಗಿದ್ದು, ನಾವು ಸರ್ವರೀತಿಯಲ್ಲಿ ಸಜ್ಜಾಗಬೇಕಿದೆ. ಭಾರತ ಚುನಾವಣಾ ಆಯೋಗವು ಆಗಿಂದಾಗ್ಗೆ ನೀಡುವ ಮಾರ್ಗಸೂಚಿಯನ್ವಯ ಕೆಲಸ ಮಾಡಬೇಕಾಗುತ್ತದೆ ಎಂದರು.

ಅಧಿಸೂಚನೆ ಹೊರಡಿಸಿದ ದಿನದಿಂದ ಫಲಿತಾಂಶ ಪ್ರಕಟವಾಗುವವರೆಗೂ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಕಳೆದ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಂತೆ ಈ ಚುನಾವಣೆಯಲ್ಲೂ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವ ಮೂಲಕ ಯಾವುದೇ ಸಮಸ್ಯೆಗಳಾಗದಂತೆ ನೋಡಿಕೊಂಡು ಶಾಂತಿಯುತವಾಗಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲು ಎಲ್ಲರೂ ಪ್ರಾಮಾಣಿಕವಾಗಿ ಶ್ರಮ ವಹಿಸಬೇಕು ಎಂದು ಅವರು ಇದೇ ವೇಳೆ ತಾಕೀತು ಮಾಡಿದರು.

ಸಭೆ–ಸಮಾರಂಭಕ್ಕೆ ಅನುಮತಿ: ಪೊಲೀಸ್ ಅಧಿಕಾರಿಗಳ ಅನುಮತಿ ಇಲ್ಲದೇ ಯಾವುದೇ ಸಭೆ ಸಮಾರಂಭ ನಡೆಯಲು ಅವಕಾಶ ಕಲ್ಪಿಸಬಾರದು. ರಾಜಕೀಯ ಪಕ್ಷಗಳ ಅಥವಾ ಚುನಾವಣೆಗೆ ಸಂಬಂಧಿಸಿದ ಬ್ಯಾನರ್, ಬಂಟಿಂಗ್ಸ್ ಪೋಸ್ಟರ್‌ಗಳನ್ನು ಹಾಕಲು ಬಿಡಬಾರದು. ಕಂಡುಬಂದಲ್ಲಿ ತೆರವುಗೊಳಿಸಿ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಿಂಜರಿಯಬೇಡಿ ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರಗತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳಲು ಅಡ್ಡಿಪಡಿಸಬೇಡಿ. ನೀತಿ ಸಂಹಿತೆ ಜಾರಿಗೆ ಬಂದ ನಂತರ ಹೊಸ ಕಾಮಗಾರಿ ಆರಂಭವಾಗುವಂತಿಲ್ಲ. ಒಂದು ವೇಳೆ ಕಂಡು ಬಂದರೆ ನೀವೇ ಕ್ರಮ ಕೈಗೊಳ್ಳುವ ಅಧಿಕಾರವಿದೆ. ಚುನಾವಣಾ ಆಯೋಗದ ನಿಯಮದಲ್ಲಿ ನೀಡಿರುವ ಅಧಿಕಾರ ಬಳಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಂಡ ಕಂಡಲ್ಲಿ ಪೋಸ್ಟರ್‌ಗೆ ಅವಕಾಶವಿಲ್ಲ: ಸರ್ಕಾರಿ, ಸಾರ್ವಜನಿಕ ಕಟ್ಟಡಗಳ ಮೇಲೆ ಚುನಾವಣಾ ಪ್ರಚಾರದ ಜಾಹೀರಾತಾಗಲೀ, ಫ್ಲೆಕ್ಸ್, ಬ್ಯಾನರ್ ಹಾಕುವಂತಿಲ್ಲ. ರಾಜಕೀಯ ಪಕ್ಷಗಳು, ಅಭ್ಯರ್ಥಿ, ಭಾವಚಿತ್ರವಿರುವ ಯಾವುದೇ ಜಾಹೀರಾತಿಗೆ ಸಾರ್ವಜನಿಕ ಆಸ್ತಿ ಬಳಸದಂತೆ ನಿಯೋಜಿತ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಡಾ.ರಾಜೇಂದ್ರ, ಇದೇ ವೇಳೆ ಸಲಹೆ ನೀಡಿದರು. ಪರಸ್ಪರ ಸಮನ್ವಯ ಸಾಧಿಸಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನೋಡಿಕೊಂಡು ಸಾರ್ವಜನಿಕರು ಮಾಹಿತಿ ನೀಡಿದಾಗ ವಿಳಂಬ ಮಾಡದೇ ಸ್ಥಳಕ್ಕೆ ತೆರಳಿ ಪರಿಶೀಲಿಸಬೇಕು. ಸಮಸ್ಯೆ ನಿವಾರಿಸಬೇಕೆಂದು ತಿಳಿಸಿದ ಅವರು, ಕುಂಟುನೆಪ ಹೇಳಿ ಚುನಾವಣಾ ಕಾರ್ಯದಿಂದ ದೂರ ಉಳಿಯುವಂತಿಲ್ಲ ಎಂದು ಅವರು ಎಚ್ಚರಿಕೆ ನೀಡಿದರು.

ಸಾರ್ವಜನಿಕರಿಗೆ ತೊಂದರೆ ಕೊಡಬೇಡಿ: ಚುನಾವಣಾ ನೀತಿ ಸಂಹಿತೆ ಪಾಲಿಸುವ ಭರದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಿ, ವ್ಯಾಪ್ತಿ ಮೀರಿ ವರ್ತಿಸುವುದರಿಂದ ಅಮಾಯಕರು ಸಮಸ್ಯೆಗೆ ಸಿಲುಕುವಂತಾಗಬಾರದು. ಒಟ್ಟಾರೆ ಲೋಕಸಭಾ ಸಾರ್ವತ್ರಿಕ ಚುನಾವಣೆ ಶೇ.100ರಷ್ಟು ಸುಲಲಿತವಾಗಿ ನಡೆಯಲು ಎಲ್ಲರೂ ಶ್ರಮಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೇರಿದಂತೆ ಎಲ್ಲಾ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ತರಬೇತಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಜಯಂತಿ ಅಂಗವಾಗಿ ನಾಡಕುಸ್ತಿ ಟೂರ್ನಿ



ಸುದ್ದಿಗೋಷ್ಠಿಯಲ್ಲಿ ನಾಡಕುಸ್ತಿ ಟೂರ್ನಿಯ ಭಿತ್ತಿಪತ್ರ ಬಿಡುಗಡೆ ಗೊಳಿಸಲಾಯಿತು.

ಮೈಸೂರು,ಫೆ.20(ಜಿಎ)–ಜಯಚಾಮರಾಜ ಒಡೆಯರ್ ಗರಡಿ ಸಂಘದಿಂದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಜಯಂತಿ ಪ್ರಯುಕ್ತ ಫೆ.25ರಂದು ಮಧ್ಯಾಹ್ನ 3 ಗಂಟೆಗೆ ನಗರದ ಜಯಚಾಮರಾಜ ಒಡೆಯರ್ ಕುಸ್ತಿ ಅಖಾಡದಲ್ಲಿ ನಾಡಕುಸ್ತಿ ಟೂರ್ನಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಮಹಾದೇವ ಈ ವಿಷಯ ತಿಳಿಸಿ, ಪಂದ್ಯಾವಳಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸುವರು. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ಟ್ರಸ್ಟಿ ಎಂ.ಲಕ್ಷ್ಮೀನಾರಾಯಣ್ ಅಧ್ಯಕ್ಷತೆ ವಹಿಸುವರು ಎಂದರು.

ಪಂದ್ಯಾವಳಿಯಲ್ಲಿ ಮಹಿಳೆಯರ 6 ಜೋಡಿಗಳು ಸೇರಿದಂತೆ 57 ಜೋಡಿಗಳು ಕುಸ್ತಿಯಲ್ಲಿ ಭಾಗವಹಿಸಲಿವೆ. ಅಂದು ಸಂಜೆ ವಿಜೇತರಿಗೆ ಪ್ರಶಸ್ತಿ ಪ್ರದಾನವೂ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಸಿ.ಬಸವರಾಜು, ಮಹಾಲಿಂಗೇಶ್ವರ ದೇವಾಲಯ ಕಾರ್ಯದರ್ಶಿ ಜಿ.ಎನ್.ಅನಂತವರ್ಧನ ಉಪಸ್ಥಿತರಿದ್ದರು.

ಕೇಂದ್ರದಿಂದ ಮೈಸೂರು ವಿಮಾನ ನಿಲ್ದಾಣ ಕಡೆಗಣನೆ ಆರೋಪ

ಅಭಿವೃದ್ಧಿಪಡಿಸದಿದ್ದರೆ ಜಂತರ್–ಮಂತರ್‌ನಲ್ಲಿ ಪ್ರತಿಭಟನೆ ಎಚ್ಚರಿಕೆ



ಸುದ್ದಿಗೋಷ್ಠಿಯಲ್ಲಿ ಮಂಜುಳಾ ಮಂಜುನಾಥ್ ಮಾತನಾಡಿದರು.

ಮೈಸೂರು,ಫೆ.20(ಜಿಎ)–ದ್ವೇಷದ ರಾಜಕಾರಣ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿಯನ್ನು ಕಡೆಗಣಿಸಿದ್ದು, ಇದು ಹೀಗೆ ಮುಂದುವರೆದರೆ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಕ್ಕೆ ಸಾಕಷ್ಟು ಬಾರಿ ಬಂದು ಚುನಾವಣಾ ಪ್ರಚಾರ ನಡೆಸಿದರೂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಕಂಡಿದ್ದರಿಂದ ಪ್ರಧಾನಿ ನರೇಂದ್ರ ಮೋದಿಯವರು ಈ ರೀತಿ ದ್ವೇಷ ತೀರಿಸಿಕೊಳ್ಳುತ್ತಿದ್ದಾರೆ ಎಂದರು.

ದೇಶದ ಅನೇಕ ಭಾಗಗಳಿಗೆ ನಿತ್ಯವೂ ವಿಮಾನಗಳ ಸಂಚಾರವಿದ್ದರೂ ಮೈಸೂರಿನ ವಿಮಾನ ನಿಲ್ದಾಣದಲ್ಲಿ ಇಂಧನ ಸಬ್ಸಿಡಿ ಕಡಿತಗೊಳಿಸಿ, ಸಂಪೂರ್ಣ ಸೊರಗುವಂತೆ ಮಾಡಿದ್ದಾರೆ. ಜೊತೆಗೆ ಅಭಿವೃದ್ಧಿ ಮಾಡುತ್ತೇವೆ, ಭೂಮಿ ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದೆ ಎನ್ನುತ್ತಾ ಸುತ್ತಮುತ್ತಲಿನ ರೈತರ ಜಮೀನು ಮಾರಾಟಕ್ಕೂ ಸಮಸ್ಯೆ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಕಡಕೊಳ ಶಿವಲಿಂಗ, ಕೆಪಿಸಿಸಿ ಎಸ್ಸಿ ಘಟಕದ ಕಾರ್ಯದರ್ಶಿ ವಿಜಯಕುಮಾರ್, ಸದಸ್ಯ ಸೋಮಶೇಖರ್, ಕಿಸಾನ್ ಸೆಲ್ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಉಪಸ್ಥಿತರಿದ್ದರು.

“ರಾಜ್ಯ ಸರ್ಕಾರ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸಿದ್ಧವಿದ್ದು, ಕೇಂದ್ರ ಸರ್ಕಾರವು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ರೈತರು ಹಾಗೂ ನಗರವಾಸಿಗಳ ಅಭಿವೃದ್ಧಿಯಲ್ಲಿ ಚೆಲ್ಲಾಟವಾಡಬಾರದು. ಹಾಗೆಯೇ ಮಹಿಳೆಯರ ಸ್ವಾವಲಂಬನೆಗಾಗಿ ಸಾಕಷ್ಟು ಕೆಲಸ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ಇಡಬೇಕು. –ಮಂಜುಳಾ ಮಂಜುನಾಥ್

ಕಾಡು ಬಸವೇಶ್ವರ ಸ್ವಾಮಿಗೆ ಸೇರಿದ ಜಾಗ ಈದ್ಗಾ ಮೈದಾನಕ್ಕೆ ಹಸ್ತಾಂತರ ಆರೋಪ



ಸುದ್ದಿಗೋಷ್ಠಿಯಲ್ಲಿ ಗಿರಿಗೌಡ ಮಾತನಾಡುತ್ತಿರುವುದು.

ಮೈಸೂರು, ಫೆ.20(ಜಿಎ)–ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದ ಸರ್ವೆ ನಂ.7ರಲ್ಲಿನ 0.38 ಗುಂಟೆ ಜಾಗದಲ್ಲಿ ಕಾಡು ಬಸವೇಶ್ವರ ಸ್ವಾಮಿಯ ಶಿಲಾಮೂರ್ತಿಯಿದ್ದು, ಗ್ರಾಮಸ್ಥರ ಅರಿವಿಗೆ ಬಾರದಂತೆ ಈ ಜಾಗವನ್ನು ಈದ್ಗಾ ಮೈದಾನಕ್ಕೆ ಒಪ್ಪಿಸಲಾಗಿದೆ ಎಂದು ಹೇಳಲಾಗುತ್ತಿದೆ. ಕೂಡಲೇ ಇದನ್ನು ಕಾಡು ಬಸವೇಶ್ವರ ಸ್ವಾಮಿ ಹೆಸರಿಗೆ ಬದಲಾಯಿಸಬೇಕು ಎಂದು ಗ್ರಾಮದ ಗಿರಿಗೌಡ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿರುವ ಕಾಡು ಬಸವೇಶ್ವರ ಸ್ವಾಮಿಯ ಮೂರ್ತಿಗೆ ನಮ್ಮ ಪೂರ್ವಜರು ಪೂಜಾ ಕೈಂಕರ್ಯ ಮಾಡಿಕೊಂಡು ಬಂದಿದ್ದು, 2023ರ ಡಿಸೆಂಬರ್ 8ರಂದು ಕಾಡು ಬಸವೇಶ್ವರ ಮೂರ್ತಿ ಕಾಣುತ್ತಿಲ್ಲ ಎಂದು ಗ್ರಾಮಸ್ಥರು ತಿಳಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ನೋಡಿದ್ದಾಗ ಆ ಸ್ಥಳದಲ್ಲಿ ಮೂರ್ತಿ ಇರಲಿಲ್ಲ. ಈ ಸಂಬಂಧ ಗ್ರಾಮಸ್ಥರೆಲ್ಲಾ ಬೆಟ್ಟದಪುರ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಯಿತು ಎಂದರು.

ದೂರು ನೀಡಿದ ಕೆಲವೇ ದಿನಗಳಲ್ಲಿ ಕಲ್ಲು ಬಂಡೆ ಸಮೀಪದಲ್ಲಿನ ಪೊದೆಯಲ್ಲಿ ಮೂರ್ತಿ ಪತ್ತೆಯಾಗಿದ್ದು, ಅದನ್ನು ಅದೇ ಸ್ಥಳದಲ್ಲಿ ಪ್ರತಿಷ್ಠಾಪಿಸಿ ಮೊದಲಿನಂತೆ ಪೂಜಾ ಕೈಂಕರ್ಯವನ್ನು ಮುಂದುವರೆಸಿಕೊಂಡು ಬರಲಾಗಿತ್ತು. ಆದರೆ, ನಂತರ ಪಿರಿಯಾಪಟ್ಟಣ ತಾಲೂಕು ಸರ್ವೆ ಅಧಿಕಾರಿಗಳು ಪೊಲೀಸರೊಡನೆ ಸ್ಥಳಕ್ಕೆ ಬಂದು ಈ ಸ್ಥಳವನ್ನು ಅಳತೆ ಮಾಡಲು ಆದೇಶವಾಗಿದೆ ಎಂದು ತಿಳಿಸಿ, ಜಾಗದ ಸುತ್ತಲೂ ಬೆಳೆದ ಗಿಡಗಂಟಿಗಳನ್ನು ತೆರವುಗೊಳಿಸಿದರು. ತದನಂತರ ಈ ಸರ್ವೇ ನಂಬರ್ ಜಾಗವನ್ನು ಮುಸ್ಲಿಂ ಜನಾಂಗದ ಈದ್ಗಾ ಮೈದಾನಕ್ಕಾಗಿ ಮೀಸಲಿಡಲಾಗಿದೆ ಎಂದು ತಿಳಿಸಿದರು. ಈ ವಿಚಾರ ತಿಳಿದು ಗ್ರಾಮಸ್ಥರಿಗೆ ಆಘಾತವುಂಟಾಯಿತು.

ಈಗಾಗಲೇ ಗ್ರಾಮದಲ್ಲಿ ಮುಸ್ಲಿಂ ಬಾಂಧವರಿಗಾಗಿ ಮಸೀದಿ, ಸ್ಮಶಾನ ಮತ್ತು ಈದ್ಗಾ ಮೈದಾನಕ್ಕೂ ಸ್ಥಳ ನೀಡಲಾಗಿದ್ದು, ಈ ನಡುವೆ ಮತ್ತೆ ಈದ್ಗಾ ಮೈದಾನಕ್ಕಾಗಿ ಈ ಜಾಗವನ್ನು ನೀಡಲಾಗಿದೆ. ಜೊತೆಗೆ ಈ ಸ್ಥಳದಲ್ಲಿ 144 ಸೆಕ್ಷನ್ ಜಾರಿ ಮಾಡಿ, ಯಾರು ಪೂಜೆ ಮತ್ತು ಪ್ರವೇಶ ಮಾಡಬಾರದು ಎಂದು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಗ್ರಾಮದ ಗಂಗಾಧರ್, ರಮೇಶ್, ನಂಜುಂಡಸ್ವಾಮಿ, ರಾಮಚಂದ್ರ ಇದ್ದರು.


“ಜಾಗಕ್ಕೆ ಸಂಬಂಧಿಸಿದಂತೆ ಗೊಂದಲಗಳು ಉಂಟಾಗಿದ್ದು, ನಮಗೆ ನ್ಯಾಯ ಒದಗಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಪ್ರಸ್ತುತ ಆ ಜಾಗದಲ್ಲಿ ಸೆಕ್ಷನ್ 144 ಜಾರಿ ಮಾಡಿದ್ದು, ಫೆ.24ರಂದು ಬೆಟ್ಟದಪುರ ಗ್ರಾಮದಲ್ಲಿ ನಡೆಯುವ ಮಲ್ಲಿಕಾರ್ಜುನ ಸ್ವಾಮಿ ಜಾತ್ರೆಗೆ ಅನಾನುಕೂಲವಾಗದಂತೆ ನಿಷೇಧಾಜ್ಞೆ ತೆರವುಗೊಳಿಸಬೇಕು. –ಗಿರಿಗೌಡ

ಸಿಇಟಿ, ನೀಟ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಫೆ.20–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಪಿಯುಸಿ ನಂತರದ ವೃತ್ತಿಪರ ಉನ್ನತ ಶಿಕ್ಷಣಕ್ಕಾಗಿ ಕರ್ನಾಟಕ ಸರ್ಕಾರ ನಡೆಸಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಕೆ–ಸಿಇಟಿ ಮತ್ತು ನೀಟ್) 30 ದಿನಗಳ ತರಬೇತಿಯನ್ನು ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಚೇರಿಯಲ್ಲಿ ಫೆ.27ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2515944 ಅನ್ನು ಸಂಪರ್ಕಿಸಬಹುದು ಎಂದು ಕರಾಮುವಿ ಕುಲಸಚಿವ ಪ್ರೊ. ಕೆ.ಎಲ್.ಎನ್ ಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಕೃಷ್ಣ ಗಾನಸಭಾ ವಾರ್ಷಿಕೋತ್ಸವದ ಅಂಗವಾಗಿ ಸಂಗೀತ ಕಛೇರಿ, ಜಯಂತ್ಯುತ್ಸವ



ವಿಠ್ಠಲ ರಾಮಮೂರ್ತಿ | ಶ್ರೀಹರಿ ವಿಠ್ಠಲ್ | ಮೈಸೂರು ಶ್ರೀನಾಥ್ | ಮೇದಾ ಮಂಜುನಾಥ್

ಮೈಸೂರು, ಫೆ. 20 – ಮೈಸೂರಿನ ಶ್ರೀ ಕೃಷ್ಣ ಗಾನಸಭಾದ 22ನೇ ವಾರ್ಷಿಕೋತ್ಸವದ ಅಂಗವಾಗಿ ಫೆ.21ರಿಂದ 24ರವರೆಗೆ ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಆಳ್ವಾರ್ ಕಲಾಭವನದಲ್ಲಿ ಸಂಗೀತ ಕಛೇರಿ, ಪಿಟೀಲು ಚೌಡಯ್ಯ ಜಯಂತಿ, ಶ್ರೀ ಚಾಮರಾಜ ಒಡೆಯರ್ X ಜಯಂತಿ, ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವವನ್ನು ಏರ್ಪಡಿಸಲಾಗಿದೆ.

ಫೆ.21ರಂದು ಸಂಜೆ 6ಕ್ಕೆ ಸಂಗೀತ ಕಲಾ ಶಿಖಾಮಣಿ ಪಿಟೀಲು ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಉದ್ಘಾಟಿಸುವರು.

ಇದೇ ವೇಳೆ 'ಸ್ಟಾರ್ ಆಫ್ ಮೈಸೂರ್' ಮತ್ತು ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಡಾ.ಕೆ.ಬಿ.ಗಣಪತಿ ಅವರನ್ನು ಸನ್ಮಾನಿಸಲಾಗುವುದು.

ಶ್ರೀ ಕೃಷ್ಣ ಗಾನಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್ ಅಧ್ಯಕ್ಷತೆ ವಹಿಸುವರು. ಅಂದು ಸಂಜೆ ವಿದ್ವಾನ್ ವಿಠ್ಠಲ ರಾಮಮೂರ್ತಿ ಮತ್ತು ವಿದ್ವಾನ್ ಶ್ರೀಹರಿ ವಿಠ್ಠಲ ಅವರಿಂದ ದ್ವಂದ್ವ ವಯೋಲಿನ್ ವಾದನವಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಂ.ಆರ್.ಮಂಜುನಾಥ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಫೆ.22ರಂದು ಸಂಜೆ 6 ಗಂಟೆಗೆ ಮಹಾರಾಜ ಶ್ರೀ ಚಾಮರಾಜ ಒಡೆಯರ್ ಜಯಂತಿ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಭಾಗವಹಿಸುವರು.

ಇದೇ ವೇಳೆ, ವಿದ್ವಾನ್ ಕೆ.ಪಿ.ಮಂಜುನಾಥ್ ಅವರಿಂದ ವ್ಯಾಖ್ಯಾನವಿದೆ. ಖ್ಯಾತ ಗಮಕಿ ಮತ್ತು ಗಾಯಕಿ ವಿದುಷಿ ಶುಭಾ ರಾಘವೇಂದ್ರ ಅವರಿಂದ ಕುಮಾರವ್ಯಾಸ ಬರೆದಿರುವ ಕರ್ನಾಟಕ ಭಾರತ ಕಥಾ ಮಂಜರಿಯ ಕೃಷ್ಣ ಬೇದೋಪಾಯ ಕುರಿತು ಕಾವ್ಯವಾಚನವಿದೆ.

ಫೆ23ರಂದು ಸಂಜೆ 6.30ಕ್ಕೆ ಗೋಕುಲಂನ ಆಳ್ವಾರ್ ಕಲಾಭವನದಲ್ಲಿ ಡಾ.ಸಿ.ಎಂ. ಮುನಿರಾಮಪ್ಪ ಮತ್ತು ಕುಟುಂಬದವರ ಪ್ರಾಯೋಜಕತ್ವದಲ್ಲಿ ತಮ್ಮ ಪೋಷಕರ ನೆನಪಾರ್ಥ ವಿದ್ವಾನ್ ಮೈಸೂರು ಎನ್.ಶ್ರೀನಾಥ್ ಅವರಿಂದ ಗಾಯನ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಎಂ.ಡಿ.ಅರ್ಜುನ್–ವಯೋಲಿನ್, ವಿದ್ವಾನ್ ಪಿ.ಎಸ್.ಶ್ರೀಧರ್–ಮೃದಂಗ ಮತ್ತು ವಿದ್ವಾನ್ ವಿ.ಎಸ್.ರಮೇಶ್–ಮೋರ್ಚಿಂಗ್‌ನಲ್ಲಿ ಸಹಕಾರ ನೀಡಲಿದ್ದಾರೆ.

ಫೆ.24ರಂದು ಬೆಳಗ್ಗೆ 9.30ಕ್ಕೆ ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ ಏರ್ಪಡಿಸಲಾಗಿದೆ. ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರಿಂದ ಗೋಷ್ಠಿ ಗಾಯನ, ನಂತರ ವಿದುಷಿ ಮೇಧಾ ಮಂಜುನಾಥ್ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಪಕ್ಕವಾದ್ಯದಲ್ಲಿ ವಿದುಷಿ ಸಿ.ವಿ.ಶ್ರುತಿ–ವಯೋಲಿನ್, ವಿದ್ವಾನ್ ಎಂ.ಎಸ್.ಜಯರಾಮ್–ಮೃದಂಗ ಮತ್ತು ವಿದ್ವಾನ್ ಎಂ.ಜೆ.ಕಿರಣ್ ಕುಮಾರ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ನಾಳೆ ಹಂಚ್ಯಾ ಗ್ರಾಮದಲ್ಲಿ ಭದ್ರಕಾಳಿ, ಆಂಜನೇಯ ಸ್ವಾಮಿ ದೇವಸ್ಥಾನ ಉದ್ಘಾಟನೆ

ಮಹಿಳಾ ಜೋಡಿ ಸೇರಿದಂತೆ 35 ಜೋಡಿ ನಾಡಕುಸ್ತಿ ಟೂರ್ನಿ



ಸುದ್ದಿಗೋಷ್ಠಿಯಲ್ಲಿ ಕುಸ್ತಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಫೆ.20(ಜಿಎ)–ಮೈಸೂರು ತಾಲೂಕಿನ ಹಂಚ್ಯಾ ಗ್ರಾಮದಲ್ಲಿ ಫೆ.22ರಂದು ಭದ್ರಕಾಳಿ ಹಾಗೂ ಆಂಜನೇಯ ಸ್ವಾಮಿಯ ನೂತನ ದೇವಸ್ಥಾನಗಳ ಉದ್ಘಾಟನೆ ಹಾಗೂ ನಾಡಕುಸ್ತಿ ಟೂರ್ನಿ ನಡೆಯಲಿದೆ ಎಂದು ಕುಸ್ತಿ ಸಮಿತಿ ಸಂಚಾಲಕ ಮಲ್ಲುಸ್ವಾಮಿ ಎನ್.ಗಂಜಾಂ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ಮಹಿಳಾ ಜೋಡಿಗಳು ಸೇರಿದಂತೆ 35 ಜೋಡಿಗಳು ಟೂರ್ನಿಯಲ್ಲಿ ಭಾಗವಹಿಸಲಿವೆ ಎರಡು ಮಾರ್ಫೀಟ್ ಕುಸ್ತಿಗಳು ನಡೆಯಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಸಚಿವ ಬಿ.ಶ್ರೀರಾಮುಲು ಉದ್ಘಾಟಿಸುವರು. ಅಂದು ಸಂಜೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಕೂಡ ನಡೆಯಲಿದೆ ಎಂದು ತಿಳಿಸಿದರು.

ಬಿಜೆಪಿ ಮುಖಂಡ ಮಂಜು ರಾಮಣ್ಣ ಹಂಚ್ಯ ಮಾತನಾಡಿ, ದೇವಸ್ಥಾನದ ಬ್ರಹ್ಮ ಕಲಶೋತ್ಸವವೂ ಬೆಳಗ್ಗೆ 11ಕ್ಕೆ ನಡೆಯಲಿದ್ದು, ರಾತ್ರಿ 9ಕ್ಕೆ ದಕ್ಷಯಜ್ಞ ಪೌರಾಣಿಕ ನಾಟಕ ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಮೃತ್ ಪುರೋಹಿತ್, ಶಿವು ಹೊಸಹಳ್ಳಿ, ಶಿವು ರಮ್ಮನಹಳ್ಳಿ, ನಂಜನಗೂಡು ಸಿದ್ದರಾಜು ಉಪಸ್ಥಿತರಿದ್ದರು.



ದಿ ಗ್ರಾಜ್ಯುಯೇಟ್ ಕೋ–ಆಪರೇಟಿವ್ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾಗಿ ನಾಮನಿರ್ದೇಶನಗೊಂಡ ನಗರಪಾಲಿಕೆ ಮಾಜಿ ಸದಸ್ಯ ಮೇಟಗಳ್ಳಿ ದೇವರಾಜು ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಸಿ.ಡಿ.ಕುಮಾರ್ ಉಪಸ್ಥಿತರಿದ್ದರು.

ರಾಮನಗರದಲ್ಲಿ ಬಿಜೆಪಿಯವರು ವಕೀಲರನ್ನು ತಪ್ಪುದಾರಿಗೆಳೆಯುತ್ತಿದ್ದಾರೆ

● ಡಿಸಿಎಂ ಡಿ.ಕೆ.ಶಿವಕುಮಾರ್ ಆರೋಪ ● ವಕೀಲರು ಚರ್ಚೆಗೆ ಬಂದರೆ ಕಾನೂನಿನಡಿ ಪರಿಹಾರಕ್ಕೆ ಪ್ರಯತ್ನ



ಬೆಂಗಳೂರು, ಫೆ.20(ಕೆಎಂಶಿ)–ರಾಮನಗರದಲ್ಲಿ ಬಿಜೆಪಿಯವರು ವಕೀಲರನ್ನು ತಪ್ಪು ದಾರಿಗೆಳೆದು ರಾಜಕಾರಣ ಮಾಡುತ್ತಿದ್ದಾರೆ. ವಕೀಲರು ಚರ್ಚೆಗೆ ಬಂದರೆ ಕಾನೂನು ವ್ಯಾಪ್ತಿಯಲ್ಲಿ ಪರಿಹಾರ ನೀಡುವ ಪ್ರಯತ್ನ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮನಗರದಲ್ಲಿ ವಕೀಲರ ಪ್ರಕರಣ ವಿಚಾರವಾಗಿ ಗೃಹ ಸಚಿವರು ಉತ್ತರ ನೀಡುತ್ತಾರೆ, ಕಾನೂನುಬದ್ಧವಾಗಿ ಅಧಿಕಾರಿಗಳು ಎಲ್ಲರಿಗೂ ರಕ್ಷಣೆ, ಗೌರವ ನೀಡಬೇಕು, ನಮ್ಮ ಬಳಿ ಬಂದರೆ ಚರ್ಚೆಗೆ ಸಿದ್ಧ, ರಾಜಕಾರಣವನ್ನೇ ಮಾಡುವುದಾದರೆ ಮಾಡಲಿ, ಅಭ್ಯಂತರವೇನೂ ಇಲ್ಲ ಎಂದರು. ಹೈಕೋರ್ಟ್ ನ್ಯಾಯಮೂರ್ತಿಗಳನ್ನು ನಿಂದಿಸಿದ ವಿಚಾರದ ಬಗ್ಗೆ ಮಾಹಿತಿ ಇಲ್ಲ, ನಾನು ಮಧ್ಯ ಪ್ರವೇಶಿಸುವುದಿಲ್ಲ. ಅವರುಗಳು ನೋವು ಹೇಳಿಕೊಂಡರೆ, ಕಾನೂನು ಚೌಕಟ್ಟಿನಲ್ಲಿ ಪರಿಹಾರಕ್ಕೆ ಪ್ರಯತ್ನ ಮಾಡಲಾಗುವುದು. ನಮಗೆ ವಕೀಲರು, ಅಧಿಕಾರಿಗಳು, ಸಾರ್ವಜನಿಕರ ಬಗ್ಗೆ ಸಮಾನ ಗೌರವವಿದೆ ಎಂದರು. ಕೇರಳದಲ್ಲಿ ಆನೆ ತುಳಿತಕ್ಕೆ ಮೃತಪಟ್ಟವರಿಗೆ ರಾಜ್ಯ ಸರ್ಕಾರ ಪರಿಹಾರ ನೀಡಿರುವ ಬಗ್ಗೆ ಮಾಹಿತಿ ಇಲ್ಲ. ಮಾಹಿತಿ ಪಡೆದು ಮಾತನಾಡುತ್ತೇನೆ ಎಂದರು.

ಮೈಸೂರಲ್ಲಿ ಪ್ರತಿ ವರ್ಷ ಶೇ.5ರಷ್ಟು ರಫ್ತು ಪ್ರಮಾಣ ಹೆಚ್ಚಳ

2023–24ನೇ ಸಾಲಿನಲ್ಲಿ 6,300 ಕೋಟಿ ವಹಿವಾಟು



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ನಡೆದ ರಫ್ತು ಜಾಗೃತಿ ಶಿಬಿರವನ್ನು ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಉದ್ಘಾಟಿಸಿದರು.

ಮೈಸೂರು, ಫೆ.20(ಬಿಎಲ್‌ಯು)– ಕಳೆದ ಮೂರು ವರ್ಷದ ಅವಧಿಯಲ್ಲಿ ಮೈಸೂರಿನ ರಫ್ತು ಪ್ರಮಾಣ ಸರಾಸರಿ ಶೇಕಡ 5 ರಷ್ಟು ಹೆಚ್ಚಾಗುತ್ತಿದೆ ಎಂದು ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ತಿಳಿಸಿದರು.

ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ನಡೆದ ರಫ್ತು ಜಾಗೃತಿ ಶಿಬಿರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಮೈಸೂರಿನಲ್ಲಿ ರಫ್ತು ಪ್ರಮಾಣ ಹೆಚ್ಚಾಗುತ್ತಿದೆ. ರಫ್ತು ಉತ್ತೇಜನಕ್ಕೆ ಪೂರಕ ವಾತಾವರಣ ನಿರ್ಮಾಣ ಮಾಡಿರುವ ಸರ್ಕಾರದ ಹಲವು ರೀತಿಯ ಸುಧಾರಣಾ ಕ್ರಮದಿಂದ ಇದು ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿ 2022–23 ರಲ್ಲಿ 6,300 ಕೋಟಿ ರೂಪಾಯಿ ರಫ್ತು ವಹಿವಾಟು ನಡೆದಿದೆ. ಇನ್ನು 2023ರ ಏಪ್ರಿಲ್‌ನಿಂದ ನವೆಂಬರ್ ತನಕ 4,500 ಕೋಟಿ ರೂಪಾಯಿ ರಫ್ತು ವಹಿವಾಟು ನಡೆದಿದೆ. ಕಳೆದ ಮೂರು ವರ್ಷದ ಅವಧಿಯಲ್ಲಿ ಪ್ರತಿ ವರ್ಷ ಸರಾಸರಿ ಶೇಕಡ 5.ರಷ್ಟು ರಫ್ತಿನ ಪ್ರಮಾಣ ಹೆಚ್ಚಾಗುತ್ತಿದೆ ಎಂದು ದಿನೇಶ್ ಮಾಹಿತಿ ನೀಡಿದರು.

ಮೈಸೂರಿನಿಂದ ಟೆಕ್ಸ್‌ಟೈಲ್, ತಂಬಾಕು ಸೇರಿದಂತೆ ಪ್ರಮುಖವಾಗಿ ಹತ್ತು ವಸ್ತುಗಳು ಹೆಚ್ಚಾಗಿ ವಿದೇಶಗಳಿಗೆ ರಫ್ತಾಗುತ್ತಿದೆ. ಈಗ ಎಲೆಕ್ಟ್ರಿಕಲ್ ವಸ್ತುಗಳನ್ನು ರಫ್ತು ಮಾಡಲು ಈಗಾಗಲೇ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಭೆ ಕೂಡ ನಡೆದಿದೆ ಎಂದರು.

ಯಾವ ದೇಶದಲ್ಲಿ ನಮ್ಮ ವಸ್ತುಗಳಿಗೆ ಹೆಚ್ಚು ಬೆಲೆ ಸಿಗುತ್ತದೆ, ಯಾವ ವಸ್ತುವನ್ನು ರಫ್ತು ಮಾಡಿದರೆ ಹೆಚ್ಚು ಲಾಭ ಎಂಬಿವೇ ಹಲವು ವಿಚಾರಗಳನ್ನು ಅರ್ಥ ಮಾಡಿಕೊಂಡಿರಬೇಕು. ಆಗ ಮಾತ್ರ ರಫ್ತಿನಿಂದ ಹೆಚ್ಚು ಆದಾಯ ಪಡೆಯಲು ಸಾಧ್ಯ. ಈ ಹಿನ್ನೆಲೆಯಲ್ಲಿ ಈ ಎಲ್ಲಾ ಮಾಹಿತಿ ನೀಡಲು ಇಂದು ರಫ್ತು ಜಾಗೃತಿ ಜಾಥಾ ಆಯೋಜಿಸಲಾಗಿದೆ ಎಂದು ವಿವರಿಸಿದರು.

ಮೈಸೂರು ಸೇರಿದಂತೆ ಪ್ರತಿ ಜಿಲ್ಲೆಯನ್ನು ರಫ್ತು ಹಬ್ ಮಾಡಲು ಸರ್ಕಾರ ಹಲವು ರೀತಿಯ ಯೋಜನೆ ರೂಪಿಸಿದೆ ಎಂದು ದಿನೇಶ್ ತಿಳಿಸಿದರು.

ಮೈಸೂರಿನಲ್ಲಿ ರಫ್ತು ಕೌಶಲ್ಯ ತರಬೇತಿ ಕೇಂದ್ರ ಸ್ಥಾಪಿಸಲಾಗುತ್ತಿದೆ. ಇದರಿಂದ ಕೈಗಾರಿಕಾ ಬೆಳವಣಿಗೆಗೆ ವಿಪುಲ ಅವಕಾಶಗಳು ಸಿಗುತ್ತದೆ ಎಂದು ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ತಿಳಿಸಿದರು.

ಮೈಸೂರಿನಲ್ಲಿ 180 ರಫ್ತು ಉದ್ದಿಮೆಗಳಿದ್ದು, ಇದು ಇನ್ನು ಹೆಚ್ಚಾಗಬೇಕು. ಆದರೆ ರಫ್ತು ಮಾಡಲು ಹಲವು ಸವಾಲು ಮತ್ತು ಸಮಸ್ಯೆಗಳು ಎದುರಾಗುತ್ತಿದೆ. ಇದನ್ನು ನಿವಾರಣೆ ಮಾಡದರೆ ಮೈಸೂರಿನ ರಫ್ತು ಉದ್ಯಮ ಮತ್ತಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ರಫ್ತು ಮಾಹಿತಿ ಕೇಂದ್ರದ ಉಪನಿರ್ದೇಶಕಿ ಮೇಘಲಾ, ಮೈಸೂರು ಜಿಲ್ಲೆಯ 80 ಉದ್ಯಮಿಗಳು ತಾವು ಉತ್ಪಾದಿಸಿದ ಹಲವು ವಸ್ತುಗಳನ್ನು ವಿವಿಧ ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಹೀಗೆ ರಫ್ತು ಹೆಚ್ಚಾದರೆ ಉದ್ಯಮಿಗಳ ಲಾಭ ಕೂಡ ಹೆಚ್ಚಾಗಲಿದೆ ಎಂದು ಅಭಿಪ್ರಾಯಪಟ್ಟರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಉಪ ನಿರ್ದೇಶಕ ಮನ್ಸೂರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

“ಈ ಮೊದಲು ರಫ್ತು ಮಾಡಲು ಚೆನ್ನೈಗೆ ಹೋಗಬೇಕಿತ್ತು. ಆದರೆ ಈಗ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ರಫ್ತು ಕೇಂದ್ರ ತೆರೆಯಲು ಕೇಂದ್ರ ಸರ್ಕಾರದ ಯೋಜನೆಗಳು ಅನುಷ್ಠಾನಗೊಳ್ಳುತ್ತಿದೆ. ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಕೆಲವೇ ತಿಂಗಳಲ್ಲಿ ರಫ್ತು ಕೇಂದ್ರ ಆರಂಭವಾಗಲಿದೆ. ಇದರಿಂದ ಸ್ಥಳೀಯ ಉದ್ಯಮಿಗಳಿಗೆ ಹೆಚ್ಚು ಅನುಕೂಲವಾಗಲಿದೆ. –ಟಿ.ದಿನೇಶ್, ಜಿಲ್ಲಾ ಕೈಗಾರಿಕಾ ಜಂಟಿ ನಿರ್ದೇಶಕ

ಆದಿಚುಂಚನಗಿರಿ ಶ್ರೀಗಳಿಗೆ ವೈಭವದ 11ನೇ ವರ್ಷದ ಪಟ್ಟಾಭಿಷೇಕ

ಇಸ್ರೋದ 10ನೇ ಅಧ್ಯಕ್ಷ ಸೋಮನಾಥ್ ಅವರಿಗೆ ಪ್ರತಿಷ್ಠಿತ ವಿಜ್ಞಾನತಂ ಪ್ರಶಸ್ತಿ ಪ್ರದಾನ





ಆದಿಚುಂಚನಗಿರಿ ಶ್ರೀಗಳ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಇಸ್ರೋ ಅಧ್ಯಕ್ಷ ಸೋಮನಾಥ್ ಅವರಿಗೆ ವಿಜ್ಞಾನತಂ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ನಾಗಮಂಗಲ, ಫೆ.20– ಶ್ರೀ ಕ್ಷೇತ್ರ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ 11ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಮಂಗಳವಾರ ಅತ್ಯಂತ ವೈಭವಯುತವಾಗಿ ನಡೆಯಿತು.

ಈ ವೇಳೆ ಪ್ರತಿಷ್ಠಿತ ವಿಜ್ಞಾನತಂ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯ ಹತ್ತನೇ ಅಧ್ಯಕ್ಷ ಎಸ್. ಸೋಮನಾಥ್, ನಿರಂತರ ಪರಿಶ್ರಮದಿಂದ ಮಾತ್ರ ಶ್ರೇಷ್ಠ ಗುರಿಯನ್ನು ಸಾಧಿಸಬಹುದು, ಇದಕ್ಕೆ ನಿದರ್ಶನವಾಗಿ ನಮ್ಮ ಹತ್ತು ವರ್ಷಗಳ ಶ್ರಮದಿಂದ ಚಂದ್ರಯಾನ ಮೂರು ಯಶಸ್ವಿಯ ಸಾರ್ಥಕ ಸಾಧನೆಯಾಗಿದೆ ಎಂದರು.

ಚಂದ್ರಯಾನ 3 ಕೇವಲ ನನ್ನೊಬ್ಬನಿಂದ ಮಾತ್ರ ಸಾಧ್ಯವಾದುದಲ್ಲ, ನಮ್ಮ ಸಂಸ್ಥೆಯ ಎಲ್ಲ ವಿಜ್ಞಾನಿಗಳು, ತಂತ್ರಜ್ಞರು ಸೇರಿದಂತೆ ಇಡೀ ತಂಡದ ಪರಿಶ್ರಮದ ಪ್ರತಿಫಲ ಎಂದು ಬಣ್ಣಿಸಿದರು. ಭಾರತದ ಈ ಸಾರ್ಥಕ ಸಾಧನೆ ಕುರಿತು ದೃಶ್ಯ ಮಾಧ್ಯಮದ ಮೂಲಕ ಅಮೆರಿಕ ಸಂಯುಕ್ತ ಸಂಸ್ಥಾನದ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ ಎಂದರೆ ಭಾರತದ ಜ್ಞಾನ –ವಿಜ್ಞಾನ– ತಂತ್ರಜ್ಞಾನ ಉನ್ನತ ಮಟ್ಟದಲ್ಲಿ ರಾರಾಜಿಸುತ್ತಿದೆ ಎಂದರ್ಥ.

ಇಂತಹ ಸಾಧನೆಯನ್ನು ಪರಿಗಣಿಸಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ನೀಡುತ್ತಿರುವ ವಿಜ್ಞಾನತಂ ಪ್ರಶಸ್ತಿಯು ಕೇವಲ ನನ್ನೊಬ್ಬನಿಗೆ ಸೀಮಿತವಲ್ಲ, ಇಸ್ರೋದ ಪ್ರತಿನಿಧಿಯಾಗಿ, ಇಸ್ರೋ ಬಳಗದ ಎಲ್ಲಾ ವಿಜ್ಞಾನಿಗಳ ಪರವಾಗಿ ಬಹಳ ವಿನೀತ ಭಾವದಿಂದ ಸ್ವೀಕರಿಸುತ್ತಿದ್ದೇನೆ ಹಾಗೂ ಸಮಸ್ತ ವಿಜ್ಞಾನಿ ಸಂಕುಲಕ್ಕೆ ಈ ಪ್ರಶಸ್ತಿಯನ್ನು ಸಮರ್ಪಿಸುತ್ತೇನೆ ಎಂದು ಪ್ರಶಸ್ತಿ ಸ್ವೀಕಾರ ಸಂದರ್ಭದಲ್ಲಿ ಭಾವುಕರಾದರು.

ವಿಜ್ಞಾನ, ಆಧ್ಯಾತ್ಮ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಹಾಗಾಗಿ ಉಪಗ್ರಹ ತಯಾರಿಕೆ ಮತ್ತು ಉಡಾವಣೆಯ ಕಾರ್ಯ ವಿಜ್ಞಾನವೇ ಆದರೂ ಇದರ ಯಶಸ್ವಿಗೆ ಸಾರ್ಥಕತೆಯನ್ನು ಕೋರಿ ಆಧ್ಯಾತ್ಮ ಮತ್ತು ದೇವರ ಅನುಗ್ರಹಕ್ಕಾಗಿ ದೇವಸ್ಥಾನಕ್ಕೂ ಹೋಗಿದ್ದೆವು, ನಮ್ಮೆಲ್ಲರ ಆಲೋಚನೆ ಶ್ರಮ ಹಾಗೂ ದೇವರ ಅನುಗ್ರಹದಿಂದ ವಿಶ್ವವೇ ನಿಬ್ಬೆರಗಾಗುವಂತಹ ಕಾರ್ಯ ಸಾಧನೆ ನಮ್ಮಿಂದ ನೆರವೇರಿದೆ. ಇಡೀ ವಿಶ್ವವೇ ಮೆಚ್ಚಿಕೊಳ್ಳುವ ಈ ಸಂದರ್ಭ ಭಾರತ ವಿಶ್ವಗುರುವಾಗುವ ಭಾವನೆ ನಮ್ಮೆಲ್ಲರನ್ನೂ ಆವರಿಸಿದೆ ಎಂದರು.

ಮುಖ್ಯ ಅತಿಥಿ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಮಾತನಾಡಿ, ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳದ ನೆಪದಲ್ಲಿ ವಿದ್ಯಾರ್ಥಿಗಳ ಹಾಗೂ ಸಮಾಜದ ಸರ್ವತೋ ಮುಖ ಅಭಿವೃದ್ಧಿಗೆ ರಹದಾರಿಯನ್ನು ಕಲ್ಪಿಸಿ ಕೊಡುತ್ತಿರುವ ಶ್ರೀಮಠವು ಸರ್ಕಾರವೂ ಮಾಡಲಾಗದ ಕೈಂಕರ್ಯವನ್ನು ಕೈಗೊಂಡು, ವಿದ್ಯಾರ್ಥಿಗಳನ್ನು ಆಧುನಿಕ ಸ್ಪರ್ಧಾತ್ಮಕ ಯುಗಕ್ಕೆ ಸಜ್ಜುಗೊಳಿಸುತ್ತಿದೆ. ಇಡೀ ವಿಶ್ವವೇ ಪ್ರಶಂಸಿಸಿ ಭಾರತದ ಕಡೆ ಕುತೂಹಲದಿಂದ ನೋಡುವಂತೆ ಮಾಡಿದ ನಮ್ಮ ಹೆಮ್ಮೆಯ ಇಸ್ರೋ ಸಂಸ್ಥೆಯ ಅಧ್ಯಕ್ಷರನ್ನು ಕರೆದು ಭಾವನಾತ್ಮಕವಾಗಿ ಉಪಚರಿಸಿ, ಪ್ರತಿಷ್ಠಿತ ವಿಜ್ಞಾನತಂ ಪ್ರಶಸ್ತಿಯನ್ನು ನೀಡಿ ಗೌರವಿಸುವ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಯಾವುದೇ ಕಾರ್ಯದಲ್ಲೂ ತಮ್ಮ ಆರಾಧ್ಯ ದೈವ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರನ್ನು ಸ್ಮರಿಸಿ ಪ್ರತಿ ಕೈಂಕರ್ಯದ ಸಾಫಲ್ಯತೆಯನ್ನು ಗುರುಗಳ ಅಡಿದಾವರೆಗಳಿಗೆ ಸಮರ್ಪಿಸುತ್ತಿರುವುದು ಶ್ರೀಗಳ ಭಾವನಾತ್ಮಕ ಬಾಂಧವ್ಯವನ್ನು ತೋರಿಸುತ್ತದೆ ಎಂದು ಶ್ರೀಗಳ ಅವಿನಾಭಾವತೆಯನ್ನು ವಿವರಿಸಿದರು.

ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವಥ್ ನಾರಾಯಣ್ ಮಾತನಾಡಿದರು. ಸಮಾರಂಭದ ದಿವ್ಯ ಉಪಸ್ಥಿತಿಯ ಪ್ರಮುಖರಾದ ಗುಜರಾತ್ ರಾಜ್ಯದ ರಾಜಕೋಟ್‌ನ ಆರ್ಶ್ ವಿದ್ಯಾಮಂದಿರದ ಅಧ್ಯಕ್ಷ ಶ್ರೀ ಸ್ವಾಮಿ ಪರಮಾತ್ಮ ನಂದ ಸರಸ್ವತಿ ಅವರು ಮಾತನಾಡಿ, ನಿತ್ಯ ಸಂಶೋಧನೆಯಿಂದ ದಿಗ್ವಿಜಯ ಸಾಧಿಸಿದ ಬಾಹ್ಯಾಕಾಶ ಸಾಧಕರನ್ನು ಕೊಂಡಾಡುತ್ತಾ ನಿರಂತರತೆಯು ಬುದ್ಧಿಪೂರಕವಾಗಿದ್ದು ಅಮೃತಕಾಲವಾಗುತ್ತದೆ ಎಂದರು.

ರಾಜಸ್ಥಾನದ ತಿಜಾರ ಕ್ಷೇತ್ರದ ಶಾಸಕರೂ, ಹರಿಯಾಣದ ಬಾಬಾ ಮಸ್ತ್ ನಾಥ್ ವಿಶ್ವವಿದ್ಯಾಲಯದ ಕುಲಪತಿಗಳೂ ಆದ ಶ್ರೀ ಮಹಂತ್ ಪಾಲಕ್ ನಾಥ್ ಯೋಗಿ ಅವರು ದಿವ್ಯ ಉಪಸ್ಥಿತಿಯಲ್ಲಿ ಶೈಕ್ಷಣಿಕ ವಿಚಾರಧಾರೆಗಳನ್ನು ಹಂಚಿಕೊಂಡರು.

ಕ್ರಿಯೇಟಿವ್ ಟೀಚಿಂಗ್ ಅಕಾಡೆಮಿಯ ಅಧ್ಯಕ್ಷರು, ಅಂತರ ರಾಷ್ಟ್ರೀಯ ವಾಗ್ಮಿ, ಶಿಕ್ಷಣ ತಜ್ಞ ಡಾ. ಗುರುರಾಜ್ ಕರ್ಜಗಿ ಮಾತನಾಡಿ ಪ್ರಖ್ಯಾತ ಕವಿ–ಸಾಹಿತಿ ಡಿವಿಜಿ ಅವರ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ಉಲ್ಲೇಖಿಸಿ ಶಿಕ್ಷಣ ಆಧ್ಯಾತ್ಮ ವಿಜ್ಞಾನದ ವಿಷಯಗಳನ್ನು ತಿಳಿಸಿದರು.

ಸಮಾರಂಭದಲ್ಲಿ ಶ್ರೀಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಪುರುಷೋತ್ತಮಾನಂದನಾಥ ಸ್ವಾಮೀಜಿ, ಮೈಸೂರಿನ ಸೋಮನಾಥ ಸ್ವಾಮೀಜಿ, ರಾಜಸ್ಥಾನದ ಕಿಶನ್ ನಾಥ ಸ್ವಾಮೀಜಿ, ಶಿಲ್ಪ ಶಾಸ್ತ್ರಜ್ಞ ಶಂಕರ ಸ್ಥಪತಿ, ಎಲ್ಲಾ ಶಾಖಾಮಠಗಳ ಪೂಜ್ಯರು, ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಎಂ.ಎ. ಶೇಖರ್, ಸಾಂಸ್ಥಿಕ ಕಾಲೇಜುಗಳ ಪ್ರಾಂಶುಪಾಲರು, ಮುಖ್ಯಸ್ಥರು, ಅಧಿಕಾರಿಗಳು ಹಾಗೂ ಇತರರಿದ್ದರು.

ವಿಜ್ಞಾನ ತಂತ್ರಜ್ಞಾನ ಬೃಹತ್ ವಸ್ತು ಪ್ರದರ್ಶನದಲ್ಲಿ ಏರ್ಪಡಿಸಿದ್ದ ರಸಪ್ರಶ್ನೆ, ಪಿಪಿಟಿ ಪ್ರಸ್ತುತಿ, 5 ವಿಷಯಗಳ ವಸ್ತು ಪ್ರದರ್ಶನಗಳ ತಲಾ ಮೂರು ಬಹುಮಾನಗಳು ಸೇರಿ ನೂರಾರು ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 72ನೇ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರಿಗೆ 11ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ವೈಭವಯುತವಾಗಿ ಆಚರಿಸಲಾಯಿತು. ನಾಡಿನ ವಿವಿಧ ಕ್ಷೇತ್ರದ ಗಣ್ಯರು ಅಪಾರ ಸದ್ಭಕ್ತರು ಈ ಸಂದರ್ಭದಲ್ಲಿ ಹಾಜರಿದ್ದು, ಶ್ರೀಗಳಿಗೆ ಗೌರವ ನಮನ ಸಲ್ಲಿಸಿ ಆಶೀರ್ವಚನ ಪಡೆದರು.

ಮಾ.21ರಂದು ಮೇಲುಕೋಟೆ ವೈರಮುಡಿ ಉತ್ಸವ

ಸಿದ್ಧತೆ ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ಅಧಿಕಾರಿಗಳಿಗೆ ಸೂಚನೆ



ವೈರಮುಡಿ ಬ್ರಹ್ಮೋತ್ಸವದ ಪೂರ್ವಸಿದ್ಧತೆ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ.

ಮಂಡ್ಯ, ಫೆ.20– ವಿಶ್ವವಿಖ್ಯಾತ ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯದಲ್ಲಿ ಮಾ.21ರಂದು ಶ್ರೀ ವೈರಮುಡಿ ಉತ್ಸವ ನಡೆಯಲಿದ್ದು, ಈ ಉತ್ಸವಕ್ಕೆ ಸಕಲ ಸಿದ್ಧತೆಗಳನ್ನು ಆರಂಭಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 2024 ನೇ ಸಾಲಿನ ಶ್ರೀ ವೈರಮುಡಿ ಬ್ರಹ್ಮೋತ್ಸವ ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲಾ ಖಜಾನೆಯಿಂದ ವೈರಮುಡಿ ಪೆಟ್ಟಿಗೆಯನ್ನು ಮಾ.21 ರಂದು ಬೆಳಿಗ್ಗೆ 7 ಗಂಟೆಗೆ ಪಡೆದು ಮೇಲುಕೋಟೆಗೆ ತೆಗೆದುಕೊಂಡು ಹೋಗಲಾಗುವುದು. ಈ ಸಮಯದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆಯಾಗಬೇಕು. ಶ್ರೀ ವೈರಮುಡಿ ಬ್ರಹ್ಮೋತ್ಸವವು ಮಾ.21ರಂದು ರಾತ್ರಿ 8 ಗಂಟೆಗೆ ಪ್ರಾರಂಭವಾಗಲಿದೆ ಎಂದರು.

ಕುಡಿಯುವ ನೀರಿನ ವ್ಯವಸ್ಥೆ: ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸ್ಥಳಗಳಲ್ಲಿ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಿ. ಹಾಲಿ ಇರುವ ನೀರಿನ ಟ್ಯಾಂಕ್ ತೊಂಬೆಗಳನ್ನು ಸ್ವಚ್ಛಗೊಳಿಸಿ ಶುದ್ಧ ಕುಡಿಯುವ ನೀರು ಒದಗಿಸಬೇಕು. ದೊಡ್ಡ ಕಲ್ಯಾಣಿಯ ಬಳಿ ಬಟ್ಟೆ ಬದಲಾಯಿಸಲು ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಾಣ ಮಾಡಿ, ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ಹಾಗೂ ಸ್ಥಳೀಯ ನುರಿತ ಈಜುಗಾರರನ್ನು ಕಲ್ಯಾಣಿಗಳ ಬಳಿ ನಿಯೋಜಿಸಿ ಎಂದರು.

ತುರ್ತು ಆರೋಗ್ಯ ಸೇವೆ ಒದಗಿಸಲು ಅಂಬುಲೆನ್ಸ್ ಹಾಗೂ ಆರೋಗ್ಯ ಸಿಬ್ಬಂದಿಗಳನ್ನು ಒದಗಿಸಿ, ಮೇಲುಕೋಟೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ದುರಸ್ತಿಗೊಳಿಸುವುದು. ಕೆಎಸ್‌ಆರ್‌ಟಿಸಿ ವತಿಯಿಂದ ವಿವಿಧ ಭಾಗಗಳಿಂದ ಮೇಲುಕೋಟೆಗೆ ಹೆಚ್ಚು ಬಸ್ ಕಲ್ಪಿಸುವುದು. ವಾಹನ ಪಾರ್ಕಿಂಗ್ ಸ್ಥಳದಿಂದ ದೇವಸ್ಥಾನದವರೆಗೆ ಭಕ್ತಾದಿಗಳಿಗೆ 10 ಉಚಿತ ಬಸ್ ವ್ಯವಸ್ಥೆ ಮಾಡುವುದು. ಶ್ರೀ ವೈರಮುಡಿ ಬ್ರಹ್ಮೋತ್ಸವವು ಮಾ.16 ರಿಂದ 26ರವರೆಗೆ ನಡೆಯಲಿದ್ದು, ಮಹೋತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಸ್ವಾಗತ, ಆಹಾರ ಆರೋಗ್ಯ, ಸ್ವಚ್ಛತೆ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಲೋಪ ಉಂಟಾಗದಂತೆ ಕೆಲಸಗಳನ್ನು ನಿರ್ವಹಿಸಿ ಎಂದು ಸೂಚಿಸಿದರು.

ವೈರಮುಡಿ ಪ್ರಾರಂಭ'ದಿಂದ ಮುಕ್ತಾಯದವರೆಗೆ ಕ್ಷೇತ್ರಕ್ಕೆ ನಿರಂತರ ವಿದ್ಯುತ್ ಸರಬರಾಜು ಮಾಡುವುದು. ಕಲ್ಯಾಣಿ, ಪಾರ್ಕಿಂಗ್ ಸ್ಥಳಗಳಲ್ಲಿ ಹೆಚ್ಚಿನ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡುವುದು. ವಿದ್ಯುತ್ ಅವಘಡಗಳು ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ಎಡಿಸಿ ಡಾ.ಹೆಚ್.ಎಲ್.ನಾಗರಾಜು ಮಾತನಾಡಿದರು.

ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜು, ಪಾಂಡವಪುರ ವಿಭಾಗಾಧಿಕಾರಿ ನಂದೀಶ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಹರ್ಷ, ಆರೋಗ್ಯ ಇಲಾಖೆಯ ಡಾ.ಸೋಮಶೇಖರ್, ಮುಜರಾಯಿ ತಹಸೀಲ್ದಾರ್ ತಮ್ಮೇಗೌಡ, ಮೋಹನ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಹೈಕೋರ್ಟ್ ಆದೇಶದಂತೆ ಕೆಆರ್‌ಎಸ್ ವ್ಯಾಪ್ತಿಯಲ್ಲಿ ಟ್ರಯಲ್ ಬ್ಲಾಸ್ಟ್: ಡಿಸಿ

ಮಂಡ್ಯ, ಫೆ20– ಗಣಿಗಾರಿಕೆಗೆ ಸಂಬಂಧಿಸಿದಂತೆ ಕೆಆರ್‌ಎಸ್ ಅಣೆಕಟ್ಟೆಯ 20 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಸದಂತೆ ಹೈಕೋರ್ಟ್ ಆದೇಶ ಹೊರಡಿಸಿದೆ ಹಾಗೂ 6 ತಿಂಗಳ ಒಳಗೆ ಟ್ರಯಲ್ ಬ್ಲಾಸ್ಟಿಂಗ್ ನಡೆಸಿ ವರದಿ ನೀಡುವಂತೆ ಸಹ ಆದೇಶದಲ್ಲಿ ತಿಳಿಸಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಟ್ರಯಲ್ ಬ್ಲಾಸ್ಟಿಂಗ್ ನಡೆಸುವ ಬಗ್ಗೆ ವಿವಿಧ ಇಲಾಖಾ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಉಚ್ಚ ನ್ಯಾಯಾಲಯ ಆದೇಶ ಹೊರಡಿಸಿದ ಪ್ರಕಾರ 20 ಕಿಲೋಮೀಟರ್ ವ್ಯಾಪ್ತಿಯೊಳಗೆ ಯಾವುದೇ ಗಣಿಗಾರಿಕೆ ನಡೆಯದಂತೆ ನಿರ್ಬಂಧವನ್ನು ವಿಧಿಸಿ ನಿಗಾ ವಹಿಸಲಾಗುತ್ತಿದೆ ಎಂದರು.

ಕಾವೇರಿ ನೀರಾವರಿ ನಿಗಮ ನಿಯಮಿತ ಇಲಾಖೆಯವರು ಟ್ರಯಲ್ ಬ್ಲಾಸ್ಟಿಂಗ್ ಮಾಡಲು ಈಗಾಗಲೇ ತಜ್ಞರ ಸಮಿತಿಯನ್ನು ರಚನೆ ಮಾಡಿದ್ದು, ತಜ್ಞರ ಸಮಿತಿ ಭೇಟಿ ನೀಡಿ ಟ್ರಯಲ್ ಬ್ಲಾಸ್ಟಿಂಗ್‌ಗೆ ದಿನಾಂಕ ನಿಗದಿಪಡಿಸಬೇಕಿದೆ. ರೈತ ಪರ ಸಂಘಟನೆಗಳು ಟ್ರಯಲ್ ಬ್ಲಾಸ್ಟಿಂಗ್ ನಡೆಸಲು ವಿರೋಧ ವ್ಯಕ್ತಪಡಿಸುತ್ತಿದ್ದು, ಈ ಕುರಿತು ಸಭೆಯಲ್ಲಿ ಹಾಜರಿದ್ದ ರೈತ ಸಂಘಟನೆಗಳ ಜೊತೆ ಉಚ್ಛ ನ್ಯಾಯಾಲಯದ ಆದೇಶವಾಗಿದ್ದು ಟ್ರಯಲ್ ಬ್ಲಾಸ್ಟಿಂಗ್ ನಡೆಸಬೇಕಿದೆ ಎಂದು ಹೇಳಿದರು.

ಸಭೆಯಲ್ಲಿ ಎಸ್ಪಿ ಎನ್.ಯತೀಶ್, ಭೂ ವಿಜ್ಞಾನಿ ರೇಷ್ಮಾ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಹಾಜರಿದ್ದರು.

ಹಿರಿಯ ಮುಖಂಡ ರವಿಮಂಜೇಶ್ ನಿಧನ



ಮಂಡ್ಯ,ಫೆ.20– ಮಂಡ್ಯ ಜಿಲ್ಲೆಯ ಹಿರಿಯ ಮುಖಂಡ ಕೆ.ಎನ್.ರವಿ ಮಂಜೇಶ್ ಮಂಗಳವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ 57 ವರ್ಷ ವಯಸ್ಸಾಗಿತ್ತು. ರವಿಯವರು ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ತದನಂತರ ಮಾಜಿ ಸಚಿವ ದಿ. ಅಂಬರೀಶ್ ಪ್ರಭಾವದಿಂದ ಕಾಂಗ್ರೆಸ್ ಸೇರ್ಪಡೆಗೊಂಡು ಅಂಬರೀಷ್ ಅವರ ಹಲವು ಚುನಾವಣೆಗಳಲ್ಲಿ ಶ್ರಮಿಸಿದ್ದರು. ಅನಾರೋಗ್ಯದ ಕಾರಣ ಇತ್ತೀಚೆಗೆ ರಾಜಕೀಯ ಚಟುವಟಿಕೆಗಳಿಂದ ದೂರವಿದ್ದ ಅವರು, ಸಮಾಜ ಸೇವೆ ಹಾಗೂ ಉದ್ಯಮ ಕ್ಷೇತ್ರದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಮೃತರು ಪತ್ನಿ ನಂದ, ಮಕ್ಕಳಾದ ಸಿದ್ಧಾರ್ಥ, ಸಮರ್ಥ ಹಾಗೂ ಅಪಾರ ಬಂಧು, ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸಕ್ಕರೆ ನಗರದ ರುದ್ರಭೂಮಿಯಲ್ಲಿ ನಡೆಯಿತು.

ಪ್ರಾಥಮಿಕ ಶಿಕ್ಷಣದಿಂದ ಪಿಯುಸಿವರೆಗೆ ರಂಗಭೂಮಿ ಪಠ್ಯ ಅಳವಡಿಕೆಗೆ ಆಗ್ರಹ

ಸಂಚಲನ ಮಕ್ಕಳ ನಾಟಕೋತ್ಸವ ಸಮಾರೋಪ

ಮೈಸೂರು, ಫೆ20(ಎಸ್‌ಪಿಎನ್)–ನೂತನ ರಾಜ್ಯ ಶಿಕ್ಷಣ ನೀತಿಯಲ್ಲಿ (ಎಸ್‌ಇಪಿ) ಒಂದನೇ ತರಗತಿಯಿಂದ ಪಿಯುಸಿಯವರೆಗೆ ರಂಗಭೂಮಿ ಚಟುವಟಿಕೆಗೆ ಮತ್ತು ಪಠ್ಯ ಅಳವಡಿಕೆ ಮಾಡಬೇಕು ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಆಗ್ರಹಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪ್ರವಾಸೋದ್ಯಮ ಇಲಾಖೆ, ಸಂಚಲನ ಮೈಸೂರು, ಡ್ರೀಮ್ ಬಜ್ಜ್ ಫೌಂಡೇಷನ್ ಸಹಯೋಗದೊಂದಿಗೆ ಐದು ದಿನಗಳು ನಡೆದ 'ಸಂಚಲನ ಮಕ್ಕಳ ನಾಟಕೋತ್ಸವ–ಜಾನಪದ ಉತ್ಸವದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಾಥಮಿಕ ಹಂತದಿಂದಲೇ ವಿದ್ಯಾರ್ಥಿಗಳಿಗೆ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿದರೆ, ಅ–ಹ, ಷ–ಸ ಉಚ್ಚಾರಣೆ, ಒತ್ತಕ್ಷರಗಳ ಗುರುತಿಸುವಿಕೆ ಸೇರಿದಂತೆ ಭಾಷಾ ಕಲಿಕೆಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ. ಅಲ್ಲದೆ, ದೈಹಿಕ ಮತ್ತು ಬೌದ್ಧಿಕವಾಗಿ ಮಕ್ಕಳ ಬೆಳವಣಿಗೆ ಅನುಕೂಲವಾಗುತ್ತದೆ. ಅಲ್ಲದೆ, ಮಕ್ಕಳು ರಂಗಭೂಮಿಯಲ್ಲ ತೊಡಗಿಸಿಕೊಳ್ಳುವುದರಿಂದ ಶಿಸ್ತು, ಸಂಯಮ, ಆಂಗೀಕ ನಡವಳಿಕೆಗಳಲ್ಲಿ ಬಹಳಷ್ಟು ಸುಧಾರಣೆಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ವರನಟ ಡಾ.ರಾಜ್‌ಕುಮಾರ್ ಓದಿದ್ದು, ನಾಲ್ಕನೇ ತರಗತಿ. ಅತೀ ಚಿಕ್ಕವಯಸ್ಸಿನಲ್ಲೇ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದರಿಂದ ಮುಂದೆ ಕನ್ನಡ ಚಿತ್ರರಂಗದ ಮೇರು ನಟರಾಗಿ, ಬೆಳೆದರು. ಕನ್ನಡ ಚಿತ್ರರಂಗದಲ್ಲಿ ಯಾವುದೇ ಪಾತ್ರ ಕೊಟ್ಟರೂ ಅದಕ್ಕೆ ಜೀವ ತುಂಬುತ್ತಿದ್ದರು. ಹಾಗಾಗಿ ಅವರ ಈ ಸಾಧನೆಗಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಸಂದಿವೆ. ಹಾಗಾಗಿ ರಾಜ್ಯ ಸರ್ಕಾರ ನೂತನ ಶಿಕ್ಷಣದಲ್ಲಿ ರಂಗಭೂಮಿ ಚಟುವಟಿಕೆ ಹಾಗೂ ಪಠ್ಯಗಳಿಗೆ ಆದ್ಯತೆ ನೀಡುವಂತೆ ಆಗ್ರಹಿಸಿದರು.

ಈ ವೇಳೆ ಮೈಸೂರು ಶಕ್ತಿಧಾಮದ ಅಧ್ಯಕ್ಷರೂ ಆದ ಚಲನಚಿತ್ರ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಉಪ ನಿರ್ದೇಶಕಿ ಮಂಜುಳಾ, ಡ್ರೀಮ್ ಬುಜ್ ಫೌಂಡೇಶನ್‌ನ ಉಪಾಧ್ಯಕ್ಷ ಎಂ.ಪಿ.ಸುರೇಶ್, ಸಂಯೋಜನಾಧಿಕಾರಿ ಎಂ.ಪಿ. ಪೂಜಾ ಉಪಸ್ಥಿತರಿದ್ದರು. ಸಂಚಲನ ಸಂಸ್ಥೆಯ ಅಧ್ಯಕ್ಷ ದೀಪಕ್ ಮೈಸೂರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉತ್ಸವದ ಸಂಯೋಜಕ ತ್ಯಾಗರಾಜು ದೇವರಹಳ್ಳಿ ಪಾಲ್ಗೊಂಡಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಶಕ್ತಿಧಾಮದ ಮಕ್ಕಳು ಅಭಿನಯಿಸಿರುವ. ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ರಚಿತ, ಹಿರಿಯ ರಂಗಕರ್ಮಿ ದೀಪಕ್ ಮೈಸೂರು ಹಾಗೂ ಎಂ.ಹೆಚ್.ಭಾವನ ನಿರ್ದೇಶನದ 'ಪುಷ್ಪರಾಣಿ' ನಾಟಕವನ್ನು ಪ್ರದರ್ಶಿಸಿ, ಪ್ರೇಕ್ಷಕರ ಮೆಚ್ಚುಗೆಗಳಿಸಿದರು.

ಕುಂದೂರು ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕಿಕ್ಕೇರಿ ಸಮೀಪದ ಕುಂದೂರು ಹಾಲಿನ ಡೇರಿ ಅಧ್ಯಕ್ಷರಾಗಿ ದೇವರಾಜು, ಉಪಾಧ್ಯಕ್ಷರಾಗಿ ಮಂಜಮ್ಮ ಸೋಮವಾರ ಆಯ್ಕೆಯಾದರು. ಡೇರಿ ನಿರ್ದೇಶಕರು, ಮುಖಂಡರು ಉಪಸ್ಥಿತರಿದ್ದರು.

ಕಿಕ್ಕೇರಿ, ಫೆ.20– ಸಮೀಪದ ಕುಂದೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ದೇವರಾಜು, ಉಪಾಧ್ಯಕ್ಷರಾಗಿ ಮಂಜಮ್ಮ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ದೇವರಾಜು ಹಾಗೂ ಕೆ.ಎಸ್. ರಾಮೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಮಂಜಮ್ಮ ಹಾಗೂ ಚಂದ್ರ ನಾಮಪತ್ರ ಸಲ್ಲಿಸಿದ್ದರು. 7 ಮತ ಪಡೆದು ಕೆ.ಎಸ್. ರಾಮೇಗೌಡ ಅಧ್ಯಕ್ಷರಾಗಿ ವಿಜೇತರಾದರೆ, 5ಮತ ಪಡೆದು ಕೆ.ಎಸ್. ರಾಮೇಗೌಡ ಪರಾಜಿತರಾದರು. ಉಪಾಧ್ಯಕ್ಷ ಸ್ಥಾನಕ್ಕೆ ಮಂಜಮ್ಮ 7ಮತ ಪಡೆದು ಚುನಾಯಿತರಾದರೆ, ಚಂದ್ರ 5ಮತ ಗಳಿಸಿ ಸೋಲುಂಡರು. ಚುನಾವಣಾಧಿಕಾರಿಯಾಗಿ ಭರತ್‌ಕುಮಾರ್ ಕಾರ್ಯನಿರ್ವಹಿಸಿದರು. ಕೆ.ಸಿ. ಆನಂದ, ಕೆ.ಆರ್. ಕುಮಾರ್, ಕೆ. ಚಂದ್ರಶೇಖರ್, ಕೆ.ಬಿ. ಶಿವಕುಮಾರ್, ಜಗದೀಶ್, ಮಂಜುಳಾ, ದೇವರಾಜಯ್ಯ ಉಪಸ್ಥಿತರಿದ್ದರು.

ಫೆ.23 ರಿಂದ ಮದ್ಯ ಮಾರಾಟ ನಿಷೇಧ

ಮಂಡ್ಯ, ಫೆ.20– ಮಳವಳ್ಳಿ ಪಟ್ಟಣದಲ್ಲಿ ಪಟ್ಟಲದಮ್ಮ ಸಿಡಿಹಬ್ಬ ಫೆ.23 ರಂದು ನಡೆಯಲಿದೆ. ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಸೇರಲಿದ್ದಾರೆ. ಮಳವಳ್ಳಿ ಪಟ್ಟಣವು ಅತೀ ಸೂಕ್ಷ್ಮ ಪ್ರದೇಶವಾಗಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಫೆ.23ರ ಬೆಳಗ್ಗೆ 6 ಗಂಟೆಯಿಂದ ಫೆ.24 ರಾತ್ರಿ 10 ಗಂಟೆವರೆಗೆ ಮಳವಳ್ಳಿ ಪಟ್ಟಣ ಹಾಗೂ ಮಳವಳ್ಳಿ ಪಟ್ಟಣದ 5 ಕಿ.ಮೀ. ಸುತ್ತಳತೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾದರಿಯ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆ ಹಾಗೂ ಮದ್ಯ ಮಾರಾಟ, ಮದ್ಯ ಸಂಗ್ರಹಣೆ, ಮದ್ಯ ಸಾಗಾಣಿಕೆ ಮತ್ತು ಶೇಖರಣೆ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಡಾ. ಕುಮಾರ ರವರು ಆದೇಶ ಹೊರಡಿಸಿದ್ದಾರೆ.

ಫೆ.27ರೊಳಗೆ 14 ಮಂದಿ ಕೆಲಸಗಾರರ ಕಾಯಂಗೆ ಬಣ್ಣಾರಿ ಕಾರ್ಖಾನೆಗೆ ಗಡುವು



ಮೈಸೂರು, ಫೆ.20(ಎಸ್‌ಪಿಎನ್)– ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ) ಗುರುತಿಸಿರುವ ಭೂಮಾಲೀಕರ ಕುಟುಂಬಸ್ಥರ 14 ಮಂದಿಗೆ ಫೆ.27ರೊಳಗೆ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಕಾಯಂಗೊಳಿಸುವ ನಿರ್ಧಾರ ಪ್ರಕಟಿಸಬೇಕು ಎಂದು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಸೂಚಿಸಿದರು.

ಮೈಸೂರು ಜಲದರ್ಶಿನಿ ವಸತಿಗೃಹದ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಸಿಬ್ಬಂದಿ, ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳ ನೇತೃತ್ವದಲ್ಲಿ ನಡೆದ ಮಾತುಕತೆಯಲ್ಲಿ ಅವರು, ಈ ಸೂಚನೆ ನೀಡಿದರು.

ಕಳೆದ ಫೆ.7ರಿಂದ ಗುತ್ತಿಗೆ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ 46 ಕಾರ್ಮಿಕರಲ್ಲಿ 14 ಮಂದಿ ನಿಮ್ಮ ಕಾರ್ಖಾನೆಗೆ ಭೂಮಿ ನೀಡಿರುವ ಬಗ್ಗೆ ಕೆಐಎಡಿಬಿ ಅಧಿಕಾರಿಗಳು ಅಧಿಕೃತಗೊಳಿಸಿದ್ದಾರೆ. ಭೂ ಮಾಲೀಕರೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ಹಂತ ಹಂತವಾಗಿ ನೌಕರಿ ನೀಡಿ, ಕಾಯಂಗೊಳಿಸಬೇಕು. ನಿಮ್ಮ ಧೋರಣೆ ಯನ್ನು ಖಂಡಿಸಿ ಫೆ.7ರಿಂದ ಕಾರ್ಖಾನೆ ಬಂದ್ ಮಾಡಿ, ರೈತರು ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಈ ಸಮಸ್ಯೆ ಬಗೆಹರಿಯಬೇಕಾದರೆ, ಒಪ್ಪಂದದಂತೆ ಫೆ.27ರೊಳಗೆ ಆಡಳಿತ ಮಂಡಳಿ ನಿರ್ಧಾರ ಪ್ರಕಟಿಸಬೇಕು. ಉಳಿದವರಿಗೆ ಹಂತ ಹಂತವಾಗಿ ಕೆಲಸ ಕಾಯಂ ಮಾಡುವ ನಿರ್ಧಾರ ಪ್ರಕಟಿಸಬೇಕು ಎಂದು ಸೂಚಿಸಿದರು.

ನಂತರ ಮಾತನಾಡಿದ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಬಣ್ಣಾರಿ ಅಮ್ಮನ್ ಕಾರ್ಖಾನೆ ಬಂದ್ ಮಾಡಿ, ಧರಣಿ ನಡೆಸುತ್ತಿರುವ ರೈತರು ಕೂಡಲೇ ಕಾರ್ಖಾನೆ ಆರಂಭಿಸಲು ಅನುವು ಮಾಡಿಕೊಡಬೇಕು ಎಂದು ಸಭೆಯಲ್ಲಿದ್ದ ರೈತ ಮುಖಂಡರಾದ ಹೊಸಕೋಟೆ ಬಸವರಾಜು, ಉಗ್ರ ನರಸಿಂಹೇಗೌಡ, ಬಂಕಳ್ಳಿ ನಂಜುಂಡಸ್ವಾಮಿ ಸೇರಿದಂತೆ ರೈತರಿಗೆ ಮನವಿ ಮಾಡಿದರು.

ಕೆಐಎಡಿಬಿ ಗುರುತಿಸುವ ಭೂಮಾಲೀಕರ ಕುಟುಂಬಸ್ಥರ ಸಮಸ್ಯೆ ಬಗೆಹರಿಯಬೇಕು. ಬಣ್ಣಾರಿ ಅಮ್ಮನ್ ಕಾರ್ಖಾನೆ ಆಡಳಿತ ಮಂಡಳಿ ಸದಸ್ಯರು ಇಲ್ಲಿ ನಡೆದಿರುವ ಮಾತುಕತೆಯಂತೆ ಭೂ ಮಾಲೀಕರ ಬೇಡಿಕೆಯನ್ನು ಬಗೆಹರಿಸುವಂತೆ ತಾಕೀತು ಮಾಡಿದರು. ಸಭೆಯಲ್ಲಿ ಕೆಐಎಡಿಬಿ ಜೆಡಿ ದಿನೇಶ್, ನಂಜನಗೂಡು ತಹಸೀಲ್ದಾರ್ ಶಿವಕುಮಾರ್, ಎಚ್.ಎಂ.ಬಸವರಾಜು, ರೈತ ಮಹಿಳೆಯರು, ಮುಖಂಡರಿದ್ದರು.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ: ವಿದ್ಯಾರ್ಥಿಗಳ ಮೇಲೆ ಒತ್ತಡ ಬೇಡ

ಮಂಡ್ಯ, ಫೆ.20– ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯು ಮಾರ್ಚ್ 25 ರಿಂದ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯು ಮಾರ್ಚ್ 1 ರಿಂದ ನಡೆಯಲಿದೆ. ವಿದ್ಯಾರ್ಥಿಗಳು ಪರೀಕ್ಷಾ ಒತ್ತಡಕ್ಕೆ ಒಳಗಾಗದೇ ಧೈರ್ಯವಾಗಿ ಪರೀಕ್ಷೆ ಬರೆಯುವಂತೆ ಸಜ್ಜುಗೊಳಿಸಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಕಗಳ ಕಛೇರಿಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಸಿದ್ಧತೆ ಕುರಿತು ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು.

ವಾರ್ಷಿಕ ಪರೀಕ್ಷೆಗಳಿಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಿ, ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ನಡೆಯದಂತೆ ಎಚ್ಚರಿಕೆ ವಹಿಸಿ. ಪರೀಕ್ಷಾ ಅಕ್ರಮಗಳ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ. ವಿದ್ಯಾರ್ಥಿಗಳು ಯಾವುದೇ ನಕಲು ಚೀಟಿ ಬಳಕೆಗೆ ಅವಕಾಶ ಮಾಡಿಕೊಡದಂತೆ ಸ್ವಂತವಾಗಿ ಪರೀಕ್ಷೆ ಬರೆಯಲು ತಯಾರಿ ಮಾಡಿ ಎಂದರು.

ಈಗಾಗಲೇ ದ್ವಿತೀಯ ಪಿಯುಸಿ ಪರೀಕ್ಷೆಯ ವೇಳಾಪಟ್ಟಿ ಸಿದ್ಧವಾಗಿದ್ದು ಜಿಲ್ಲೆಯಲ್ಲಿ 26 ಪರೀಕ್ಷೆ ಕೇಂದ್ರಗಳಲ್ಲಿ ಒಟ್ಟಾರೆ 14,125 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತಿದ್ದಾರೆ, ಪರೀಕ್ಷಾ ಕೇಂದ್ರಗಳಿಗು ಸಿಸಿ ಟಿವಿ ಅಳವಡಿಸಿ ಹಾಗೂ ಪರೀಕ್ಷೆ ವೇಳೆಯಲ್ಲಿ ಯಾವುದೇ ಗೊಂದಲ ಉಂಟಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ನಂತರ ಮಾತನಾಡಿದ ಅಪರ ಜಿಲ್ಲಾಧಿಕಾರಿ ಎಚ್.ಎಲ್. ನಾಗರಾಜ್ ಅವರು ಕಳೆದ ಬಾರಿ ಕಡಿಮೆ ಫಲಿತಾಂಶ ಬಂದಂತಹ ಶಾಲಾ–ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಹೆಚ್ಚು ಗಮನ ಹರಿಸಿ ಪರೀಕ್ಷೆಗೆ ತಯಾರಿ ಮಾಡಬೇಕು ಹಾಗೂ ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂದರು.

ಮಾರ್ಚ್ 25 ರಿಂದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಪ್ರಾರಂಭವಾಗಲಿದ್ದು, ವಿದ್ಯಾರ್ಥಿಗಳಲ್ಲಿ ಏಕಾಗ್ರತೆ, ಉತ್ತಮ ಫಲಿತಾಂಶ ಪಡೆಯಲು ಅಧ್ಯಯನ ನಡೆಸುವ ಬಗ್ಗೆ, ಪರೀಕ್ಷೆಯನ್ನು ಆತ್ಮಸ್ಥೈರ್ಯದಿಂದ ಎದುರಿಸುವ ರೀತಿ ತಯಾರಿ ಮಾಡಿ ಎಂದರು.

ವಿದ್ಯಾರ್ಥಿಗಳಿಗೆ ತರಗತಿಗಳನ್ನು ಸರಿಯಾಗಿ ನಡೆಸಿ ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಿ ಪರೀಕ್ಷೆ ಬರೆಯಲು ಯಾವುದೇ ಭಯ ಗೊಂದಲ ವಿಲ್ಲದಂತೆ ವಿದ್ಯಾರ್ಥಿಗಳನ್ನು ತಯಾರು ಮಾಡಿ ಎಂದರು. ಸಭೆಯಲ್ಲಿ ಎ.ಎಸ್.ಪಿ ತಿಮ್ಮಯ್ಯ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್ ಶಿವರಾಮೇಗೌಡ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸಿ. ಚೆಲುವಯ್ಯ ಹಾಗೂ ಇನ್ನಿತರ ಶಿಕ್ಷಕರು ಉಪಸ್ಥಿತರಿದ್ದರು.

ಮೈಷುಗರ್ ಆಸ್ತಿ ಮಾರಾಟ ಬೇಡ: ಬಿಜೆಪಿ ಆಗ್ರಹ



ಎಡಿಸಿ ಡಾ. ನಾಗರಾಜು ಅವರಿಗೆ ಮನವಿ ಪತ್ರ ಸಲ್ಲಿಸುತ್ತಿರುವುದು.

ಮಂಡ್ಯ, ಫೆ.20– ಮೈಷುಗರ್ ಆಸ್ತಿ ಮಾರಾಟ ಮಾಡಿ ನೂತನ ಕಾರ್ಖಾನೆ ಆರಂಭಿಸುವ ಹುನ್ನಾರವನ್ನು ಸರ್ಕಾರ ಈ ಕೂಡಲೇ ಕೈಬಿಡಬೇಕು ಎಂದು ಒತ್ತಾಯಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಅವರ ಮೂಲಕ ಮುಖ್ಯಮಂತ್ರಿಗೆ ಬಿಜೆಪಿ ಮುಖಂಡರು ಮನವಿ ಮಾಡಿದ್ದಾರೆ.

ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಕಾರ್ಯಕರ್ತರು, ಸಕ್ಕರೆ ಕಾರ್ಖಾನೆಗೆ ರಾಜಧಾನಿ ಬೆಂಗಳೂರಿನ ಹೃದಯ ಭಾಗದಲ್ಲಿ ಪಾರಂಪರಿಕ ಕಟ್ಟಡ ಸೇರಿದಂತೆ 1 ಎಕರೆ 37 ಗುಂಟೆ ಜಾಗವಿದೆ. ಪ್ರಸ್ತುತ ಅದರ ಬೆಲೆ ಸಾವಿರಾರು ಕೋಟಿ ಇದೆ. ಇದನ್ನು ಖಾಸಗಿ ಅವರಿಗೆ ಪರಭಾರೆ ಮಾಡುವ ಅಥವಾ ಆ ಬೆಲೆ ಬಾಳುವ ಭೂಮಿ ಕಬಳಿಸುವ ಕುತಂತ್ರವಿರುವ ಅನುಮಾನ ಕಾಡುತ್ತಿದೆ ಎಂದು ಆರೋಪಿಸಿದರು.

ಸರ್ಕಾರ ಹೊಸ ಸಕ್ಕರೆ ಕಾರ್ಖಾನೆಗೆ ಹಣ ಹಾಕುವ ಬದಲು ಹೀಗಿರುವ ಕಾರ್ಖಾನೆಗೆ ಆಧುನಿಕ ಸ್ಪರ್ಶ ನೀಡಿದರೆ ಜನರ ತೆರಿಗೆ ಹಣ ಉಳಿಯುತ್ತದೆ. ಮಾರಾಟ ಮಾಡುವ ಕೆಲಸಕ್ಕೆ ಕೈ ಹಾಕಿದರೆ ಮಂಡ್ಯ ಜನ ರೊಚ್ಚಿಗೇಳುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಕೇವಲ ಚುನಾವಣಾ ಗಿಮಿಕ್‌ನಿಂದ ಹೊರಬಂದು ಜನಪರ ಕೆಲಸವನ್ನು ಮಾಡಲು ಮುಂದಾಗಲಿ ಎಂದು ಒತ್ತಾಯಿಸಿದರು.

ಈ ಕೂಡಲೇ ಮಂಡ್ಯ ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿಗಳು ಹಾಗೂ ಮಂಡ್ಯ ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಅವರು ಅಸೆಟ್ ಮಾನಿಟೈಸೇಶನ್, ಮೀಸಲಿಟ್ಟಿರುವ ಹಣ ಇವುಗಳ ಬಗ್ಗೆ ಸ್ಪಷ್ಟನೆ ಕೊಡಬೇಕು ಎಂದು ಒತ್ತಾಯಿಸಿದರು. ಬಿಜೆಪಿ ಮುಖಂಡರಾದ ಮಹೇಶ್, ಕೆ.ಎಂ.ಶಾರದಾ, ಹನಿಯಂಬಾಡಿ ನಾಗರಾಜು, ಶಂಕರ್, ಲೋಕೇಶ್, ಧನಂಜಯ್ ಇದ್ದರು.

ಮೈಸೂರು ಮಿತ್ರ

ಕಾವೇರಿ ಹಾರ್ಟ್ & ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ 15ನೇ ವಾರ್ಷಿಕೋತ್ಸವ

- ವೈದ್ಯಕೀಯ ತಜ್ಞರಿಗೆ ಎರಡು ದಿನಗಳ ಉಪಯುಕ್ತ ಕಾರ್ಯಾಗಾರ
- ಜನರಿಗೆ ಅನುಕೂಲವಾಗುವ 9 ಹೊಸ ಆರೋಗ್ಯ ಪ್ಯಾಕೇಜ್



ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ 15ನೇ ವಾರ್ಷಿಕೋತ್ಸವವನ್ನು ಇತ್ತೀಚೆಗೆ ಆಚರಿಸಲಾಯಿತು.

ಮೈಸೂರು, ಫೆ.20– ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ 15ನೇ ವಾರ್ಷಿಕೋತ್ಸವವನ್ನು ಫೆ.14 ಮತ್ತು 15ರಂದು ಆಚರಿಸಲಾಯಿತು.

ಇದರ ಅಂಗವಾಗಿ ಎರಡು ದಿನಗಳ ನಿರಂತರ ವೈದ್ಯಕೀಯ ಶಿಕ್ಷಣ (ಸಿಎಂಇ) ಮತ್ತು ಪುನರ್ಜೀವನ ಕಾರ್ಯಾಗಾರ 'ರಿವೈವ್ 2.0 ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಮಗ್ರ ಕಾರ್ಯಕ್ರಮವು ಇಂಡಿಯನ್ ಸೊಸೈಟಿ ಆಫ್ ಅರವಳಿಕೆ ಶಾಸ್ತ್ರಜ್ಞರು, ಮೈಸೂರು ನಗರ ಶಾಖೆಯ ಸಹಯೋಗದೊಂದಿಗೆ ನಡೆಯಿತು. ಇಂಡಿಯನ್ ರೆಸೂಸಿಕೇಷನ್ ಫೆಡರೇಷನ್ ಮಾರ್ಗಸೂಚಿಗಳ ಪ್ರಕಾರ, ರೆಸೂಸಿಕೇಷನ್ ಕುರಿತು ಅಗತ್ಯ ಕೋರ್ಸ್‌ಗಳನ್ನು ಪರಿಚಯಿಸಲಾಯಿತು.

ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮೈಸೂರಿನ ಏಕೈಕ ಮಾನ್ಯತೆ ಪಡೆದ ಆಸ್ಪತ್ರೆಯಾಗಿ ಬಿಸಿಎಲ್‌ಎಸ್ ಹಾಗೂ ಎಸಿಎಲ್‌ಎಸ್ ಕೋರ್ಸ್‌ಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಮೂಲಕ ನಗರದ ವಿವಿಧ ಆಸ್ಪತ್ರೆಗಳಿಂದ 80ಕ್ಕೂ ಅಧಿಕ ಸ್ನಾತಕೋತ್ತರ ಪದವೀಧರರಿಗೆ ಗುಣಮಟ್ಟದ ಮ್ಯಾನಿಕಿನ್‌ಗಳು ಮತ್ತು ಆಧುನಿಕ ಸಿಮ್ಯುಲೇಟರ್‌ಗಳ ಕುರಿತು ತರಬೇತಿ ನೀಡಲಾಗುತ್ತಿದೆ.

2009 ಫೆಬ್ರವರಿ 14ರಂದು ಪ್ರಾರಂಭವಾದ ಆಸ್ಪತ್ರೆಯು ಮೈಸೂರು ಸುತ್ತಮುತ್ತಲ ಜನರಿಗೆ ಗುಣಮಟ್ಟದ ವೈದ್ಯಕೀಯ ಸವಲತ್ತುಗಳನ್ನು ಕಲ್ಪಿಸುತ್ತಾ ಬಂದಿದೆ. ಇದುವರೆಗೆ 25 ಸಾವಿರಕ್ಕೂ ಅಧಿಕ ಯಶಸ್ವಿ ಶಸ್ತ್ರಚಿಕಿತ್ಸೆ 22 ಸಾವಿರಕ್ಕೂ ಅಧಿಕ ಆಂಜಿಯೋಪ್ಲಾಸ್ಟಿ ಹಾಗೂ 3 ಸಾವಿರಕ್ಕೂ ಹೆಚ್ಚು ಕಾರ್ಡಿಯೋ ತೋರಾಸಿಕ್ ಸರ್ಜರಿಗಳನ್ನು ನೆರವೇರಿಸಿದೆ. 200 ಬೆಡ್‌ಗಳ ಈ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ತುರ್ತು ಆರೈಕೆಯ ಸಾಮರ್ಥ್ಯವನ್ನು ಹೊಂದಿದ್ದು, ಎಲ್ಲಾ ವಿಭಾಗದಲ್ಲೂ ತಜ್ಞ ವೈದ್ಯರನ್ನು ಒಳಗೊಂಡಿದೆ. ಇದೇ ವೇಳೆ ಆಸ್ಪತ್ರೆಯ ಅಧ್ಯಕ್ಷರಾದ ಡಾ.ಜಿ.ಆರ್. ಚಂದ್ರಶೇಖರ್ ಮೈಸೂರು ಹಾಗೂ ಸುತ್ತಮುತ್ತಲ ಜನರಿಗೆ ಅನುಕೂಲವಾಗುವಂತೆ 9 ವಿವಿಧ ಹೊಸ ಆರೋಗ್ಯ ಪ್ಯಾಕೇಜ್‌ಗಳನ್ನು ಪ್ರಕಟಿಸಿದರು.

ನಿವೇಶನ ನೀಡುವುದಾಗಿ ನಂಬಿಸಿ ಡೆವಲಪರ್ ವಂಚನೆ

ಫಲಾನುಭವಿಗಳಿಗೆ ಬಡ್ಡಿ ಸಮೇತ ಹಣ ಪಾವತಿಸುವಂತೆ ಗ್ರಾಹಕರ ಆಯೋಗ ಆದೇಶ

ಮೈಸೂರು, ಫೆ.20(ಬಿಎಲ್‌ಯು)– ನಿವೇಶನ ನೀಡುವುದಾಗಿ ನಂಬಿಸಿ, ಹಣ ಸಂಗ್ರಹಿಸಿ ವಂಚಿಸಿದ್ದ ಡೆವಲಪರ್‌ಗೆ ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಬಡ್ಡಿ ಸಮೇತ ಹಣ ಪಾವತಿ ಮಾಡುವಂತೆ ಆದೇಶ ನೀಡಿದೆ.

ಬೆಂಗಳೂರಿನ ಚಿಕ್ಕತೋಗೂರು ನಿವಾಸಿ ನಿವೃತ್ತ ಉದ್ಯೋಗಿ ಶ್ರೀಕಂಠಭಟ್ ನಿವೇಶನಕ್ಕಾಗಿ ಮೈಸೂರಿನ ರಾಮಕೃಷ್ಣನಗರದ ರಿಯಲ್ ವ್ಯಾಲ್ಯೂ ಕನ್ಸ್ಯೂಮರ್ ನೆಟ್‌ವರ್ಕ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಗುರುಮಲ್ಲೇಶ್‌ಗೆ 2014ರಲ್ಲಿ 3,96 ಲಕ್ಷ ರೂ. ಪಾವತಿ ಮಾಡಿದ್ದರು. ಆದರೆ ಗುರುಮಲ್ಲೇಶ್ 10 ವರ್ಷವಾದರೂ ನಿವೇಶನ ನೀಡದೆ, ಹಣವನ್ನು ಸಹ ವಾಪಸು ಮಾಡದೆ ಸತಾಯಿಸಿದ್ದರು.

ಈ ಸಂಬಂಧ ಶ್ರೀಕಂಠಭಟ್ ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡಿದ್ದರು. ಈ ಬಗ್ಗೆ ವಾದ–ಪ್ರತಿವಾದ ಆಲಿಸಿದ ಆಯೋಗ, ಶ್ರೀಕಂಠಭಟ್ ಅವರಿಗೆ ಡೆವಲಪರ್ ಗುರುಮಲ್ಲೇಶ್ 3,96 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ ದಿನದಿಂದ ಶೇಕಡ 10ರ ಬಡ್ಡಿಯಂತೆ 2 ತಿಂಗಳಲ್ಲಿ ಪಾವತಿ ಮಾಡಬೇಕು. ತಪ್ಪಿದ್ದಲ್ಲಿ ಸದರಿ ಮೊತ್ತಕ್ಕೆ ಈ ಆದೇಶದ ದಿನಾಂಕದಿಂದ ಸಾಲಿಯಾನ ಶೇಕಡ 15ರ ಬಡ್ಡಿಯಂತೆ ಹಣ ಸಂದಾಯ ಆಗುವ ತನಕ ಪಾವತಿ ಮಾಡಬೇಕು ಎಂದು ಆಯೋಗ ಫೆ. 5ರಂದು ನೀಡಿರುವ ಆದೇಶದಲ್ಲಿ ತಿಳಿಸಿದೆ.

ಜೊತೆಗೆ ಸೇವಾ ನ್ಯೂನತೆಗೆ 10 ಸಾವಿರ ಹಾಗೂ ಪ್ರಕರಣದ ಖರ್ಚು 3 ಸಾವಿರ ಸೇರಿದಂತೆ 13 ಸಾವಿರ ರೂ.ಗಳನ್ನು ಈ ಆದೇಶದ ದಿನಾಂಕದಿಂದ 2 ತಿಂಗಳ ಒಳಗೆ ಪಾವತಿ ಮಾಡುವಂತೆ ಆಯೋಗ ಆದೇಶ ಮಾಡಿದೆ

ಆಯೋಗದ ಆದೇಶ ಉಲ್ಲಂಘನೆ ಮಾಡಿದರೆ ಗುರುಮಲ್ಲೇಶ್ ವಿರುದ್ಧ ಗ್ರಾಹಕ ಸಂರಕ್ಷಣಾ ಕಾಯ್ದೆ ಕಲಂ 72ರ ಅನ್ವಯ ಜೈಲು ಶಿಕ್ಷೆ ಹಾಗೂ ದಂಡಕ್ಕೆ ಗುರಿಪಡಿಸಲು ಕ್ರಿಮಿನಲ್ ಪ್ರಕರಣ ಹೂಡಲು ಶ್ರೀಕಂಠಭಟ್ ಅರ್ಹರಾಗಿರುತ್ತಾರೆ ಎಂದು ಆಯೋಗ ತಿಳಿಸಿದೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಫೆ. 20– ಮೈಸೂರು ಜಿಲ್ಲಾ ಕಾಂಗ್ರೆಸ್ ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾಗಿ ಡಾ.ಶ್ವೇತಾ ಮಡಪ್ಪಾಡಿ ನೇಮಕ ಮಾಡಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಆದೇಶ ಹೊರಡಿಸಿದ್ದಾರೆ.

ಲೋಕಸಭಾ ಚುನಾವಣೆ: ಗಡಿ ಭಾಗದಲ್ಲಿ ಅಕ್ರಮ ತಡೆಗೆ ಮೂರು ರಾಜ್ಯದ ಅಧಿಕಾರಿಗಳ ಸಭೆ

- ಮಧುಮಲೈನಲ್ಲಿ ಅಧಿಕಾರಿಗಳ ಮಹತ್ವದ ಸಭೆ
- ಗಡಿ ಜಿಲ್ಲೆಗಳ ಎಸ್ಪಿಗಳು, ಮೂರು ರಾಜ್ಯಗಳ ಹಿರಿಯ ಅರಣ್ಯಾಧಿಕಾರಿಗಳು ಭಾಗಿ
- ನಕ್ಸಲ್ ಚಟುವಟಿಕೆ ಮೇಲೂ ಕಣ್ಣಿಡಲು ನಿರ್ಧಾರ



ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಇಲಾಖೆಯ ಸಭಾಂಗಣದಲ್ಲಿ ಮಂಗಳವಾರ ತಮಿಳುನಾಡಿನ ಕೊಯಮತ್ತೂರು ವಲಯದ ಡಿಐಜಿಪಿ ಸರವಣ ಸುಂದರ್ ನೇತೃತ್ವದಲ್ಲಿ ಸಭೆ ನಡೆಯಿತು.

ಮೈಸೂರು,ಫೆ.20(ಎಂಟಿವೈ)– ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗಡಿಭಾಗದಲ್ಲಿ ಅಕ್ರಮ ತಡೆ ಜೊತೆಗೆ ನಕ್ಸಲ್ ಚಟುವಟಿಕೆಗೆ ಕಡಿವಾಣ ಹಾಕಲು ಕರ್ನಾಟಕ, ತಮಿಳುನಾಡು ಹಾಗೂ ಕೇರಳ ಗಡಿ ಜಿಲ್ಲೆಗಳ ಎಸ್ಪಿ ಹಾಗೂ ಅರಣ್ಯಾಧಿಕಾರಿಗಳು ಮಹತ್ವದ ಸಭೆ ನಡೆಸಿದ್ದು, ಜಂಟಿ ಕಾರ್ಯಾಚರಣೆ ಮೂಲಕ ಗಡಿಯಲ್ಲಿ ತೀವ್ರ ಕಟ್ಟೆಚ್ಚರ ವಹಿಸಲು ನಿರ್ಧರಿಸಿದ್ದಾರೆ.

ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಇಲಾಖೆಯ ಸಭಾಂಗಣದಲ್ಲಿ ಮಂಗಳವಾರ ತಮಿಳುನಾಡಿನ ಕೊಯಮತ್ತೂರು ವಲಯದ ಡಿಐಜಿಪಿ ಸರವಣ ಸುಂದರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚಾಮರಾಜನಗರ ಎಸ್ಪಿ ಪದ್ಮಿನಿ ಸಾಹು, ತಮಿಳುನಾಡಿನ ನೀಲಗಿರಿ ಎಸ್ಪಿ ಸುಂದರ್ ವಡಿವೇಲು, ಈರೋಡು ಎಸ್ಪಿ ಜಿ.ಜವಾಹರ್, ಕೇರಳದ ಮಲಪುರಂ ಎಸ್ಪಿ ಶಶಿಧರನ್ ಹಾಗೂ ಇನ್ನಿತರ ಪೊಲೀಸ್ ಅಧಿಕಾರಿಗಳು ಪಾಲ್ಗೊಂಡಿದ್ದರು. ಇದರೊಂದಿಗೆ ಮಧುಮಲೈ, ಬಂಡೀಪುರ ಹಾಗೂ ವಿವಿಧ ವಿಭಾಗದ ಅರಣ್ಯ ಅಧಿಕಾರಿಗಳು ಪಾಲ್ಗೊಂಡು ಲೋಕಸಭಾ ಚುನಾವಣೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ, ಅಗತ್ಯ ಸಲಹೆ, ಸೂಚನೆ ನೀಡಿದರು.

ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಗೆ ದಿನಗಣನೆ ಆರಂಭವಾಗಿದ್ದು, ಮೂಲಗಳ ಪ್ರಕಾರ ಮುಂದಿನ ವಾರ ಅಥವಾ ಹತ್ತು ದಿನದಲ್ಲಿ ನೀತಿ ಸಂಹಿತೆ ಜಾರಿಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ತೆರೆಮರೆಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಅದರ ಭಾಗವಾಗಿ ಕರ್ನಾಟಕ, ತಮಿಳುನಾಡು ಹಾಗೂ ಕೇರಳದ ಅಧಿಕಾರಿಗಳು ಸಭೆ ನಡೆಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆಯುವ ಸಾಧ್ಯತೆ ಹೆಚ್ಚಾಗಿದೆ. ಅದರಲ್ಲೂ ಮೂರು ರಾಜ್ಯಗಳ ಗಡಿ ಜಿಲ್ಲೆಗಳಲ್ಲಿ ಚುನಾವಣಾ ಅಕ್ರಮ ನಡೆಯುವ ಶಂಕೆ ಮೇರೆಗೆ ಸಭೆ ನಡೆಸಿ, ಗಂಭೀರವಾಗಿ ಚರ್ಚಿಸಲಾಯಿತು.

ಸಭೆಯಲ್ಲಿ ಡಿಐಜಿಪಿ ಸರವಣ ಸುಂದರ್ ಮಾತನಾಡಿ, ಲೋಕಸಭಾ ಚುನಾವಣಾ ದಿನಾಂಕ ಘೋಷಣೆಯಾಗುತ್ತಿದ್ದಂತೆ ಅಕ್ರಮ ಚಟುವಟಿಕೆಗಳು ಗರಿಗೆದರುವ ಸಾಧ್ಯತೆ ಇರುತ್ತದೆ. ಅದಕ್ಕೆ ಕಡಿವಾಣ ಹಾಕಲು ಉಭಯ ರಾಜ್ಯಗಳ ಅಧಿಕಾರಿಗಳು ಪರಸ್ಪರ ಸಹಕಾರದಿಂದ ಕರ್ತವ್ಯ ನಿರ್ವಹಿಸಬೇಕು. ಅಕ್ರಮ ಮದ್ಯ ಸಾಗಾಟ, ಹಣ ಸಾಗಾಟ ನಡೆಯುವ ಸಾಧ್ಯತೆ ಇರುತ್ತದೆ. ಅದಕ್ಕೆ ಕಡಿವಾಣ ಹಾಕಬೇಕಾದರೆ ಕಟ್ಟುನಿಟ್ಟಿನ ತಪಾಸಣೆ ನಡೆಸಬೇಕು ಎಂದು ಸೂಚನೆ ನೀಡಿದರು.

> ಅರಣ್ಯ ಪ್ರದೇಶದ ಮೂಲಕ ನಕ್ಸಲರು ಕಾಡಂಚಿನ ಗ್ರಾಮಗಳಲ್ಲಿ ಬೆದರಿಕೆ ಹಾಕುವ ಸಾಧ್ಯತೆ ಇರುತ್ತದೆ. ಅರಣ್ಯ ಸಿಬ್ಬಂದಿಗೆ ನಕ್ಸಲರ ಇರುವಿಕೆ ಹಾಗೂ ಅವರ ಚಟುವಟಿಕೆ ಗಮನಕ್ಕೆ ಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕು. ಆಗ ಜಂಟಿ ಕಾರ್ಯಾಚರಣೆ ನಡೆಸಿ ನಕ್ಸಲ್ ಚಟುವಟಿಕೆ ಹತ್ತಿಕ್ಕಬಹುದು. ಈ ನಿಟ್ಟಿನಲ್ಲಿ ಮೂರು ರಾಜ್ಯಗಳ ಪೊಲೀಸ್ ಹಾಗೂ ಅರಣ್ಯ ಸಿಬ್ಬಂದಿ ಪರಸ್ಪರ ಸಹಕಾರದಿಂದ ಗಡಿ ಜಿಲ್ಲೆಗಳಲ್ಲಿ ಶಾಂತಿಯುತ ಹಾಗೂ ನಿಷ್ಪಕ್ಷಪಾತ ಚುನಾವಣೆ ನಡೆಸಲು ಸಾಧ್ಯ.
> –ಡಿಐಜಿಪಿ ಸರವಣ ಸುಂದರ್

ಸಿದ್ದರಾಮಯ್ಯರನ್ನು ದೂಷಿಸುವ 27 ಸಂಸದರು ಕೇಂದ್ರದಿಂದ ಆಗುತ್ತಿರುವ ಅನ್ಯಾಯ ಪ್ರಶ್ನಿಸಲಿ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನೆ ಮಾಡುವ ರಾಜ್ಯದ 27 ಜನ ಸಂಸದರು ತಮ್ಮದೇ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯ ಪ್ರಶ್ನಿಸಲಿ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಒತ್ತಾಯಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಒಂದೇ ದಿನ 10 ಲಕ್ಷ ಕೋಟಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ. ಆದರೆ ದೇಶದಲ್ಲೇ ಅತೀ ಹೆಚ್ಚು ತೆರಿಗೆ ಪಾವತಿಸುತ್ತಿರುವ 2ನೇ ರಾಜ್ಯವಾಗಿದ್ದರೂ ಕರ್ನಾಟಕಕ್ಕೆ ಕೇವಲ 6 ಸಾವಿರ ಕೋಟಿ ರೂ. ಯೋಜನೆಗೆ ಚಾಲನೆ ನೀಡೋದಕ್ಕೆ ನಿತಿನ್ ಗಡ್ಕರಿ ಬರ್ತಿದ್ದಾರೆ. ಸಮಾನತೆ ಎಂದು ಬಾಯಿಬಡಿದುಕೊಳ್ಳುವ ಮೋದಿ ಮತ್ತು ಕೇಂದ್ರ ಸರ್ಕಾರ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಹಾಕಿದೆ. ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದರೂ ನಮ್ಮ 27 ಸಂಸದರು ಕಣ್ಣು ಮುಚ್ಚಿ ಕುಳಿತಿದ್ದಾರೆ. ಇದು ದುರ್ದೈವ.

ಕರ್ನಾಟಕ ಸರ್ಕಾರ 2024–25 ಹಣಕಾಸು ವರ್ಷ ಸೇರಿ ಕಳೆದ 5 ವರ್ಷಗಳಲ್ಲಿ ಒಟ್ಟು 1,74,339 ಕೋಟಿ ರೂ.ಗಳನ್ನು ಕರ್ನಾಟಕಕ್ಕೆ ನೀಡಿರುವುದಾಗಿ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಅಧಿವೇಶನದಲ್ಲಿ ಹೇಳಿದ್ದಾರೆ. ಆದರೆ ಕರ್ನಾಟಕಕ್ಕಿಂತಲೂ ಅತೀ ಕಡಿಮೆ ತೆರಿಗೆ ನೀಡುತ್ತಿರುವ ಉತ್ತರ ಪ್ರದೇಶಕ್ಕೆ 10 ಲಕ್ಷ ಕೋಟಿ ರೂ. ಯೋಜನೆ ಕಲ್ಪಿಸಿದ್ದಾರೆ. ಇದು ಯಾವ ನ್ಯಾಯ?

ಕರ್ನಾಟಕದಲ್ಲಿ ಬಿಜೆಪಿಯ 25, ಎನ್‌ಡಿಎ ಭಾಗವಾದ ಸುಮಲತಾ ಹಾಗೂ ಪ್ರಜ್ವಲ್ ರೇವಣ್ಣ ಸೇರಿ 27 ಸಂಸದರು, ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಸಮರ್ಥಿಸಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ. ಸಿದ್ದರಾಮಯ್ಯ ಅವರನ್ನು ಮಾತಿಗೆ ಮುಂಚೆ ದೂರುವ ಸಂಸದರು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳಬೇಕು. ಕರ್ನಾಟಕ ಸರ್ಕಾರ ದೆಹಲಿಯಲ್ಲಿ ಪ್ರತಿಭಟಿಸುತ್ತಿದ್ದರೂ ಯಾವೊಬ್ಬ ಸಂಸದರೂ ರಾಜ್ಯದ ಪರವಾಗಿ ಮಾತನಾಡಲಿಲ್ಲ. ನೈತಿಕತೆ ಅನ್ನೋದು ಇದ್ರೆ ಈಗಲಾದ್ರೂ ಪ್ರಶ್ನೆ ಮಾಡಿ ಎಂದಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಗ್ಯಾರಂಟಿ ಯೋಜನೆ ಜೊತೆಗೆ ಸರ್ವರಿಗೂ ಸಮಪಾಲು ನೀಡಿದೆ. ಆದ್ರೆ ಮಾತಿಗೆ ಮುಂಚೆ ಮೋದಿ ಅವರನ್ನು ಎತ್ತಿ ಕೂರಿಸುವ ಸಂಸದರು, ರಾಜ್ಯಕ್ಕೆ ಎಷ್ಟು ಅನುದಾನ ತಂದಿದ್ದಾರೆ ತೋರಿಸಲಿ ಎಂದು ವಾಗ್ದಾಳಿ ನಡೆಸಿದ್ದಾರೆ.

ಕಂಬಿ ಇಲ್ಲದೆ ರೈಲು ಬಿಡುವ ಸಂಸದ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರು ಕಂಬಿ ಇಲ್ಲದೆ ರೈಲು ಬಿಡುತ್ತಿದ್ದಾರೆ. ಈ ಹಿಂದೆ ಮೈಸೂರು– ಕುಶಾಲನಗರ ನಡುವೆ ರೈಲು ಮಾರ್ಗ ಕಲ್ಪಿಸುವುದಾಗಿ ವಾಗ್ದಾನ ನೀಡಿದ್ದರು. ಅದು ಆಗದಿದ್ದರೆ ಚುನಾವಣೆಗೆ ನಿಲ್ಲುವುದಿಲ್ಲ ಎಂದೂ ಶಪಥ ಮಾಡಿದ್ದರು. ಈಗ ಮೈಸೂರು ನಗರಕ್ಕೆ ಮೆಟ್ರೋ ಎಂಬ ಹುಸಿ ಭರವಸೆ ನೀಡಿದ್ದಾರೆ. ಸ್ಮಾರ್ಟ್ ಸಿಟಿ ಕತೆ ಏನಾಯ್ತು ಅಂತ ಹೇಳಲಿ. ಸಿದ್ದರಾಮಯ್ಯ ಅವರಂತೆ ಆಗುವ ಕೆಲಸಗಳನ್ನು ಹೇಳಿದರೆ ನಮ್ಮ ಅಭ್ಯಂತರವಿಲ್ಲ.
–ಬಿ.ಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷ, ಕರ್ನಾಟಕ ಪ್ರದೇಶ ಕುರುಬರ ಸಂಘ–ಶೋಷಿತ ಸಮುದಾಯದ ಮುಖಂಡ.

ಕನ್ನಡಿಗರ ತೆರಿಗೆ ಹಣ ಸಂಸದ ರಾಹುಲ್ ಗಾಂಧಿ ಜೇಬು ಸೇರುತ್ತಿದೆ

ಸರ್ಕಾರದ ವಿರುದ್ಧ ಆರ್.ಅಶೋಕ, ಸಿ.ಟಿ.ರವಿ ಕಿಡಿ



ಬೆಂಗಳೂರು, ಫೆ.20– ಕೇರಳದಲ್ಲಿ ಆನೆ ದಾಳಿಗೆ ಬಲಿಯಾದವರ ಕುಟುಂಬಕ್ಕೆ ಪರಿಹಾರ ನೀಡಿರುವ ಕಾಂಗ್ರೆಸ್ ಸರ್ಕಾರದ ನಡೆಯನ್ನು ಖಂಡಿಸಿರುವ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಕನ್ನಡಿಗರ ತೆರಿಗೆ ಹಣ ರಾಹುಲ್ ಗಾಂಧಿಯವರ ಜೇಬಿಗೆ ಸೇರುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಕನ್ನಡಿಗರ ತೆರಿಗೆ ಹಣವನ್ನು ಕೇರಳ ಸಂಸದರಾದ ರಾಹುಲ್ ಗಾಂಧಿ ಮತ್ತು ಕೆಸಿ ವೇಣುಗೋಪಾಲ್ ಅವರ ಆಣತಿಯಂತೆ ಬಿಡುಗಡೆ ಮಾಡಲು ಕರ್ನಾಟಕವೇನು ಕಾಂಗ್ರೆಸ್ ಪಕ್ಷದ ಆಸ್ತಿ ಅಂದುಕೊಂಡಿದ್ದೀರಾ ಅರಣ್ಯ ಸಚಿವ ಈಶ್ವರ್ ಖಂಡ್ರೆಯವರೇ ಎಂದಿದ್ದಾರೆ.

ಮುಂದುವರಿದು, ಸಿಎಂ ಸಿದ್ದರಾಮಯ್ಯನವರೇ, 'ನಮ್ಮ ತೆರಿಗೆ, ನಮ್ಮ ಹಕ್ಕು' ಎಂದು ನಿಮ್ಮ ಪಕ್ಷದ ಹೈಕಮಾಂಡ್ ನಾಯಕರ ಬಳಿ ಧೈರ್ಯವಾಗಿ ಪ್ರಶ್ನಿಸಲು ನಿಮ್ಮ ಸಚಿವರಿಗೆ ತಾಕತ್ತಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಇದೇ ವೇಳೆ ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಕರ್ನಾಟಕ ಸರ್ಕಾರವು ಕೇರಳದ ಕಾಂಗ್ರೆಸ್ ಸಂಸದನ ತಾಳಕ್ಕೆ ತಕ್ಕಂತೆ ಏಕೆ ಕುಣಿಯುತ್ತಿದೆ. ಕಾಂಗ್ರೆಸ್ ತನ್ನ ನಾಯಕರ ಹಿತಾಸಕ್ತಿ ಕಾಪಾಡುವ ಸಲುವಾಗಿ ಕರ್ನಾಟಕದ ಹಿತಾಸಕ್ತಿಗೆ ಪದೇ ಪದೆ ದ್ರೋಹ ಮಾಡಿದೆ.

ತನ್ನ 'ಧಣಿಗಳ' ಮನ ಮೆಚ್ಚಿಸಲು ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ ರಾಜ್ಯದ ಜನರಿಗೆ ನಿರಂತರವಾಗಿ ವಿಶ್ವಾಸ ಘಾತ ಮಾಡುತ್ತಿದೆ. ನಕಲಿ ಗಾಂಧಿಗಳ ಹಿತಾಸಕ್ತಿಯ ರಕ್ಷಣೆಗೆ ಕನ್ನಡಿಗರು ಎಷ್ಟು ದಿನ ತಮ್ಮ ಹಿತಾಸಕ್ತಿಗಳನ್ನು ಬಲಿ ನೀಡಬೇಕು. ಗಾಂಧಿ ಪರಿವಾರದಲ್ಲಿ ಹುಟ್ಟಿದ್ದಾರೆ ಎನ್ನುವ ಏಕೈಕ ಸಾಧನೆಗೆ, ರಿಲಾಂಚ್ ಮೇಲೆ ರಿಲಾಂಚ್ ಮಾಡಿದರೂ ಉಡಾವಣೆಯಾಗದ ರಾಕೆಟ್ ಹಾಗಿರುವ, ನಿಮ್ಮ ಅಧಿನಾಯಕನ ಆದೇಶಕ್ಕೆ ಕನ್ನಡಿಗರ ಹಣವನ್ನು ಏಕೆ ಖರ್ಚು ಮಾಡಲಾಗುತ್ತಿದೆ ಸಿದ್ದರಾಮಯ್ಯ ಅವರೇ? ಎಂದು ಪ್ರಶ್ನಿಸಿದ್ದಾರೆ.

ರಾಮನಗರದ ಎಸ್‌ಐ ತನ್ವೀರ್ ಹುಸೇನ್ ಅಮಾನತಿಗೆ ಆಗ್ರಹಿಸಿ ವಕೀಲರಿಂದ ಪ್ರತಿಭಟನೆ



ರಾಮನಗರ,ಫೆ.20–ಪೊಲೀಸ್ ಸಬ್ ಇನ್ಸ್‌ಪೆಕ್ಟರ್(ಎಸ್‌ಐ) ತನ್ವೀರ್ ಹುಸೇನ್ ಅಮಾನತುಗೊಳಿಸುವಂತೆ ಒತ್ತಾಯಿಸಿ ವಕೀಲರು ಮಂಗಳವಾರ ರಾಮನಗರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆ ಮುಂದುವರೆಸಿದ್ದಾರೆ.

ಸೋಮವಾರ ತಡರಾತ್ರಿ ನೂರಾರು ವಕೀಲರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ, ಕಟ್ಟಡದ ಪ್ರವೇಶ ಮತ್ತು ನಿರ್ಗಮನ ಎರಡೂ ದ್ವಾರಗಳಿಗೆ ದಿಗ್ಬಂಧನ ಹಾಕಿದರು. ಧರಣಿನಿರತ ವಕೀಲರು ಎಸ್‌ಐ ಅವರನ್ನು ಅಮಾನತು ಮಾಡುವವರೆಗೂ ಇಲ್ಲಿಂದ ಕದಲುವುದಿಲ್ಲ ಮತ್ತು ಬುಧವಾರ 'ವಿಧಾನಸೌಧ ಚಲೋ' ಚಳವಳಿ ನಡೆಸುವುದಾಗಿ ಹೇಳಿದ್ದಾರೆ.

ಜ್ಞಾನವಾಪಿ ಮಸೀದಿ ಪ್ರಕರಣದಲ್ಲಿ ತೀರ್ಪು ನೀಡಿದ ವಾರಣಾಸಿ ನ್ಯಾಯಾಧೀಶರ ವಿರುದ್ಧ ವಕೀಲ ಮತ್ತು ಎಸ್‌ಡಿಪಿಐ ಕಾರ್ಯಕರ್ತ ಚಾಂದ್‌ಪಾಷಾ ಅವಹೇಳನಕಾರಿ ಪೋಸ್ಟ್ ಮಾಡಿದ ಘಟನೆಗೆ ಸಂಬಂಧಿಸಿದಂತೆ ಎಸ್‌ಐ ಹುಸೇನ್ ಅವರು 40 ವಕೀಲರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ವಕೀಲರು ಆರೋಪಿಸಿದ್ದಾರೆ.

ಈ ಕುರಿತು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, ಸಾವಿರಾರು ವಕೀಲರು ವಾರದಿಂದ ಪ್ರತಿಭಟನೆ ನಡೆಸುತ್ತಿದ್ದರೂ ಕಾಂಗ್ರೆಸ್ ಸರ್ಕಾರ ಅವರ ಬಗ್ಗೆ

ಇಂದು 'ವಿಧಾನಸೌಧ ಚಲೋ'

ತಲೆಕೆಡಿಸಿಕೊಂಡಿಲ್ಲ. ಪೊಲೀಸ್ ಇಲಾಖೆ ವೈಫಲ್ಯದ ವಿರುದ್ಧ ಕ್ರಮ ಕೈಗೊಳ್ಳಬೇಕು. ಒಂದು ಸಮುದಾಯದ ಹಿತಾಸಕ್ತಿ ಕಾಪಾಡಲು ಸರ್ಕಾರ ರಚಿಸಿಲ್ಲ ಎಂದರು.

ಈ ಕುರಿತು ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ರಾಮನಗರದಲ್ಲಿ ನಡೆಯುತ್ತಿರುವುದು ರಾಜಕೀಯ. ಅದನ್ನು ಅವರೇ ಮಾಡಲಿ. ಕುಮಾರಸ್ವಾಮಿ ಅವರು ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸುತ್ತಿದ್ದು, ಗೃಹ ಸಚಿವರು ಉತ್ತರ ನೀಡಲಿದ್ದಾರೆ. ಅಧಿಕಾರಿಗಳು ಕಾನೂನಿನ ಪ್ರಕಾರ ಎಲ್ಲರಿಗೂ ರಕ್ಷಣೆ ನೀಡಬೇಕು. ಅವರು ಸಂಧಾನ ಸಭೆಗೆ ಬರಲು ಬಯಸಿದರೆ ನಾವು ಮಾತನಾಡಲು ಸಿದ್ಧರಿದ್ದೇವೆ.

'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ' ಎಂಬ ಘೋಷವಾಕ್ಯ ಬದಲಾವಣೆಗೆ ಆಕ್ರೋಶ

ಕರ್ನಾಟಕ ಸೇನಾ ಪಡೆಯಿಂದ ಮೈಸೂರಲ್ಲಿ ಪ್ರತಿಭಟನೆ

ವಿಧಾನಸೌಧ, ಸರ್ಕಾರಿ ಕಚೇರಿಗಳಲ್ಲಿ ಧೈರ್ಯವಾಗಿ ಪ್ರಶ್ನಿಸು ಎಂಬ ಘೋಷವಾಕ್ಯ ಹಾಕಿಸಿ ಎಂದ ಪ್ರತಿಭಟನಾಕಾರರು



ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದ ಮುಂಭಾಗ ರಾಜ್ಯ ಸರ್ಕಾರ ಕುವೆಂಪು ಅವರ ಘೋಷವಾಕ್ಯ ಬದಲಾವಣೆ ಮಾಡಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.20(ಜಿಎ)–'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ' ಎಂಬ ಘೋಷವಾಕ್ಯವನ್ನು ಬದಲಾಯಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಡಾ.ರಾಜ್‌ಕುಮಾರ್ ಉದ್ಯಾನವನದ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿರುವ ವಸತಿ ಶಾಲೆಗಳ ಪ್ರವೇಶ ದ್ವಾರದಲ್ಲಿ 'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ' ಎಂಬ ಘೋಷವಾಕ್ಯವನ್ನು 'ಧ್ಯಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸು' ಎಂದು ಬದಲಾಯಿಸಿ ಈ ನೆಲದ ಸಂಸ್ಕೃತಿಯಾದ ವಿದ್ಯಾಮಂದಿರದ ಪಾವಿತ್ರ್ಯತೆ ಹಾಳು ಮಾಡಲು ಹೊರಟಿರುವ ಐಎಎಸ್ ಅಧಿಕಾರಿ ಮಣಿವಣ್ಣನ್ ನಡೆ ಅವಮಾನವೀಯ ಎಂದು ಖಂಡಿಸಿದರು.

ರಾಜ್ಯ ಮತ್ತು ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದು ಕೊಡುವ ಮೂಲಕ ಕುವೆಂಪು ಅವರು ನಮ್ಮ ರಾಜ್ಯದ ಆಸ್ತಿಯಾಗಿದ್ದಾರೆ. ಕುವೆಂಪು ಅವರ ಘೋಷವಾಕ್ಯ, ದಶಕಗಳಿಂದ ಕೋಟ್ಯಾಂತರ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪ್ರೇರಣೆಯಾಗಿದೆ. ಕೈಮುಗಿದು ಒಳಗೆ ಬಾ ಎಂದರೆ, ಅಹಂಕಾರ ತೊರೆದು, ವಿನಯಶೀಲನಾಗಿ, ಜ್ಞಾನ ಸಂಪಾದಿಸಲು, ಭೇದಭಾವ ತೊರೆದು, ನಿನ್ನ ಹೆದರಿಕೆ ಎಲ್ಲವನ್ನೂ ಬಿಟ್ಟು ಬಂದು, ವಿದ್ಯೆಯನ್ನು ಶ್ರದ್ಧೆಯಿಂದ ಕಲಿಯೆಂದು. ಇದನ್ನು ಅರಿಯದ, ನಮ್ಮ ಕನ್ನಡ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ಬಗ್ಗೆ ಅರಿವಿಲ್ಲದ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ತಮ್ಮ ಮೌಖಿಕ ಆದೇಶದ ಮೇರೆಗೆ ವಸತಿ ಶಾಲೆಗಳಲ್ಲಿ ಬದಲಾವಣೆ ಮಾಡಿರೋದು ಅತ್ಯಂತ ಖಂಡನೀಯ, ಇದನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಸರ್ಕಾರ ಇದನ್ನು ಈ ಕೂಡಲೇ ಸರಿಪಡಿಸಬೇಕು ಹಾಗೂ ಮಣಿವಣ್ಣನ್ ಅವರನ್ನು ವಜಾ ಮಾಡಬೇಕೆಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಧೈರ್ಯವಾಗಿ ಪ್ರಶ್ನಿಸು, ಎನ್ನುವ ಘೋಷವಾಕ್ಯವನ್ನು ವಿಧಾನ ಸೌಧದಲ್ಲಿ, ಸರ್ಕಾರಿ ಕಚೇರಿಗಳಲ್ಲಿ, ಆರ್‌ಟಿಓ, ಕಂದಾಯ ಇಲಾಖೆಗಳಲ್ಲಿ ಹಾಕಲಿ. ಇದೇ ರೀತಿ ಕಳೆದ ವಾರ ರಾಜ್ಯ ಸರ್ಕಾರ ಶಾಲೆಗಳಲ್ಲಿ ಧಾರ್ಮಿಕ ಆಚರಣೆಗಳಿಗೆ ನಿರ್ಬಂಧ ವಿಧಿಸಿ, ಬಳಿಕ ಜನರ ಆಕ್ರೋಶ, ವಿರೋಧದಿಂದ ಆದೇಶವನ್ನು ಹಿಂಪಡೆದಿತ್ತು. ಇತ್ತೀಚೆಗೆ ರಾಜ್ಯ ಸರ್ಕಾರ ಇಲ್ಲಸಲ್ಲದ ವಿಚಾರಗಳಿಗೆ ಹಿಂದೂ ವಿರೋಧಿಯಾಗಿ, ಧರ್ಮ ವಿರೋಧಿಯಾಗಿ ಕೆಲಸ ಮಾಡುತ್ತಿದೆ. ನಾಡಿನ ಹಿರಿಯರು, ಸಾಹಿತಿಗಳು ಕಟ್ಟಿಕೊಟ್ಟಿರುವ, ನೀಡಿರುವ ಮಾರ್ಗದರ್ಶನಗಳನ್ನು ಬದಲಿಸಲು ಹೋಗಬಾರದು ಎಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡುತ್ತಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆಯ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಪ್ರಭುಶಂಕರ್ ಎಂ ಬಿ, ಪ್ರಜೀಶ್, ಕುಮಾರ್ ಬಸಪ್ಪ, ಮಹದೇವಸ್ವಾಮಿ, ಹನುಮಂತಯ್ಯ, ರಾಮಕೃಷ್ಣೇಗೌಡ, ರಾಧಾಕೃಷ್ಣ, ವಿಷ್ಣು ದರ್ಶನ್ ಗೌಡ, ಪದ್ಮ, ಸ್ವಾಮಿಗೌಡ, ಪ್ರದೀಪ್, ಗುರುಮಲ್ಲಪ್ಪ, ತ್ಯಾಗರಾಜ್ ಪಾಲ್ಗೊಂಡಿದ್ದರು.

ನಾಳೆ ಮೈಸೂರಲ್ಲಿ ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವ

ರಾಮಕೃಷ್ಣ ಪರಮಹಂಸರ ಪ್ರತಿಮೆಗೆ ಮಾಲಾರ್ಪಣೆ, ರಥೋತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ಎಸ್.ಪಿ.ಯೋಗಣ್ಣ ಮಾತನಾಡಿದರು.

ಮೈಸೂರು, ಫೆ.20(ಜಿಎ)– ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದಿಂದ ರಾಮಕೃಷ್ಣ ಪರಮಹಂಸರ ಜನ್ಮದಿನದ ಪ್ರಯುಕ್ತ ಫೆ.22ರಂದು ನಗರದ ರಾಮಕೃಷ್ಣ ವೃತ್ತದಲ್ಲಿ ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವವನ್ನು ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಿ.ಮಾದೇಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 7ಗಂಟೆಗೆ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಮಹಾರಾಜ್ ಅವರು ವೃತ್ತದಲ್ಲಿರುವ ಪರಮಹಂಸರ ಪ್ರತಿಮೆಗೆ ಮಾಲಾರ್ಪಣೆ ಮಾಡುವರು. ಮಧ್ಯಾಹ್ನ 3ಕ್ಕೆ ವೃತ್ತದಿಂದ ರಥೋತ್ಸವ ಪ್ರಾರಂಭವಾಗಿ ರಾಮಕೃಷ್ಣನಗರ, ವಿವೇಕಾನಂದನಗರ ಹಾಗೂ ಶಾರದಾದೇವಿನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಲಿದೆ ಎಂದು ತಿಳಿಸಿದರು.

ಸಂಜೆ 6 ಗಂಟೆಗೆ ವೃತ್ತದಲ್ಲಿ ಆಧ್ಯಾತ್ಮಿಕ ಚಿಂತನ–ಮಂಥನ ಕಾರ್ಯಕ್ರಮ ನಡೆಯಲಿದ್ದು, ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸುವರು. ವೈದ್ಯ ಸಾಹಿತಿ ನಾ.ಸೋಮೇಶ್ವರ ಅವರಿಂದ ಉಪನ್ಯಾಸ ನಡೆಯಲಿದ್ದು, ಹೃದ್ರೋಗ ತಜ್ಞ ಸಿ.ಎನ್.ಮಂಜುನಾಥ್ ಅತಿಥಿಗಳಾಗಿ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನವನ್ನೂ ಸಹ ಏರ್ಪಡಿಸಲಾಗಿದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದು ಮಾತನಾಡಿದ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಪರಮ ಹಂಸರ ಜನ್ಮ ದಿನೋತ್ಸವ ಪ್ರಯುಕ್ತ ಸುಯೋಗ ಆಸ್ಪತ್ರೆಯಲ್ಲಿ ಫೆ.22ರಿಂದ 29ರವರೆಗೆ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಹೃದ್ರೋಗ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ಫೆ.22ರಂದು ಸಂಜೆ 4ಗಂಟೆಗೆ ನಿರ್ಮಲಾನಂದನಾಥ ಸ್ವಾಮೀಜಿ ಶಿಬಿರ ಉದ್ಘಾಟಿಸುವರು. ನಾನು ರಚಿಸಿರುವ 'ಹಾರ್ಟ್ ಅಟ್ಯಾಕ್' ಕೃತಿಯನ್ನು ಡಾ.ಸಿ.ಎನ್.ಮಂಜುನಾಥ್ ಬಿಡುಗಡೆಗೊಳಿಸಲಿದ್ದಾರೆ. ಶಿಬಿರದಲ್ಲಿ ಪ್ರತಿದಿನ 50 ಮಂದಿಗೆ ತಪಾಸಣೆಯ ಅವಕಾಶವಿದ್ದು, ಕಡುಬಡವರಿಗೆ ಉಚಿತ ಆಂಜಿಯೋಗ್ರಾಮ್ ಹಾಗೂ ಆಂಜಿಯೋಪ್ಲಾಸ್ಟಿ ಮಾಡಲಾಗುವುದು. ಮಾಹಿತಿ ಹಾಗೂ ನೋಂದಣಿಗೆ ಮೊ.ಸಂ. 99863 99862 ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಉಪಾಧ್ಯಕ್ಷ ಬಸವಣ್ಣ, ಖಜಾಂಚಿ ಬಸವಲಿಂಗಪ್ಪ, ಕಾರ್ಯದರ್ಶಿ ಕೆಂಪಲಿಂಗರಾಜು, ಸುಯೋಗ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಸುಯೋಗ್ ಯೋಗಣ್ಣ, ಹೃದ್ರೋಗ ತಜ್ಞ ರವಿಕುಮಾರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 21 ಫೆಬ್ರವರಿ 2024

ಸರ್ವೇಯರ್ ಲೋಕಾಯುಕ್ತ ಬಲೆಗೆ



ಮಡಿಕೇರಿ, ಫೆ.20–ಲಂಚ ಸ್ವೀಕರಿಸುತ್ತಿದ್ದ ಸರ್ವೇಯರ್‌ನನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಸೋಮವಾರಪೇಟೆ ತಾಲೂಕಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಸರ್ವೇಯರ್ ಹೆಚ್. ಮಹದೇವಗೌಡ ಬಂಧಿತರು. ಶನಿವಾರಸಂತೆಯ ಹೆಮ್ಮನೆ ನಿವಾಸಿ ಅಕ್ರಂ ಪಾಷಾ ಹೆಸರಿಗೆ ಹೊಸ ಪ್ರಾಪರ್ಟಿ ಕಾರ್ಡ್ ಮಾಡಿಕೊಡುವಂತೆ ಮೈಸೂರಿನ ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರು ಸೋಮವಾರಪೇಟೆಯ ಎಡಿಎಲ್‌ಆರ್ ಕಚೇರಿಗೆ ಆದೇಶಿಸಿದ್ದರು. ದಾಖಲಾತಿ ದುರಸ್ತಿಗೆ ಸರ್ವೇಯರ್ ಮಹದೇವಗೌಡ ಒಟ್ಟು 5 ಸಾವಿರ ರೂ. ಲಂಚದ ಬೇಡಿಕೆ ಇಟ್ಟಿದ್ದರು. ಇದರಿಂದ ಮನನೊಂದ ಅಕ್ರಂ ಪಾಷಾ ಫೆ.20ರಂದು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಈ ನಡುವೆ ಅಕ್ರಂ ಪಾಷಾ ಸೋಮವಾರ ಮುಂಗಡವಾಗಿ 1 ಸಾವಿರ ರೂ. ಅನ್ನು ಮಹದೇವಗೌಡರಿಗೆ ನೀಡಿದ್ದರು. ಉಳಿದ 4 ಸಾವಿರ ರೂ. ಅನ್ನು ಮಂಗಳವಾರ ಅಕ್ರಂ ಪಾಷಾ ಅವರಿಂದ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಸರ್ವೇಯರ್ ಮಹದೇವ ಗೌಡ ಅವರನ್ನು ಹಣದ ಸಹಿತ ಬಂಧಿಸಿದರು.

ಲಂಚವಿಲ್ಲದೆ ಯಾವುದೇ ಕೆಲಸ ಆಗುವುದಿಲ್ಲ

ಸೋಮವಾರಪೇಟೆ ಪಪಂ ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಸದಸ್ಯರ ಆರೋಪ



ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ತಹಸೀಲ್ದಾರ್ ನವೀನ್‌ಕುಮಾರ್ ಅಧ್ಯಕ್ಷತೆಯಲ್ಲಿ ಸಾಮಾನ್ಯಸಭೆ ನಡೆಯಿತು.

ಸೋಮವಾರಪೇಟೆ, ಫೆ.20–ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಲಂಚವಿಲ್ಲದೆ ಯಾವುದೇ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತಿಲ್ಲ ಎಂದು ಸದಸ್ಯರು ಗಂಭೀರವಾಗಿ ಆರೋಪಿಸಿದ್ದಾರೆ.

ಪಟ್ಟಣ ಪಂಚಾಯಿತಿಯ ಆಡಳಿತಾಧಿಕಾರಿಯಾದ ತಹಸೀಲ್ದಾರ್ ನವೀನ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯಸಭೆಯಲ್ಲಿ ಖಾತೆ ವರ್ಗಾವಣೆ ಸೇರಿದಂತೆ ಸಾರ್ವಜನಿಕರ ಯಾವುದೇ ಅರ್ಜಿ ವಿಲೇವಾರಿಗೂ ಹಣ ನೀಡಲೇಬೇಕು. ಎರಡೂವರೆ, ಮೂರು ಸೆಂಟ್ ಜಾಗವಿದ್ದರೆ ಹಣ ಪಡೆದು ಅದನ್ನು ಹೆಚ್ಚುವರಿ ದಾಖಲಾತಿ ಮಾಡಲಾಗುತ್ತಿದೆ ಎಂದು ಸದಸ್ಯೆ ಶೀಲಾ ಡಿಸೋಜ ದೂರಿದರು.

ಇದಕ್ಕೆ ಧ್ವನಿಗೂಡಿಸಿದ ಮತ್ತೊಬ್ಬ ಸದಸ್ಯ ಜೀವನ್, ಸಾರ್ವಜನಿಕರ ಸಮಸ್ಯೆ ಬಗ್ಗೆ ಸದಸ್ಯರು ಹೇಳಿದರೆ ಇಲ್ಲಿ ಬೆಲೆಯಿಲ್ಲ. ಆದರೆ, ಸಾರ್ವಜನಿಕರು ನೇರವಾಗಿ ಬಂದು ಏನಾದರು (ಲಂಚ) ಕೊಟ್ಟರೆ ಕೆಲಸವಾಗುತ್ತದೆ ಎಂದು ದೂರಿದರು. ಇದಕ್ಕೆ ಒಪ್ಪದ ಮುಖ್ಯಾಧಿಕಾರಿ ನಾಚಪ್ಪ ಅನವಶ್ಯಕ ಆರೋಪ ಮಾಡಬೇಡಿ. ಇದಕ್ಕೆ ದಾಖಲೆ ಇದ್ದರೆ ಕೊಡಿ. ಇಲ್ಲ ಯಾರಾದರೂ ಹಣ ಕೇಳಿದರೆ ನನಗೆ ದೂರು ನೀಡಲು ಹೇಳಿ ಎಂದು ತಿರುಗೇಟು ನೀಡಿದರು. ಪಟ್ಟಣದ ವಲ್ಲಭ ಬಾಯಿ ರಸ್ತೆಯಲ್ಲಿ ನಿವಾಸಿಯೊಬ್ಬರು ಹಿಂದೆ ನೀರಿನ ಕಂದಾಯ ಪಾವತಿಸಿದ್ದರೂ ಮತ್ತೆ ಬಾಕಿ ಇದೆ ಎಂದು ವಸೂಲಾತಿಗೆ ಹೋಗುತ್ತಿದ್ದಾರೆ. ಅವರ ಬಳಿ ಪಾವತಿ ರಶೀದಿ ಇದ್ದರೂ ಪರಿಗಣಿಸುತ್ತಿಲ್ಲ ಎಂದು ಸದಸ್ಯೆ ಮೋಹಿನಿ ಸಭೆಯ ಗಮನ ಸೆಳೆದರು.

ಕಳೆದ ಸೆ.13ರಂದು ನಡೆದ ಸಭೆಯಲ್ಲಿ ಅಂಗಡಿ ಮಳಿಗೆಗಳ ಹರಾಜು ವಿಚಾರಕ್ಕೆ ಸಂಬಂಧಿಸಿದಂತೆ ಸದಸ್ಯರ ಅಭಿಪ್ರಾಯವನ್ನು ತಿರುಚಿ ಬರೆಯಲಾಗಿದೆ. ಆದ್ದರಿಂದ ಆ ನಿರ್ಣಯವನ್ನು ಕೈಬಿಡಬೇಕೆಂದು ಸದಸ್ಯರಾದ ಶುಭಕರ ಹಾಗೂ ಜೀವನ್ ಪ್ರಸ್ತಾಪಿಸಿದರು. ಬಹಳಷ್ಟು ಚರ್ಚೆಯ ನಂತರ ಹಳೆಯ ನಿರ್ಣಯವನ್ನು ಬದಲಾಯಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರೋತ್ಥಾನ ಯೋಜನೆಯಡಿ ನಡೆಯಬೇಕಾಗಿದ್ದ ಕಾಮಗಾರಿಗಳು ನನೆಗುದಿಗೆ ಬಿದ್ದಿರುವ ಬಗ್ಗೆ ಸರ್ವ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು. ಈ ಸಂದರ್ಭ ಮುಖ್ಯಾಧಿಕಾಕಾರಿ ನಾಚಪ್ಪ ಪ್ರತಿಕ್ರಿಯಿಸಿ, ಈಗಾಗಲೇ ಸಂಬಂಧಿಸಿದ ಕಾರ್ಯಪಾಲ ಅಭಿಯಂತರರು ಪರಿಶೀಲನೆ ನಡೆಸಿ ತಕ್ಷಣವೇ ಕಾಮಗಾರಿ ನಡೆಸುವಂತೆ ಗುತ್ತಿಗೆದಾರರಿಗೆ ಸೂಚಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಫೆ.25ರಿಂದ ಜ್ಯೋತಿರ್ಲಿಂಗ ಪುಣ್ಯದರ್ಶನ



ವಿರಾಜಪೇಟೆ, ಫೆ.20– ಪಟ್ಟಣದ ಅಪ್ಪಯ್ಯಸ್ವಾಮಿ ರಸ್ತೆಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಜ್ಞಾನಗಂಗಾ ಭವನದ ವತಿಯಿಂದ 88ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ ಪ್ರಯುಕ್ತ ಫೆ.25 ರಿಂದ ಮಾ.1ರವರೆಗೆ ತಾಲೂಕು ಮೈದಾನದಲ್ಲಿ ಭಾರತದ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ ಹಾಗೂ ಆಧ್ಯಾತ್ಮಿಕ ಚಿತ್ರಗಳ ಪ್ರದರ್ಶನ ಆಯೋಜಿಸಲಾಗಿದೆ. ಫೆ.25ರಂದು ಬೆಳಗ್ಗೆ 10.30ಕ್ಕೆ ಜ್ಯೋತಿರ್ಲಿಂಗ ಪುಣ್ಯದರ್ಶನಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಲಿದ್ದು, ಮೈಸೂರಿನ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮಿ ಆಶೀರ್ವಚನ ನೀಡಲಿದ್ದು, ಡಿವೈಎಸ್‌ಪಿ ಆರ್.ಮೋಹನ್‌ಕುಮಾರ್ ಮತ್ತು ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರ ಭಾಗವಹಿಸಲಿದ್ದಾರೆ.

ಆರು ದಿನ ಪ್ರವಚನ, ಜೀವನದಲ್ಲಿ ಸುಖ-ಶಾಂತಿ, ನೆಮ್ಮದಿ ಮತ್ತು ಉತ್ತಮ ಆರೋಗ್ಯ ದೊರಕಲೆಂದು ಜ್ಯೋತಿರ್ಲಿಂಗಗಳ ಪುಣ್ಯದರ್ಶನಕ್ಕಾಗಿ ಬೆಳಗ್ಗೆ 7 ರಿಂದ ರಾತ್ರಿ 8 ಗಂಟೆವರೆಗೆ ಮಹಿಳೆಯರಿಗೆ, ಮಕ್ಕಳಿಗೆ, ಸಾರ್ವಜನಿಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಎಂದು ಜ್ಞಾನಗಂಗಾ ಭವನದ ಮುಖ್ಯಸ್ಥೆ ಕೋಮಲಾ ತಿಳಿಸಿದ್ದಾರೆ.

ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಮಡಿಕೇರಿ, ಫೆ.20–ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ಸಮುದಾಯ ಆರೋಗ್ಯ ಅಧಿಕಾರಿ ಹಾಗೂ ಮಲ್ಟಿಪರ್ಪಸ್ ವರ್ಕರ್ ಹುದ್ದೆಗಳ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಆಯುಷ್ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಆಯ್ಕೆಪಟ್ಟಿ ಕುರಿತಂತೆ ಆಕ್ಷೇಪಣೆಗಳು ಇದ್ದಲ್ಲಿ ಫೆ.26ರ ಸಂಜೆ 4 ಗಂಟೆಯೊಳಗೆ ಜಿಲ್ಲಾ ಆಯುಷ್ ಅಧಿಕಾರಿ, ಆಯುಷ್ ಇಲಾಖೆ, ಮಹದೇವಪೇಟೆ, ಮಡಿಕೇರಿ ಕೊಡಗು ಜಿಲ್ಲೆ ಈ ವಿಳಾಸಕ್ಕೆ ಸಲ್ಲಿಸಬೇಕು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ವಕೀಲರ ಪ್ರತಿಭಟನೆ



ಪೊಲೀಸರು ಅನವಶ್ಯಕವಾಗಿ ಮೊಕದ್ದಮೆ ದಾಖಲಿಸಿದ್ದಾರೆ ಎಂದು ಆರೋಪಿಸಿ ವಕೀಲರು ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.20–ರಾಮನಗರದಲ್ಲಿ ವಕೀಲರ ಮೇಲೆ ಪೊಲೀಸರು ಅನವಶ್ಯಕವಾಗಿ ಮೊಕದ್ದಮೆ ದಾಖಲಿಸಿದ್ದಾರೆ ಎಂದು ಆರೋಪಿಸಿ ವಕೀಲರು ನಗರದಲ್ಲಿ ಮಂಗಳವಾರ ನ್ಯಾಯಾಲಯ ಕಲಾಪದಿಂದ ದೂರು ಉಳಿದು ಪ್ರತಿಭಟನೆ ನಡೆಸಿದರು.

ಕ್ಷುಲ್ಲಕ ವಿಚಾರಕ್ಕೆ ಸಂಬಂಧಿಸಿದಂತೆ ರಾಮನಗರದಲ್ಲಿ ನಡೆದ ಪ್ರಕರಣ ಹಿನ್ನೆಲೆಯಲ್ಲಿ 40 ವಕೀಲರ ವಿರುದ್ಧ ರಾಮನಗರ ಪೊಲೀಸರು ಮೊಕದ್ದಮೆ ದಾಖಲಿಸಿದ್ದಾರೆ. ಇದನ್ನು ರಾಜ್ಯ ವ್ಯಾಪ್ತಿ ವಕೀಲರು ಖಂಡಿಸಿ, ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು. ಮಡಿಕೇರಿ ವಕೀಲರ ಸಂಘದ ಉಪಾಧ್ಯಕ್ಷ ಎಂ.ಪಿ.ನಾಗರಾಜ್ ಮಾತನಾಡಿ, ವಕೀಲರ ವಿರುದ್ಧದ ಮೊಕದ್ದಮೆಯನ್ನು ಕೂಡಲೇ ಕೈಬಿಡಬೇಕು. ಪೊಲೀಸರ ದೌರ್ಜನ್ಯಕ್ಕೆ ಕಡಿವಾಣ ಹಾಕಬೇಕು. ರಾಜ್ಯ ವಕೀಲರ ಸಂಘಟನೆಗಳಿಂದ ಬುಧವಾರ ನಡೆಯವ ವಿಧಾನಸೌಧ ಚಲೋಗೆ ಮಡಿಕೇರಿ ವಕೀಲರ ಸಂಘದ ಸದಸ್ಯರು



ಇತ್ತೀಚೆಗೆ ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ (ಸಾಯಿ) ನಡೆದ ಅಖಿಲ ಭಾರತ ಮಟ್ಟದ ಅಂತರ್ ಸಾಯಿ ಹಾಕಿ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗಳಿಸಿದ ಮಡಿಕೇರಿಯ ಕ್ರೀಡಾ ಪ್ರಾಧಿಕಾರದ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಪ್ರಾಧಿಕಾರ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕಿ ಮಿನಿ ಉನ್ನಿರಾಜ್, ಸಹಾಯಕ ತರಬೇತುದಾರೆ ಬಿ.ಎಂ.ಕೋಮಲಾ ಇದ್ದರು.

ಹಲ್ಲೆ ಆರೋಪಿ ಬಂಧನ; ದ್ವಿಚಕ್ರ ವಾಹನ ವಶ

ಮಡಿಕೇರಿ, ಫೆ.20– ಪತ್ರಕರ್ತನ ಸೋಗಿನಲ್ಲಿ ಮಹಿಳೆಯರ ವಂಚನೆ ಹಾಗೂ ಆರೋಗ್ಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪಿಯನ್ನು ಬಂಧಿಸಿರುವ ಗೋಣಿಕೊಪ್ಪ ಪೊಲೀಸರು, ದ್ವಿಚಕ್ರ ವಾಹನ ಮತ್ತು ಮೊಬೈಲ್ ಅನ್ನು ವಶಪಡಿಸಿಕೊಂಡಿದ್ದಾರೆ.



ಡಿ.ನಾಗೇಶ್ ಬಂಧಿತ ಆರೋಪಿ. ಈತ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯನಿರತ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಈತನ ವಿರುದ್ಧ ಗೋಣಿಕೊಪ್ಪ ಠಾಣೆಯಲ್ಲಿ ದೂರು ದಾಖಲಾಗಿತ್ತು. ತಲೆಮರೆಸಿಕೊಂಡಿದ್ದ ಡಿ.ನಾಗೇಶ್‌ನನ್ನು 20 ದಿನಗಳ ನಂತರ ಮೈಸೂರಿನಲ್ಲಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿ ದ್ದಾರೆ. ಈತನ ವಿರುದ್ಧ ವಿವಿಧ ಪ್ರಕರಣಗಳಡಿ ತನಿಖೆ ನಡೆಸಲಾಗುತ್ತಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಮಾರ್ಗದರ್ಶನದಲ್ಲಿ ತಾಲೂಕು ಉಪಪೊಲೀಸ್ ಅಧೀಕ್ಷಕ ಮೋಹನ್ ಕುಮಾರ್, ಗೋಣಿಕೊಪ್ಪ ಉಪನಿರೀಕ್ಷಕಿ ರೂಪಾದೇವಿ ಬಿರಾದಾರ್, ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

12ನೇ ದಿನ ಪೂರೈಸಿದ ಅರಣ್ಯ ವಿದ್ಯಾರ್ಥಿಗಳ ಪ್ರತಿಭಟನೆ



ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮಡಿಕೇರಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.20– ಅರಣ್ಯ ಇಲಾಖೆಯ ವಿವಿಧ ಹುದ್ದೆಯ ನೇಮಕಾತಿಯಲ್ಲಿ ಬಿಎಸ್ಸಿ ಅರಣ್ಯಶಾಸ್ತ್ರ ಪದವಿಯನ್ನೇ ಕನಿಷ್ಠ ವಿದ್ಯಾರ್ಹತೆಯನ್ನಾಗಿ ಪರಿಗಣಿಸುವಂತೆ ಆಗ್ರಹಿಸಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ನಡೆಸುತ್ತಿರುವ ಪ್ರತಿಭಟನೆ ಮಂಗಳವಾರಕ್ಕೆ 12ನೇ ದಿನ ಪೂರೈಸಿದೆ.

ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಎದುರು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ನೇಮಕಾತಿಯಲ್ಲಿ ಬಿಎಸ್ಸಿ ಅರಣ್ಯಶಾಸ್ತ್ರ ಪದವೀಧರರನ್ನೇ ಪರಿಗಣಿಸಬೇಕು. ಹಸಿರೇ ಉಸಿರು ಎಂದು ಬಂದಿರುವ ವಿದ್ಯಾರ್ಥಿಗಳ ಉಸಿರನ್ನೇ ಬಿಗಿ ಹಿಡಿಯುವಂತಹ ಕಾರ್ಯದಲ್ಲಿ ಸರ್ಕಾರ ತೊಡಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಲೇಜಿನಲ್ಲಿ ಅರಣ್ಯಶಾಸ್ತ್ರ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಉದ್ಯೋಗದ ಭವಿಷ್ಯವೇ ಇಲ್ಲವೆಂದ ಮೇಲೆ ಸರ್ಕಾರ ಕಾಲೇಜಿಗೆ ಬೀಗ ಜಡಿಯುವುದು ಉತ್ತಮ. ತರಗತಿ ಬಹಿಷ್ಕರಿಸಿ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆ 12ನೇ ದಿನಕ್ಕೆ ಕಾಲಿಟ್ಟರು ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದೇ ತಾತ್ಸಾರ ಧೋರಣೆ ಅನುಸರಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅರಣ್ಯ ಮಹಾವಿದ್ಯಾಲಯದ ಡೀನ್ ಡಾ.ಜಿ.ಎಂ.ದೇವಗಿರಿ, ರಾಜ್ಯದ 3 ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆ 12ನೇ ದಿನಕ್ಕೆ ಕಾಲಿರಿಸಿದೆ. ಪ್ರತಿಭಟನೆ ಹಿಂಪಡೆಯುವಂತೆ ತಾವು ಮತ್ತು ಕುಲಪತಿಗಳು ವಿದ್ಯಾರ್ಥಿಗಳ ಮನವೊಲಿಕೆಗೆ ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಕುಲಪತಿ ಡಾ.ಆರ್.ಪಿ.ಜಗದೀಶ್, ಶಿರಸಿ ಅರಣ್ಯ ಮಹಾವಿದ್ಯಾಲಯ ಮತ್ತು ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು, ಕೃಷಿ ಸಚಿವ ಚೆಲುವರಾಯಸ್ವಾಮಿ ಹಾಗೂ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಸುಹಾಸ್, ಗೀತಾ, ಹೇಮಂತ್ ಕುಮಾರ್ ಮತ್ತಿತರ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಎಚ್‌ಎಸ್‌ಆರ್‌ಪಿ ಅಳವಡಿಕೆ ರದ್ದು ಪಡಿಸಲು ಒತ್ತಾಯ

ಚಾಮರಾಜನಗರ, ಫೆ.20–ಸಾರಿಗೆ ಇಲಾಖೆ ವಾಹನಗಳ ಎಚ್‌ಎಸ್‌ಆರ್‌ಪಿ ಪ್ಲೇಟ್ ಅಳವಡಿಕೆಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಹಾಗೂ ಕನ್ನಡ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಸಾರಿಗೆ ಇಲಾಖೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಸಾರಿಗೆ ಇಲಾಖೆ ವಿರುದ್ಧ ಘೋಷಣೆ ಕೂಗಿದರು. ರಾಜ್ಯ ಸರ್ಕಾರ ಜನರಿಗೆ ಹೊರೆಯಾಗುವಂತಹ ಎಚ್‌ಎಸ್‌ಆರ್‌ಪಿ ಪ್ಲೇಟ್ ಅಳವಡಿಕೆಯನ್ನು ಕೂಡಲೇ ರದ್ದುಪಡಿಸಬೇಕು. ರಾಜ್ಯದಲ್ಲಿ ತೀವ್ರ ಬರಗಾಲದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಸಾರ್ವಜನಿಕರು ಹಣವಿಲ್ಲದೆ ಪರದಾಡುವಂತಹ ಸ್ಥಿತಿ ತಲುಪಿದ್ದಾರೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಹೊರೆಯಾಗುವಂತಹ ಇಂತಹ ನಿಯಮ ಜಾರಿಗೆ ಮುಂದಾಗಬಾರದು ಎಂದು ಒತ್ತಾಯಿಸಿದರು.



ಎಚ್‌ಎಸ್‌ಆರ್‌ಪಿ ಪ್ಲೇಟ್ ಅಳವಡಿಕೆಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಕನ್ನಡ ಸಂಘಟನೆಗಳ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಇಂತಹ ನಿಯಮವನ್ನು ಹಿಂಪಡೆಯುವವರೆಗೂ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ನಂತರ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಗಡಿನಾಡು ಕನ್ನಡ ರಕ್ಷಣಾ ಹೋರಾಟ ವೇದಿಕೆ ಅಧ್ಯಕ್ಷ ಚಾ.ರಂ. ಕುಮಾರ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ನಿಜಧ್ವನಿ ಗೋವಿಂದರಾಜು, ವೀರಭದ್ರ, ನಂಜುಂಡಶೆಟ್ಟಿ, ಗು.ಪುರುಷೋತ್ತಮ್, ರವಿಚಂದ್ರ, ಆಟೋ ನಾಗೇಶ್, ಮಹೇಶ್‌ಗೌಡ ಮತ್ತಿತರರಿದ್ದರು.

ಇಂದಿನಿಂದ ಮಕ್ಕಳ ಸಾಹಿತ್ಯ ಸಂಭ್ರಮ

ಚಾಮರಾಜನಗರ, ಫೆ.20– ಸರ್ಕಾರಿ ಶಾಲೆಗಳನ್ನು ಬಿಡುತ್ತಿರುವ 6 ರಿಂದ 9ನೇ ತರಗತಿಯ 100 ಮಕ್ಕಳಿಗೆ ಮಕ್ಕಳ ಸಾಹಿತ್ಯ ಸಂಭ್ರಮ ಕುರಿತು 3 ದಿನ ವಸತಿರಹಿತ ಮಕ್ಕಳ ಶಿಬಿರವನ್ನು ಜಿಲ್ಲೆಯ ನಾಲ್ಕು ತಾಲೂಕಿನ ಒಂದು ಗ್ರಾಮ ವ್ಯಾಪ್ತಿಯಲ್ಲಿ ಆಯೋಜಿಸಲಾಗಿದೆ. ಫೆ.21 ರಿಂದ 23ರವರೆಗೆ ಚಾಮರಾಜನಗರ ತಾಲೂಕಿನ ಮಂಗಲ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣ, ಯಳಂದೂರು ತಾಲೂಕಿನ ದುಗ್ಗಹಟ್ಟಿ, ಹನೂರು ತಾಲೂಕಿನ ರಾಮಾಪುರ ಗ್ರಾಮದ ಸರ್ಕಾರಿ ಶಾಲಾ ಆವರಣ ಹಾಗೂ ಫೆ.22ರವರೆಗೆ ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿಯಲ್ಲಿ ಮಕ್ಕಳ ಸಾಹಿತ್ಯ ಸಂಭ್ರಮ ನಡೆಯಲಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಗೆ ಸಿದ್ಧತೆ ಕೈಗೊಳ್ಳಿ

ಸಭೆಯಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಫೆ.20– ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಸುಗಮ ಹಾಗೂ ಪಾರದರ್ಶಕವಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ವೀಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಮಂಗಳವಾರ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಸಂಬಂಧ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ ಪರೀಕ್ಷೆ ಮಾ.1 ರಿಂದ 22ರವರೆಗೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.25 ರಿಂದ ಏ.6ರವರೆಗೆ ನಿಗದಿಯಾಗಿದೆ. ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ 7328 ಅಭ್ಯರ್ಥಿಗಳು ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 12,403 ಅಭ್ಯರ್ಥಿಗಳು ನೋಂದಣಿಯಾಗಿದ್ದಾರೆ. 17 ಪಿಯುಸಿ ಪರೀಕ್ಷಾ ಕೇಂದ್ರಗಳು ಮತ್ತು 45 ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಮಾಹಿತಿ ನೀಡಿದರು.



ಪರೀಕ್ಷಾ ಕೇಂದ್ರದ ಕೊಠಡಿ ಹಾಗೂ ಹೊರಾಂಗಣದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳು ಕಾರ್ಯನಿರ್ವಹಣಾ ಸ್ಥಿತಿಯಲ್ಲಿರುವುದನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳಬೇಕು. ದುರಸ್ತಿಯಾಗಬೇಕಿದ್ದಲ್ಲಿ ಸಂಚಿತ ಅನುದಾನ ಬಳಸಿ ಕ್ರಮ ವಹಿಸಬೇಕು. ಪರೀಕ್ಷಾ ದಿನಗಳಂದು ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಲಾಗುವುದು. 500 ಮೀಟರ್ ವ್ಯಾಪ್ತಿ ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಿಸಲಾಗುವುದು ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಪೀಠೋಪಕರಣ, ಕುಡಿಯುವ ನೀರು, ಶೌಚಾಲಯ ಹಾಗೂ ಗಾಳಿ, ಬೆಳಕು ಇನ್ನಿತರ ಎಲ್ಲಾ ಮೂಲಸೌಕರ್ಯಗಳು ಉತ್ತಮ ಸ್ಥಿತಿಯಲ್ಲಿ ಇರಬೇಕು. ಪರೀಕ್ಷಾ ಕೇಂದ್ರದ ಕೊಠಡಿಗಳ ವಿವರಗಳ ಮಾರ್ಗ ನಕ್ಷೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಬೇಕು. ಪರೀಕ್ಷಾ ಕೊಠಡಿಯ ಮೇಲ್ವಿಚಾರಕರಾಗಿ ಸರ್ಕಾರಿ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಬೇಕು. ಪರೀಕ್ಷಾ ಕಾರ್ಯ ನಿರತ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ಮಂಡಳಿ ನೀಡುವ ಗುರುತಿನ ಚೀಟಿ ಅಥವಾ ಇಲಾಖೆ ಕಚೇರಿಯಿಂದ ಪಡೆದ ಗುರುತಿನ ಚೀಟಿಯನ್ನು ಧರಿಸಿ ಪರೀಕ್ಷಾ ಕಾರ್ಯನಿರ್ವಹಿಸಬೇಕು ಎಂದರು.

> ಜಿಲ್ಲೆಯ ಯಾವುದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಅವ್ಯವಹಾರ ಪ್ರಕರಣಗಳು ಉಂಟಾಗದಂತೆ ಕಟ್ಟುನಿಟ್ಟಾಗಿ ನಿಗಾವಹಿಸಿ, ಪರೀಕ್ಷೆಗೆ ಸಂಬಂಧಿಸಿದ ಸುಳ್ಳು ಸುದ್ದಿ ಹಾಗೂ ವದಂತಿಗಳಿಗೆ ಅವಕಾಶ ನೀಡದಿರಿ. ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.
> -ಶಿಲ್ಪನಾಗ್, ಜಿಲ್ಲಾಧಿಕಾರಿ

ಪರೀಕ್ಷಾ ದಿನಗಳಂದು ವಿದ್ಯುತ್ ಸಂಪರ್ಕ ಕಡಿತಗೊಳಿಸದಿರುವ ಬಗ್ಗೆ ಸೆಸ್ಕ್ ಅಧಿಕಾರಿಗಳಿಗೆ ಪತ್ರ ಬರೆಯಬೇಕು. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಇಲಾಖೆ ವತಿಯಿಂದ ಅಗತ್ಯ ಔಷಧ, ಪ್ರಥಮ ಚಿಕಿತ್ಸಾ ಪೆಟ್ಟಿಗೆ ಸಹಿತವಾಗಿ ಶುಶ್ರೂಷಕಿ, ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಬೇಕು. ಪರೀಕ್ಷಾ ಕೇಂದ್ರಕ್ಕೆ ಸಕಾಲದಲ್ಲಿ ಹಾಜರಾಗಲು ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥೆಯನ್ನು ಪರಿಶೀಲಿಸಿ ಪ್ರಾಂಶುಪಾಲರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮರಿ ನೀಡಬೇಕು. ಪರೀಕ್ಷಾ ದಿನದಂದು ಪ್ರವೇಶ ಪತ್ರವನ್ನು ಹಾಜರು ಪಡಿಸಿ ವಿದ್ಯಾರ್ಥಿಗಳು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕ ಕಾಶಿನಾಥ್, ಜಿಲ್ಲಾ ಖಜಾನಾಧಿಕಾರಿ ಸುಲೋಚನಾ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪರೀಕ್ಷಾ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಆಟೋಗೆ ಕಾರು ಡಿಕ್ಕಿ: 8 ಪ್ರಯಾಣಿಕರಿಗೆ ಗಾಯ



ಬೇಗೂರು(ಗುಂಡ್ಲುಪೇಟೆ), ಫೆ.20–ಕಾರು ಆಟೋಗೆ ಡಿಕ್ಕಿ ಹೊಡೆದ ಪರಿಣಾಮ ಆಟೋದಲ್ಲಿದ್ದ ಎಂಟು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಸಮೀಪದ ರಾಷ್ಟ್ರೀಯ ಹೆದ್ದಾರಿಯ ಚಿಕ್ಕಾಟಿ ಗೇಟ್ ಬಳಿ ಮಂಗಳವಾರ ನಡೆದಿದೆ.

ಗಾಯಾಳುಗಳಾದ ಕೆಂಚಶೆಟ್ಟಿ (45), ರಾಮು (34), ನಾಗೇಶ್ (48), ಸಿದ್ದಮ್ಮ (65), ನೇತ್ರಾವತಿ (30), ನಮ್ರತಾ (3), ಆಯಿಷಾ (27), ಸಿದ್ದರಾಜು (34), ಸರ್ಫುದ್ದೀನ್ (34) ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೇಗೂರಿನಿಂದ ನಂಜನಗೂಡು ಕಡೆಗೆ ತೆರಳುತ್ತಿದ್ದ ಪ್ಯಾಸೆಂಜರ್ ಆಟೋ ಹಾಗೂ ಮೈಸೂರಿನಿಂದ ತಮಿಳುನಾಡಿನ ಕಡೆಗೆ ಹೋಗುತ್ತಿದ್ದ ಕಾರು ಚಿಕ್ಕಾಟಿ ಗೇಟ್ ಸಮೀಪ ಆಟೋಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಆಟೋದಲ್ಲಿದ್ದ ಎಂಟು ಪ್ರಯಾಣಿಕರಿಗೆ ಗಾಯಗಳಾಗಿವೆ. ಬೇಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೇಗೂರು ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ವನರಾಜ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಚರಣ್ ಗೌಡ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರುದ್ರಭೂಮಿ ಕಲ್ಪಿಸುವಂತೆ ಮನವಿ ಸಲ್ಲಿಕೆ

ಚಾಮರಾಜನಗರ, ಫೆ.20–ನಗರಸಭಾ ವ್ಯಾಪ್ತಿಯ ವಾರ್ಡ್ ನಂ.1ರ ಸೋಮವಾರಪೇಟೆ ನಿವಾಸಿಗಳಿಗೆ ತಲೆಮಾರಿನಿಂದಲೂ ರುದ್ರಭೂಮಿ ಇಲ್ಲದೆ ತೊಂದರೆ ಪಡುತ್ತಿದ್ದು, ಜಿಲ್ಲಾಡಳಿತ ರುದ್ರಭೂಮಿಗೆ ಜಾಗ ಒದಗಿಸಿಕೊಡಬೇಕು ಎಂದು ಒತ್ತಾಯಿಸಿ ನಗರಸಭೆ ಸದಸ್ಯೆ ನೀಲಮ್ಮ ಹಾಗೂ ಗ್ರಾಮಸ್ಥರು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಸೋಮವಾರಪೇಟೆ ಗ್ರಾಮದಲ್ಲಿ ಹಿಂದುಳಿದ ಜನಾಂಗದವರು ಹೆಚ್ಚಾಗಿದ್ದು, ಅಂತ್ಯಸಂಸ್ಕಾರ ನಡೆಸಲು ರುದ್ರಭೂಮಿ ಇಲ್ಲ. ಹೀಗಾಗಿ ಬಹಳ ಸಮಸ್ಯೆ ಎದುರಿಸಲಾಗುತ್ತಿದೆ. ಆದ್ದರಿಂದ ಹರದನಹಳ್ಳಿ ಸರ್ವೇ ನಂ. 314ರ 1 ಎಕರೆ 20 ಗುಂಟೆ ಹಾಗೂ ಸರ್ವೇ ನಂ. 316ರ



ರುದ್ರಭೂಮಿಗೆ ಜಾಗ ಒದಗಿಸುವಂತೆ ಒತ್ತಾಯಿಸಿ ಸೋಮವಾರಪೇಟೆ ಗ್ರಾಮಸ್ಥರು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

29 ಗುಂಟೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡುವ ಮೂಲಕ ಶವ ಸಂಸ್ಕಾರ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಸದಸ್ಯ ಮಹದೇವು, ಗ್ರಾಮದ ಮುಖಂಡರಾದ ಮಲ್ಲಣ್ಣ, ಮಹದೇವಶೆಟ್ಟಿ, ರಾಜು, ನಾಗರಾಜು, ಮಾದಶೆಟ್ಟಿ, ಸಿದ್ದಪ್ಪ, ಕುಮಾರ, ಮಹದೇವಸ್ವಾಮಿ, ಚಿನ್ನರಾಜು ಇತರರು ಇದ್ದರು.

ಚಾ.ನಗರದಲ್ಲಿ ಡಯಾಲಿಸಿಸ್ ಕೇಂದ್ರ ಉದ್ಘಾಟನೆ

ಚಾಮರಾಜನಗರ, ಫೆ20– ನಗರದ ಬಿ.ರಾಚಯ್ಯ ಜೋಡಿರಸ್ತೆಯ ರೋಟರಿ ಭವನದಲ್ಲಿ ನೂತನ ಡಯಾಲಿಸಿಸ್ ಕೇಂದ್ರವನ್ನು ರೋಟರಿ ಸಂಸ್ಥೆಯ ಜಿಲ್ಲಾ ಗವರ್ನರ್ ಎಚ್. ಆರ್.ಕೇಶವ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ರೋಟರಿ ಸಂಸ್ಥೆ ನಗರದಲ್ಲಿ ಈಗಾಗಲೇ ಕ್ಷೇಮ ಆಸ್ಪತ್ರೆಯಲ್ಲಿ 499 ರೂ.ಗೆ ಡಯಾಲಿಸಿಸ್ ಸೇವೆ ನೀಡುತ್ತಿದೆ. ಆ ಸೇವೆಯನ್ನು ಸ್ವಂತ ಕಟ್ಟಡದಲ್ಲಿ ನೀಡಬೇಕು ಎಂದು ರೋಟರಿ ಭವನದಲ್ಲಿ ಸುಸಜ್ಜಿತ ಡಯಾಲಿಸಿಸ್ ಸೆಂಟರ್ ಉದ್ಘಾಟಿಸಲಾಗಿದೆ. ಈ ಡಯಾಲಿಸಿಸ್ ಸೇವೆಯನ್ನು ಬಡವರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.



ಬಿ.ರಾಚಯ್ಯ ಜೋಡಿರಸ್ತೆಯ ರೋಟರಿ ಭವನದಲ್ಲಿ ಡಯಾಲಿಸಿಸ್ ಕೇಂದ್ರವನ್ನು ರೋಟರಿ ಸಂಸ್ಥೆಯ ಜಿಲ್ಲಾ ಗವರ್ನರ್ ಎಚ್.ಆರ್.ಕೇಶವ ಉದ್ಘಾಟಿಸಿದರು.

ಸಹಾಯಕ ಗವರ್ನರ್ ಪ್ರಕಾಶ್, ಅಧ್ಯಕ್ಷ ಸಿ.ಎನ್.ಚಂದ್ರಪ್ರಭ ಜೈನ್, ಕಾರ್ಯದರ್ಶಿ ಅಬ್ದುಲ್ ಅಜೀಜ್, ಸಂಸ್ಥಾಪಕ ಸದಸ್ಯರಾದ ಜಿ.ಆರ್.ಅಶ್ವಥ್‌ನಾರಾಯಣ್, ಶ್ರೀನಿವಾಸಶೆಟ್ಟಿ, ಕುಲಪತಿ ಪ್ರೊ.ಎಂ.ಆರ್.ಗಂಗಾಧರ, ಉಪಾಧ್ಯಕ್ಷ ಕಾಗಲವಾಡಿ ಚಂದ್ರು, ಖಜಾಂಚಿ ಆರ್.ಎಂ.ಸ್ವಾಮಿ, ಡಾ.ನಾಗಾರ್ಜುನ್, ವೆಂಕಟನಾಗಪ್ಪಶೆಟ್ಟಿ, ರತ್ನಮ್ಮ, ರಮೇಶ್, ನಾಗರಾಜು, ಶುಭಾಸ್, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಅಕ್ಷಯ್, ಮಾಲಿಕ್ ಚಂದ್‌ಸಿರವಿ, ಚೇತನ್ ಹೆಗ್ಡೆ, ದೊಡ್ಡರಾಯಪೇಟೆ ಗಿರೀಶ್, ವಿಶ್ವಾಸ್, ಅಜಯ್, ಮಹದೇವಸ್ವಾಮಿ, ಸಿದ್ದರಾಜು ಹಾಜರಿದ್ದರು.



ಬೈಕ್ ಕಳ್ಳ ಶೇಷ್ ಜೀವನ್‌ನನ್ನು ಬಂಧಿಸಿರುವ ರಾಮಾಪುರ ಠಾಣೆ ಪೊಲೀಸರು.

ಮಂಚಾಪುರದ ಬಳಿ ಬೈಕ್ ಕಳ್ಳನ ಬಂಧನ

ಹನೂರು, ಫೆ.20–ಬೈಕ್ ಕಳ್ಳನನ್ನು ರಾಮಾಪುರ ಠಾಣೆ ಪೊಲೀಸರು ಮಂಗಳವಾರ ತಾಲೂಕಿನ ಮಂಚಾಪುರದ ಬಳಿ ಬಂಧಿಸಿದ್ದಾರೆ.

ಕೊಳ್ಳೇಗಾಲ ತಾಲೂಕಿನ ಜಾಗೇರಿಯ ಶೇಷ್ ಜೀವನ್ ಬಂಧಿತ ಆರೋಪಿ. ಈತ ಕಳೆದ ಒಂದುವರೆ ತಿಂಗಳ ಹಿಂದೆ ರಾಮಾಪುರದ ಬಾರ್‌ವೊಂದರ ಬಳಿ ಬೈಕ್ ಕಳ್ಳತನ ಮಾಡಿದ್ದ. ಈ ಸಂಬಂಧ ಪುಷ್ಪಾಪುರ ಗ್ರಾಮದ ಕುಮಾರ್ ರಾಮಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಶೇಷ್ ಜೀವನ್ ಜಾಗೇರಿಯಿಂದ ತಮಿಳುನಾಡಿನ ಈರೋಡ್‌ಗೆ ತೆರಳುತ್ತಿರುವಾಗ ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರ ಹಾಗೂ ಇನ್ಸ್‌ಪೆಕ್ಟರ್ ಮನೋಜ್ ಕುಮಾರ್ ನೇತೃತ್ವದ ತಂಡ ಮಂಚಾಪುರದ ಬಳಿ ದಾಳಿ ನಡೆಸಿ ಬೈಕ್ ಸಮೇತ ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಲೋಕೇಶ್ ಹಾಗೂ ಸಿಬ್ಬಂದಿ ಸಿದ್ದೇಶ್ ಕುಮಾರ್, ಗಿರೀಶ್, ಖಾನ್ ಭಾಗವಹಿಸಿದ್ದರು.

ಕೇಂದ್ರದ ನಿಯಮಕ್ಕೆ ತಲೆಬಾಗಿದ ಚೀನಾ ಮೊಬೈಲ್ ದೈತ್ಯ; ಭಾರತದ ಕಂಪನಿಗಳ ಜೊತೆ ಒಪ್ಪಂದ

ನವದೆಹಲಿ, ಫೆ.20– ಕೊನೆಗೂ ಚೀನಾದ ಅತಿದೊಡ್ಡ ಮೊಬೈಲ್ ಉತ್ಪಾದಕ ಕಂಪನಿ ಬಿಬಿಕೆ ಗ್ರೂಪ್ ಭಾರತೀಯ ಮೂಲದ ಉತ್ಪಾದಕರೊಂದಿಗೆ ಫೋನ್‌ಗಳ ನಿರ್ಮಾಣಕ್ಕೆ ಕೈಜೋಡಿಸಿದೆ. ಪ್ರಮುಖವಾಗಿ ಡಿಕ್ಸಾನ್ ಟೆಕ್ನಾಲಜೀಸ್ ಹಾಗೂ ಕಾರ್ಬನ್ ಗ್ರೂಪ್ ಕಂಪನಿಗಳೊಂದಿಗೆ ಒಪ್ಪೋ, ವಿವೋ ಹಾಗೂ ರಿಯಲ್ ಮೀ ಸ್ಮಾರ್ಟ್‌ಫೋನ್‌ಗಳನ್ನು ಉತ್ಪಾದನೆ ಮಾಡುವ ಒಪ್ಪಂದ ಮಾಡಿಕೊಂಡಿದೆ. ಪ್ರೊಡಕ್ಷನ್–ಲಿಂಕ್ಡ್ ಇನ್ಸೆಂಟಿವ್ (ಪಿಎಲ್‌ಐ) ಯೋಜನೆಯನ್ನು ಪಡೆಯಲು ಪರಿತಪಿಸುತ್ತಿರುವ ಈ ಕಂಪನಿಗೆ, ಸ್ಥಳೀಯ ಉತ್ಪಾದಕ ಕಂಪನಿಗಳನ್ನು ತನ್ನ ಪಾಲುದಾರರನ್ನಾಗಿ ಮಾಡಿಕೊಳ್ಳಬೇಕಿತ್ತು. ಕೇಂದ್ರ ಸರ್ಕಾರ ತನ್ನ ಪಿಎಲ್‌ಐ ಯೋಜನೆಗಳ ಪ್ರಮುಖ ನಿಯಮವೇ ಇದಾಗಿದ್ದು, ಯಾವುದೇ ಕಂಪನಿಗಳು ಇದರ ಪ್ರಯೋಜನ ಪಡೆಯಬೇಕಾದಲ್ಲಿ, ಆ ಕಂಪನಿಗಳು ತನ್ನ ಉತ್ಪಾದನೆಯನ್ನು ಭಾರತೀಯ ಮೂಲದ ಕಂಪನಿಗಳ ಮೂಲಕವೇ ಮಾಡಿಕೊಳ್ಳಬೇಕಿದೆ.

ಒಪ್ಪೋ ಮತ್ತು ವಿವೋ ಈಗಾಗಲೇ ಭಾರತದಲ್ಲಿ ದೊಡ್ಡ ಉತ್ಪಾದನಾ ಘಟಕಗಳನ್ನು ಹೊಂದಿವೆ. ಈ ಘಟಕಗಳು ಬಿಬಿಕೆ ಗ್ರೂಪ್ ಬ್ರಾಂಡ್‌ಗಳ ಸಂಪೂರ್ಣ ಶ್ರೇಣಿಯ ಮೊಬೈಲ್‌ಗಳನ್ನು ಉತ್ಪಾದನೆ ಮಾಡುತ್ತವೆ, ಉದಾಹರಣೆಗೆ ಒಪ್ಪೋ, ವಿವೋ, ರಿಯಲ್‌ಮೀ, ಒನ್‌ಪ್ಲಸ್ ಮತ್ತು ಐಕ್ಯೂ ಸ್ಮಾರ್ಟ್‌ಫೋನ್‌ಗಳನ್ನು ಉತ್ಪಾದನೆ ಮಾಡುತ್ತವೆ. ಈ ಹಿಂದೆ ಚೀನಾದ ಸ್ಮಾರ್ಟ್‌ಫೋನ್ ಕಂಪನಿಗಳ ವಿರುದ್ಧ ಭಾರತ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದರೂ ಪ್ರಸ್ತುತ ಕ್ರಮವು ಬಂದಿದೆ. ಚೀನಾದ ಸ್ಮಾರ್ಟ್‌ಫೋನ್ ಕಂಪನಿಗಳು ಕಳೆದ ಕೆಲವು ವರ್ಷಗಳಲ್ಲಿ ಕೇಂದ್ರದ ಸರ್ಕಾರ ಏಜೆನ್ಸಿಗಳ ಹೆಚ್ಚಿನ ಕಟ್ಟುಪಾಡುಗಳೊಂದಾಗಿ ಸಾಮರ್ಥ್ಯ ವಿಸ್ತರಣೆಗಾಗಿ ತಮ್ಮ ಸ್ವಂತ ಸ್ಥಾವರಗಳಲ್ಲಿ ನೇರವಾಗಿ ಹೂಡಿಕೆ ಮಾಡುವ ಬಗ್ಗೆ ಬಹಳ ಎಚ್ಚರಿಕೆಯಿಂದಿವೆ. ಕಸ್ಟಮ್ಸ್ ಸುಂಕ ಮತ್ತು ಆದಾಯ ತೆರಿಗೆ ವಂಚನೆಯಿಂದ ಹಿಡಿದು ಮನಿ ಲಾಂಡರಿಂಗ್ ಸೇರಿದಂತೆ ಹಲವು ಕೇಸ್‌ಗಳನ್ನು ಈ ಕಂಪನಿಗಳು ಎದುರಿಸುತ್ತಿವೆ.

ಒಂದನೇ ಪುಟದಿಂದ

ಸುರಕ್ಷಿತ ಕವಚ NICU

ಮೆಡಿಕಲ್ ಸೈನ್ಸಸ್ ಸಂಸ್ಥೆಯ ಆಸ್ಪತ್ರೆಗಳಿಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೊಬೈಲ್ ನಿಯೋನಾಟಲ್ ಐಸಿಯು ವಾಹನವನ್ನು ಪೂರೈಸಿದೆ ಎಂದು ತಿಳಿಸಿದರು. ಅವಧಿಗೂ ಮುನ್ನ ಇಲ್ಲವೇ ತಡವಾಗಿ ಜನಿಸುವ ಶಿಶುವಿಗೆ ಉಸಿರಾಟದ ತೊಂದರೆ, ಜಾಂಡೀಸ್, ತೀವ್ರ ಜ್ವರದಂತಹ ಸಮಸ್ಯೆಗಳು ಕಂಡುಬಂದಲ್ಲಿ ತಕ್ಷಣ ಅಲ್ಲಿಗೆ ಧಾವಿಸುವ ಈ ಘಟಕದ ವೈದ್ಯರು, ನರ್ಸ್‌ಗಳು, ಟೆಕ್ನೀಷಿಯನ್‌ಗಳು ಹಾಗೂ ಆಶಾ ಕಾರ್ಯಕರ್ತೆಯರು, ವಾಹನದ ಐಸಿಯುನಲ್ಲೇ ಚಿಕಿತ್ಸೆ ಆರಂಭಿಸಿ ಮಗು ಸುಧಾರಿಸಿದ ನಂತರ ಸಂಬಂಧಪಟ್ಟ ಮಕ್ಕಳ ಆಸ್ಪತ್ರೆಗೆ ಕರೆತಂದು ದಾಖಲಿಸುತ್ತಾರೆ. ಬಳಿಕ ಮಕ್ಕಳ ತಜ್ಞರು ಮಗುವಿಗೆ ಅಲ್ಲಿನ ಎನ್‌ಐಸಿಯುನಲ್ಲಿ ಚಿಕಿತ್ಸೆ ಮುಂದುವರಿಸುತ್ತಾರೆ. ಇದರಿಂದ ನವಜಾತ ಶಿಶು ಮರಣವನ್ನು ತಪ್ಪಿಸಬಹುದಾಗಿದೆ ಎಂದು ರಂದೀಪ್ ತಿಳಿಸಿದರು. ರಾಜ್ಯದಲ್ಲಿ ಇದೇ ಮೊದಲ ಬಾರಿ ಈ ಯೋಜನೆಯನ್ನು ಜಾರಿಗೆ ತಂದಿದ್ದು, ನವಜಾತ ಶಿಶುವಿಗೆ ಚಿಕಿತ್ಸೆ ನೀಡಿ ಸುಸಜ್ಜಿತ ಆಸ್ಪತ್ರೆಗೆ ಕರೆತಂದು ದಾಖಲಿಸಿ ಆರೋಗ್ಯ ಚೇತರಿಸಿಕೊಂಡ ಬಳಿಕ ಮತ್ತೆ ತಾಯಿ–ಮಗುವನ್ನು ಮನೆಗೆ ಕರೆದೊಯ್ದು ಬಿಡುವ ಈ ವಾಹನ ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುತ್ತದೆ.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ 2023ರ ಏಪ್ರಿಲ್‌ನಿಂದ 2024ರ ಜನವರಿ ಮಾಹೆವರೆಗೆ 31,423 ಮಕ್ಕಳು ಜನಿಸಿದ್ದು, 18 ಹೆರಿಗೆ ಸಮಯದಲ್ಲಿ ಹಾಗೂ 329 ನಂತರ ಸಾವನ್ನಪ್ಪಿವೆ. 2022–23ನೇ ಸಾಲಿನಲ್ಲಿ 35,441 ಮಕ್ಕಳು ಜನಿಸಿದ್ದು, 22 ಹೆರಿಗೆ ವೇಳೆ ಹಾಗೂ 558 ಇನ್‌ಫೆಂಟ್ ಸಾವುಗಳಾಗಿವೆ. ಗ್ರಾಮೀಣ ಪ್ರದೇಶ ಹಾಗೂ ಸಾರಿಗೆ ಮತ್ತಿತರ ಸೌಲಭ್ಯವಿಲ್ಲದ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಹೆಚ್‌ಸಿ)ಗಳಾಗಲೀ ಪೋಸ್ಟ್ ನೇಟಲ್ ಕೇರ್ ಘಟಕವಾಗಲೀ ಲಭ್ಯವಿರುವುದಿಲ್ಲ. ಅಂತಹ ಸ್ಥಳಗಳಿಗೆ ಮೊಬೈಲ್ ಎನ್‌ಐಸಿಯು ವಾಹನ ತೆರಳಿ ಪ್ರಥಮ ಚಿಕಿತ್ಸೆ ನೀಡಿ, ನಂತರ ಸೌಲಭ್ಯವಿರುವ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗುವುದು ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ ತಿಳಿಸಿದರು.

ವೆಂಟಿಲೇಟರ್, ಇನ್‌ಕ್ಯುಬೇಟರ್, ಆಕ್ಸಿಜನ್, ಪಲ್ಸ್ ತಪಾಸಣೆ, ಇಂಜೆಕ್ಷನ್, ನಿಯೋನೇಟಲಿಸ್ಟ್, ನರ್ಸ್‌ಗಳು, ಟೆಕ್ನೀಷಿಯನ್‌ಗಳು ಹಾಗೂ ಆಶಾ ಕಾರ್ಯಕರ್ತರನ್ನು ಒಳಗೊಂಡಿರುವ ಮೊಬೈಲ್ ಐಸಿಯು, ನವಜಾತ ಶಿಶು ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವರು. ಇದರಿಂದ ಹುಟ್ಟುವಾಗಲೇ ಅನಾರೋಗ್ಯದಿಂದ ಬಳಲುವ ಮಕ್ಕಳ ಸಾವನ್ನು ತಡೆಯಬಹುದು ಎಂದು ಅವರು ತಿಳಿಸಿದರು.

ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದ ನವಜಾತ ಶಿಶುಗಳ ತೀವ್ರ ಚಿಕಿತ್ಸಾ ವಿಭಾಗ (ಎನ್‌ಐಸಿಯು) ಸೇವೆ ಸಲ್ಲಿಸುತ್ತಿದ್ದು, ಜಿಲ್ಲೆಯಾದ್ಯಂತ ಹಾಗೂ ಗಡಿ ಜಿಲ್ಲೆಗಳ ತಾಲೂಕು ಸಾರ್ವಜನಿಕ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ರೆಫರ್ ಮಾಡುತ್ತಿದ್ದ ಪ್ರಕರಣಗಳು ಜಾಸ್ತಿಯಾಗಿತ್ತು. ಈ ಹೊಸ ಯೋಜನೆಯಿಂದ ಆ ಒತ್ತಡ ಕಡಿಮೆಯಾಗಲಿದೆ ಎಂದು ಡಾ. ಕುಮಾರಸ್ವಾಮಿ ತಿಳಿಸಿದರು. ಈಗ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು ಸಾರ್ವಜನಿಕ ಆಸ್ಪತ್ರೆಗಳು, ಕೆಲ ಸಮುದಾಯ ಆರೋಗ್ಯ ಕೇಂದ್ರಗಳು (ಸಿಹೆಚ್‌ಸಿ) ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಹೆಚ್‌ಸಿ)ಗಳಲ್ಲಿ ಹೆರಿಗೆ ಸೌಲಭ್ಯ ಹೆಚ್ಚಿಸಲಾಗುತ್ತಿದ್ದು, ಹೆರಿಗೆ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಪರಿಣಾಮ ಚೆಲುವಾಂಬ ಆಸ್ಪತ್ರೆ ಒತ್ತಡವೂ ಕಡಿಮೆಯಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದರು.

ವಿದ್ಯಾರ್ಥಿ ಶವ ಪತ್ತೆ!

ಸಂಬಂಧ ದೂರು ದಾಖಲಿಸಿಕೊಳ್ಳಲಾಗಿದ್ದು, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಪ್ರತಿಭಟನೆ ಕೈಬಿಡುವಂತೆ ಮನವೊಲಿಸಲೆತ್ನಿಸದರಾದರೂ, ಪಟ್ಟು ಬಿಡದ ಪ್ರತಿಭಟನಾಕಾರರು ಆರೋಪಿಗಳನ್ನು ಬಂಧಿಸುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಕದಲಲಿಲ್ಲ. ಅಂತಿಮವಾಗಿ 24 ಗಂಟೆಯೊಳಗೆ ಆರೋಪಿಗಳನ್ನು ಬಂಧಿಸುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂಪಡೆದರು.

ವಿವರ: ರತ್ನಪುರಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದ ಆಂಜನೇಯಸ್ವಾಮಿ–ಜಮಾಲ್ ಬೀಬೀ ಅಮ್ಮನವರ ಉರುಸ್ ಜಾತ್ರೆಯಲ್ಲಿ ಮುತ್ತುರಾಜ್ ತನ್ನ ಜೊತೆ ಓದುತ್ತಿರುವ ಅನ್ಯ ಕೋಮಿನ ಯುವತಿಯೊಂದಿಗೆ ಮಾತನಾಡುತ್ತಿರುವುದನ್ನು ಯಾರೋ ವಿಡಿಯೋ ಮಾಡಿ ಯುವತಿ ಅಣ್ಣನಿಗೆ ಕಳುಹಿಸಿದ್ದರು. ಇದನ್ನು ನೋಡಿದ ಯುವತಿಯ ಅಣ್ಣ ಮತ್ತು ಇನ್ನಿತರರು ಸೋಮವಾರ ಮಧ್ಯಾಹ್ನ ಪ್ರಥಮ ಪಿಯುಸಿ ಪರೀಕ್ಷೆ ಬರೆದು ಮನೆಗೆ ಹೋಗಿದ್ದ ಮುತ್ತುರಾಜ್‌ಗೆ ಫೋನ್ ಮಾಡಿ ಕರೆದು ಗ್ರಾಮದ ಕಾಲುವೆ ಬಳಿ ಹಲ್ಲೆ ನಡೆಸಿ ಆತನ ಮೊಬೈಲ್ ಕಿತ್ತುಕೊಂಡು ಹೋಗಿದ್ದರೆನ್ನಲಾಗಿದೆ. ಈ ವಿಷಯವನ್ನು ಸೋದರ ಸಂಬಂಧಿ ಅವಿನಾಶ್ ಮತ್ತುರಾಜ್ ತಂದೆ ರವಿಕುಮಾರ್‌ಗೆ ತಿಳಿಸಿದ್ದಾನೆ. ಈ ವೇಳೆ ಮಗನನ್ನು ಹುಡುಕಿಕೊಂಡು ರತ್ನಪುರಿಗೆ ಬಂದ ರವಿಕುಮಾರ್‌ಗೆ ಅವಿನಾಶ್ ಸ್ಥಳದಲ್ಲಿದ್ದ ಆರೋಪಿಗಳ ತೋರಿಸಿ ಮುತ್ತುರಾಜ್‌ನೊಂದಿಗೆ ಜಗಳವಾಡಿ ಹಲ್ಲೆ ನಡೆಸಿದ್ದು ಇವರೇ ಎಂದಾಗ ಅವರೆಲ್ಲಾ ಮುತ್ತುರಾಜ್ ಮೊಬೈಲ್ ಬಿಸಾಡಿ ಪರಾರಿಯಾಗಿದ್ದರು. ಬಳಿಕ ಶುಂಠಿ ಶೆಡ್‌ನಲ್ಲಿ ಮುತ್ತುರಾಜ್ ಶವ ಪತ್ತೆಯಾಗಿತ್ತು.

ಸೋನಿಯಾ ಗಾಂಧಿ ಅವಿರೋಧ ಆಯ್ಕೆ!

ಇಂದು ನಾಮಪತ್ರ ಹಿಂಪಡೆಯಲು ನಿಗದಿತ ಸಮಯ ಮುಗಿದ ಬಳಿಕ ಪರಿಸ್ಥಿತಿ ತಿಳಿಯಾಯಿತು. ಬಳಿಕ ಚುನಾವಣಾಧಿಕಾರಿಗಳು ಮೂವರೂ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. ಕಳೆದ ಬಾರಿ ಕಾಂಗ್ರೆಸ್ ರಾಜಸ್ಥಾನದಿಂದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ರಾಜ್ಯಸಭೆಗೆ ಕಳುಹಿಸಿತ್ತು. ಸಿಂಗ್ ಅವರ ಅಧಿಕಾರಾವಧಿ ಪೂರ್ಣಗೊಂಡ ನಂತರ, ಸೋನಿಯಾ ಗಾಂಧಿ ಅವರನ್ನು ಈಗ ರಾಜಸ್ಥಾನವನ್ನು ಪಕ್ಷಕ್ಕೆ ಸುರಕ್ಷಿತವೆಂದು ಪರಿಗಣಿಸಿ ಇಲ್ಲಿಂದ ರಾಜ್ಯಸಭೆಗೆ ಕಳುಹಿಸಲಾಗಿದೆ. ಇತ್ತೀಚೆಗಷ್ಟೇ ಸೋನಿಯಾ ಗಾಂಧಿ ಅವರನ್ನು ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವಂತೆ ಮಾಡಲು ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಅವರೊಂದಿಗೆ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೈಪುರಕ್ಕೆ ಬಂದಿದ್ದರು. ಇಲ್ಲಿಗೆ ಬಂದ ನಂತರ ಸೋನಿಯಾ ಗಾಂಧಿ ರಾಷ್ಟ್ರೀಯ ಅಸೆಂಬ್ಲಿ ಲಾಬಿಯಲ್ಲಿ ಕಾಂಗ್ರೆಸ್ ಶಾಸಕರ ಸಭೆ ನಡೆಸಿದರು. ಮೂರು ಸ್ಥಾನಗಳಿಗೆ ಮೂವರು ಅಭ್ಯರ್ಥಿಗಳು ಮಾತ್ರ ಕಣದಲ್ಲಿದ್ದ ಕಾರಣ, ಮೂವರ ಅವಿರೋಧ ಆಯ್ಕೆಯನ್ನು ಈಗಾಗಲೇ ನಿರ್ಧರಿಸಲಾಗಿದೆ ಎಂದು ಪರಿಗಣಿಸಲಾಗಿದೆ. ಈಗ ಎಲ್ಲರ ಕಣ್ಣು ಲೋಕಸಭೆ ಚುನಾವಣೆಯತ್ತ ನೆಟ್ಟಿದೆ.

ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆಗೆ ಸಾಕ್ಷಿ

ಇವತ್ತಿನವರೆಗೂ ಒಂದು ಪೈಸೆ ಅನುದಾನವೂ ಬಂದಿಲ್ಲ. ರಾಜ್ಯದ ಪಾಲನ್ನು ಕೇಳುವುದು ತಪ್ಪಾ, ಇದು ಸಂಘರ್ಷ ಹೇಗಾಗುತ್ತದೆ ಎಂದು ಪ್ರಶ್ನಿಸಿದರು. ಬರಗಾಲದ ಹಿನ್ನೆಲೆಯಲ್ಲಿ ನರೇಗಾ ಮಾನವ ದಿನಗಳನ್ನು 100 ರಿಂದ 150 ದಿನಗಳಿಗೆ ಏರಿಕೆ ಮಾಡಬೇಕಿತ್ತು, ಪದೇ ಪದೆ ಮನವಿ ಮಾಡಿದರೂ ಏರಿಕೆ ಮಾಡಲೇ ಇಲ್ಲ, ಇದು ರಾಜ್ಯದ ಜನರಿಗೆ ಮಾಡಿದ ಅನ್ಯಾಯವಲ್ಲವೇ ಎಂದರು.

ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ ಯೋಜನೆಗಳಿಂದ ಕೋಟಿ, ಕೋಟಿ ಫಲಾನುಭವಿಗಳು ಅನುಕೂಲ ಪಡೆಯುತ್ತಿದ್ದಾರೆ, ಪ್ರತಿ ಕೆಜಿಗೆ 34 ರೂ. ಕೊಡುತ್ತೇವೆ ಎಂದರೂ ಕೇಂದ್ರ ಸರ್ಕಾರ ಅಕ್ಕಿ ಕೊಡಲಿಲ್ಲ. ಈಗ 29 ರೂ.ಗೆ ಕೆಜಿ ಅಕ್ಕಿ ಕೊಡುವುದಾಗಿ ಹೇಳುತ್ತಿದ್ದಾರೆ, ಈಗಲೂ ನಮಗೆ ಅದೇ ಬೆಲೆಗೆ ಅಕ್ಕಿ ಕೊಡಿಸಿ, ಕೇಂದ್ರದಿಂದ ಖರೀದಿಸಿ ಜನರಿಗೆ ಕೊಡಲು ಸಿದ್ಧರಿದ್ದೇವೆ, ಕೇಂದ್ರದ ಜತೆ ಮಾತನಾಡಿ ಅಕ್ಕಿ ಕೊಡಿಸಿ ಎಂದು ಬಿಜೆಪಿ ಸದಸ್ಯರಿಗೆ ಮುಖ್ಯಮಂತ್ರಿ ಸವಾಲು ಹಾಕಿದರು. ಬಿಜೆಪಿಯವರು ಎಂದಾದರೂ ಜಿಲ್ಲೆ, ತಾಲೂಕುಗಳಲ್ಲಿರುವ ಹಿಂದುಳಿದ ವರ್ಗಗಳ, ಎಸ್‌ಸಿ, ಎಸ್‌ಟಿ ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ್ದಾರಾ, ಈ ಸಮುದಾಯದ ವಿದ್ಯಾರ್ಥಿಗಳ ಕಷ್ಟಗಳನ್ನು ಕೇಳಿದ್ದಾರಾ, ಅವರ ಸಂಕಷ್ಟಗಳಿಗೆ ಸ್ಪಂದಿಸಿದ್ದಾರಾ ಎಂದು ಪ್ರಶ್ನಿಸಿದರು.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳಿಂದ ನ್ಯಾನೊ ಸ್ಯಾಟಲೈಟ್ ತಯಾರು

● 1.25 ಕೆಜಿ ತೂಕದ ಸ್ಯಾಟಲೈಟ್‌ಗೆ 1.25 ಕೋಟಿ ವೆಚ್ಚ ● ಏಪ್ರಿಲ್‌ನಲ್ಲಿ ಇಸ್ರೋನಲ್ಲಿ ಉಡಾವಣೆ ● 60 ವಿದ್ಯಾರ್ಥಿಗಳಿಂದ ನ್ಯಾನೊ ಸ್ಯಾಟಲೈಟ್‌ಗೆ ರೂಪ ● ವೈದ್ಯಕೀಯ ಕ್ಷೇತ್ರದ ಬಗ್ಗೆ ಅಧ್ಯಯನ ● ಸ್ಯಾಟಲೈಟ್ ಡೇಟಾ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗೆ ಲಭ್ಯ



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಭವನದಲ್ಲಿ ಮಂಗಳವಾರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಂತೋಷ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.20(ಬಿಎಲ್‌ಯು)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಸೇರಿದಂತೆ ಜೆಎಸ್‌ಎಸ್‌ನ ನಾಲ್ಕು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಜೆಎಸ್‌ಎಸ್ ನ್ಯಾನೋ ಸ್ಯಾಟಲೈಟ್ ತಯಾರಿಸಿದ್ದು, ಏಪ್ರಿಲ್‌ನಲ್ಲಿ ಇಸ್ರೋ ಉಪಗ್ರಹವನ್ನು ಉಡಾವಣೆ ಮಾಡಲಿದೆ ಎಂದು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎ.ಎನ್. ಸಂತೋಷ್ ಕುಮಾರ್ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳೇ ತಯಾರು ಮಾಡಿರುವ 1.25 ಕೆ.ಜಿ. ತೂಕದ ನ್ಯಾನೊ ಸ್ಯಾಟಲೈಟ್‌ನಿಂದ ಸಂಶೋಧನೆಗೆ ಬಹಳಷ್ಟು ಉಪಯೋಗವಾಗಲಿದೆ ಎಂದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ನೋಯ್ಡಾದ ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್ ಹಾಗೂ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ 60 ವಿದ್ಯಾರ್ಥಿಗಳು ಸೇರಿ ನ್ಯಾನೊ ಸ್ಯಾಟಲೈಟ್ ತಯಾರು ಮಾಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಜೆಎಸ್‌ಎಸ್ ತಾಂತ್ರಿಕ ಪರಿಣತರು ನೆರವು ಹಾಗೂ ಮಾರ್ಗದರ್ಶನ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಸ್ಯಾಟಲೈಟ್ ತಯಾರಿಕೆಗೆ ಆರಂಭದಲ್ಲಿ 80 ಲಕ್ಷ ರೂಪಾಯಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ ಈಗ ಇದರ ವೆಚ್ಚ ಸುಮಾರು 1.25 ಕೋಟಿ ರೂಪಾಯಿಗಳಾಗಿದೆ ಎಂದು ಪ್ರೊ.ಸಂತೋಷ್ ಕುಮಾರ್ ತಿಳಿಸಿದರು.

ಜೆಎಸ್‌ಎಸ್ ನ್ಯಾನೊ ಸ್ಯಾಟಲೈಟ್‌ನಿಂದ ವೈದ್ಯಕೀಯ ಕ್ಷೇತ್ರದ ಸಂಶೋಧನೆಗೆ ಹೆಚ್ಚು ಅನುಕೂಲವಾಗಲಿದೆ. ಗುರುತ್ವಾಕರ್ಷಣೆ ಕಡಿಮೆ ಇರುವ ಪ್ರದೇಶದಲ್ಲಿ ಔಷಧಗಳ ಸಾಮರ್ಥ್ಯ ಪರೀಕ್ಷಿಸುವುದು ಇದರ ಮೂಲ ಉದ್ದೇಶ ಎಂದು ವಿವರಿಸಿದರು.

ನಮ್ಮ ಸಂಸ್ಥೆ ತಯಾರು ಮಾಡಿರುವ ಸ್ಯಾಟಲೈಟ್ ಅನ್ನು ಇಸ್ರೋ ಏಪ್ರಿಲ್ ತಿಂಗಳಲ್ಲಿ ಉಡಾವಣೆ ಮಾಡಲಿದೆ. ಸ್ಯಾಟಲೈಟ್ ಉಡಾವಣೆ ಆದ ನಂತರ ಅದರಿಂದ ಬರುವ ಡೇಟಾ ಅಥವಾ ತಂತ್ರಾಂಶಗಳನ್ನು ಇಸ್ರೋ ಜೆಎಸ್‌ಎಸ್ ಸಂಸ್ಥೆಗೆ ನೀಡಲಿದೆ ಎಂದು ಪ್ರೊ.ಸಂತೋಷ್ ಕುಮಾರ್ ತಿಳಿಸಿದರು.

ಜೆಎಸ್‌ಎಸ್ ಎಸ್‌ಟಿಯು ಇತ್ತೀಚೆಗೆ ಕೈಗಾರಿಕೆ ಮತ್ತು ಉದ್ಯಮ ಚಾಲಿತ ಕೋರ್ಸ್‌ಗಳನ್ನು ಆರಂಭಿಸಿದ್ದು, ಹಲವು ಖಾಸಗಿ ಕಂಪನಿಗಳ ಜೊತೆಗೆ ಸಂಶೋಧನಾ ಒಡಂಬಡಿಕೆ ಮಾಡಿಕೊಂಡಿದೆ ಇದರಿಂದ ವಿದ್ಯಾರ್ಥಿಗಳಿಗೆ ಉದ್ಯಮಶೀಲ ಶಿಕ್ಷಣ ದೊರೆಯುತ್ತಿದೆ ಎಂದು ಪ್ರೊ.ಸಂತೋಷ್ ಕುಮಾರ್ ಹೇಳಿದರು.

ಫೆಬ್ರವರಿ 24 ರಂದು 6 ನೇ ಘಟಿಕೋತ್ಸವ ಸಮಾರಂಭ

ಮೈಸೂರಿನ ಮಾನಸ ಗಂಗೋತ್ರಿಯ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ಫೆಬ್ರವರಿ 24 ರಂದು ಸಂಜೆ 4 ಗಂಟೆಗೆ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ 6 ನೇ ಘಟಿಕೋತ್ಸವ ಸಮಾರಂಭ ನಡೆಯಲಿದೆ ಎಂದು ಇದೇ ವೇಳೆ ಪ್ರೊ.ಸಂತೋಷ್ ಕುಮಾರ್ ಮಾಹಿತಿ ನೀಡಿದರು.

ವಿಶ್ವವಿದ್ಯಾನಿಲಯದ ಕುಲಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವ ಸಮಾರಂಭದಲ್ಲಿ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಹೇಳಿದರು.

ಅಂದು ನಡೆಯುವ ಘಟಿಕೋತ್ಸವದಲ್ಲಿ 1063 ಬಿಇ, 47 ಬಿಸಿಎ, 120 ಎಂ.ಟೆಕ್, 117 ಎಂಸಿಎ, 51 ಎಂಎಸ್ಸಿ, 256 ಎಂಬಿಎ ಮತ್ತು 9 ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಪದವಿ ಪ್ರದಾನ ಮಾಡಲಾಗುವುದು. ಜೊತೆಗೆ ವಿವಿಧ ವಿಭಾಗಗಳಲ್ಲಿ ಅತೀ ಹೆಚ್ಚು ಅಂಕ ಪಡೆದ 32 ವಿದ್ಯಾರ್ಥಿಗಳು ಸೇರಿದಂತೆ 63 ವಿದ್ಯಾರ್ಥಿಗಳಿಗೆ ಪದಕ ನೀಡಲಾಗುವುದು. ಇದರಲ್ಲಿ 31 ದತ್ತಿ ಪದಕಗಳು ಸೇರಿವೆ ಎಂದರು.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ಫೆಬ್ರವರಿ 22 ರಿಂದ 26 ರವರೆಗೆ ಆಗ್ನೆಯ ವಲಯ ಯುವ ಬಿಂಬ–2024 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರೊ.ಸಂತೋಷ್ ಕುಮಾರ್ ಈ ಸಂದರ್ಭದಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಅಸೋಸಿಯೇಷನ್ ಸಹಯೋಗದೊಂದಿಗೆ ನಡೆಯುವ ಯುವ ಬಿಂಬದಲ್ಲಿ ನೃತ್ಯ, ಸಂಗೀತ ಸೇರಿದಂತೆ ಹಲವು ಶೈಕ್ಷಣಿಕ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಲಲಿತ ಕಲೆಗಳ ವಿವಿಧ ಸ್ಪರ್ಧೆ ಕೂಡ ಆಯೋಜಿಸಲಾಗಿದೆ. ಐದು ದಿನಗಳ ಕಾಲ ನಡೆಯುವ ಕಾರ್ಯಕ್ರಮ ಆರು ಹಂತಗಳಲ್ಲಿ ನಡೆಯಲಿದೆ. ಕರ್ನಾಟಕ, ತೆಲಂಗಾಣ, ಛತ್ತೀಸ್‌ಘಡ ಸೇರಿದಂತೆ ವಿವಿಧ ವಿಶ್ವವಿದ್ಯಾನಿಲಯಗಳ 1,250 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಫೆಬ್ರವರಿ 22 ರಂದು ಬೆಳಗ್ಗೆ 11 ಗಂಟೆಗೆ ಯುವ ಬಿಂಬ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಖ್ಯಾತ ಸಂಗೀತ ಹಿನ್ನೆಲೆ ಗಾಯಕ ವಿಜಯ ಪ್ರಕಾಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಡಾ.ಬೆಟ್‌ಸೂರ್ ಮಠ, ಎಐಯು ಜಂಟಿ ಕಾರ್ಯದರ್ಶಿ ಡಾ.ಬಲ್ಜಿತ್ ಸಿಂಗ್ ಸೆಕ್ಸಾನ್, ಡಾ.ಸುರೇಶ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರೊ.ಸಂತೋಷ್ ಕುಮಾರ್ ಹೇಳಿದರು.

ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಎ.ಧನರಾಜ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಪಿ.ನಂಜುಂಡಸ್ವಾಮಿ, ಕಾಲೇಜಿನ ಪ್ರಿನ್ಸಿಪಾಲ್ ಸಿ.ನಟರಾಜ್, ನಾಗೇಂದ್ರ ಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕೃಷಿ ಪ್ರಶಸ್ತಿ ಯೋಜನೆಗಳ ಪ್ರಗತಿ ಬಗ್ಗೆ ಪರಿಶೀಲನೆ



ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ಸೋಮವಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯಿತ್ರಿ ಕೃಷಿ ಪ್ರಶಸ್ತಿ ಯೋಜನೆಗಳ ಪ್ರಗತಿ ಬಗ್ಗೆ ಪರಿಶೀಲನೆ ನಡೆಸಿದರು.

ಮೈಸೂರು, ಫೆ.20(ಬಿಎಲ್‌ಯು)– ಕೃಷಿ ನವೋದ್ಯಮ, ಕೃಷಿ ಭಾಗ್ಯ, ಹೈಟೆಕ್ ಹಾರ್ವೆಸ್ಟರ್ ಹಾಗೂ ಕೃಷಿ ಪ್ರಶಸ್ತಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ನಿನ್ನೆ ನಡೆಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯಿತ್ರಿ ಯೋಜನೆಯ ಬಗ್ಗೆ ಪರಿಶೀಲನೆ ನಡೆಸಿದರು.

ಮೈಸೂರು ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಈ ಯೋಜನೆಗಳ ಬಗ್ಗೆ ಅಧಿಕಾರಿಗಳು ಹೆಚ್ಚಿನ ಪ್ರಚಾರ ಕೊಡಬೇಕು. ಈ ಮೂಲಕ ಸರ್ಕಾರದ ಯೋಜನೆಗಳನ್ನು ರೈತರು ಪಡೆದುಕೊಳ್ಳುವಂತೆ ಮಾಡಬೇಕು ಎಂದು ಸೂಚಿಸಿದರು.

ಕೃಷಿ ಭಾಗ್ಯ ಯೋಜನೆಯಲ್ಲಿ 283 ಗುರಿ ಇದ್ದು, ಈ ತನಕ 231 ರೈತರು ಅರ್ಜಿ ಸಲ್ಲಿಸಿದ್ದಾರೆ. ಇವರಲ್ಲಿ 149 ಫಲಾನುಭವಿಗಳಿಗೆ ಕಾರ್ಯಾದೇಶ ನೀಡಲಾಗಿದೆ. ಈ ಮೂಲಕ ರೈತರಿಗೆ ಸರ್ಕಾರದ ಸಹಾಯಧನ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಮುಂದಾಗಬೇಕು ಎಂದು ಗಾಯಿತ್ರಿ ಸೂಚಿಸಿದರು.

ಕೃಷಿ ನವೋದಯ ಯೋಜನೆಯಲ್ಲಿ ಎರಡು ಅರ್ಜಿ ಸ್ವೀಕಾರ ಮಾಡಲಾಗಿದ್ದು, ಪರಿಶೀಲನೆಗಾಗಿ ರಾಜ್ಯ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡಲಾಯಿತು. ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಲ್ಲಿ ಸಂಸ್ಥೆ ಹಾಗೂ ಫಲಾನುಭವಿಯಿಂದ ತಲಾ ಒಂದೊಂದು ಅರ್ಜಿ ಪರಿಶೀಲನೆ ಮಾಡಲಾಯಿತು. ತರುವಾಯ ಇದಕ್ಕೆ ಕಾರ್ಯಾದೇಶ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಇದಲ್ಲದೆ 2022–23 ನೇ ಸಾಲಿಗೆ ಸಂಬಂಧಿಸಿದಂತೆ ಕೃಷಿ ಪ್ರಶಸ್ತಿ ಯೋಜನೆಯಡಿ ಜಿಲ್ಲೆಯಲ್ಲಿ ನೋಂದಾಯಿಸಿರುವ ರೈತರನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಉಪ ಕೃಷಿ ನಿರ್ದೇಶಕ ಧನಂಜಯ, ಹುಣಸೂರು ಉಪ ಕೃಷಿ ನಿರ್ದೇಶಕ ರಾಜು ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸದೃಢ ಸಮಾಜಕ್ಕೆ ಸರ್ವಜ್ಞರ ವಚನಗಳು ಪೂರಕ

ಮೈಸೂರು ಜಿಪಂ ಸಿಇಓ ಕೆ.ಎಂ. ಗಾಯತ್ರಿ ಅಭಿಮತ



ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಆಯೋಜಿಸಿದ್ದ ಕವಿ ಸರ್ವಜ್ಞನ ಜಯಂತಿ ಕಾರ್ಯಕ್ರಮವನ್ನು ಜಿಪಂ ಸಿಇಓ ಕೆ.ಎಂ. ಗಾಯತ್ರಿ ಉದ್ಘಾಟಿಸಿದರು.

ಮೈಸೂರು, ಫೆ. 20(ಆರ್‌ಕೆ)– ಸದೃಢ ಸಮಾಜ ನಿರ್ಮಾಣಕ್ಕೆ ಸಂತ ಕವಿ ಸರ್ವಜ್ಞನ ವಚನ, ತ್ರಿಪದಿಗಳು ದಾರಿದೀಪವಾಗಿವೆ ಎಂದು ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ. ಗಾಯತ್ರಿ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತ ಮತ್ತು ಕನ್ನಡ–ಸಂಸ್ಕೃತಿ ಇಲಾಖೆಯಿಂದ ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಇಂದು ಆಯೋಜಿಸಿದ್ದ ಕವಿ ಸರ್ವಜ್ಞನ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಉತ್ತಮ ಸಮಾಜ ಬಲಪಡಿಸುವ ಸಾರಾಂಶಗಳು ಸರ್ವಜ್ಞನ ತ್ರಿಪದಿಗಳಲ್ಲಿವೆ ಎಂದರು.

ವಚನಗಳಲ್ಲಿರುವ ತತ್ವಾದರ್ಶಗಳು ಸಮಾಜದಲ್ಲಿರುವ ಅಂಧಕಾರ ಹೋಗಲಾಡಿಸುತ್ತವೆಯಲ್ಲದೆ, ಅವು ಜನಸಾಮಾನ್ಯರಿಗೂ ಅರ್ಥವಾಗುವಂತಹ ರೀತಿಯಲ್ಲಿ ತ್ರಿಪದಿಗಳನ್ನು ರಚಿಸಲಾಗಿದೆ. ಪ್ರತಿಯೊಂದು ವೈಜ್ಞಾನಿಕ ವಿಮರ್ಶೆಗಳನ್ನೂ ಅನ್ವಯಿಸುವ ತತ್ವಗಳನ್ನು ಕವಿ ಸರ್ವಜ್ಞ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಆದರ್ಶ ವ್ಯಕ್ತಿಗಳ ಜಯಂತಿಗಳು ನಾಡಿನ ಜನರ ಒಳಿತಿಗೆ ನಾಂದಿ ಹಾಡುವಂತಿರಬೇಕು, ಬದಲಾವಣೆ, ಸುಧಾರಣೆಗೆ ಅವು ಪೂರಕವಾಗಿರಬೇಕೇ ಹೊರತು, ಅಪಸ್ವರಕ್ಕೆ ಕಾಣವಾಗಬಾರದು. ಸಂತ ಕವಿ ಸರ್ವಜ್ಞ ಕೇವಲ ಒಂದು ಸಮುದಾಯ ಅಥವಾ ಸಮಾಜಕ್ಕೆ ಸೀಮಿತವಾಗಿರದೇ ಅವರ ವಚನಗಳು ಸರ್ವರಿಗೂ ಸರ್ವಕಾಲಕ್ಕೂ ಪ್ರಸ್ತುತ ಎಂಬುದು ಖಾತರಿಯಾಗಿದೆ ಎಂದು ಗಾಯತ್ರಿ ನುಡಿದರು.

ಕಠಿಣವಾದ ವಿಷಯಗಳನ್ನೂ ಸರಳವಾಗಿ ಅರ್ಥೈಸುವ ಅವರ ತ್ರಿಪದಿಗಳ ಸಾರಾಂಶ ಈ ಜಗತ್ತಿಗೆ ಅತ್ಯವಶ್ಯ. ನಾವು ಅವುಗಳನ್ನು ಅರ್ಥೈಸಿಕೊಂಡು ಆದರ್ಶಮಯ ಜೀವನ ನಡೆಸಿದರೆ ಮಾತ್ರ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದು ಅವರು ಇದೇ ಸಂದರ್ಭ ನುಡಿದರು.

ಕುಂಬಾರರ ಸಂಘದ ರಾಜ್ಯಾಧ್ಯಕ್ಷ ಆರ್. ಶ್ರೀನಿವಾಸ್, ಜಿಲ್ಲಾಧ್ಯಕ್ಷ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಆರ್. ಸೋಮಶೇಖರ್, ಮಹಿಳಾ ಸಂಘದ ಅಧ್ಯಕ್ಷೆ ರೇಣುಕಾಂಬ, ಸರ್ವಜ್ಞ ಸೇವಾ ಸಮಿತಿ ಅಧ್ಯಕ್ಷ ವಾಸು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎಸ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದಲ್ಲಿ ಸಂವಿಧಾನ ಜಾಗೃತಿ ಜಾಥಾ



ಮೈಸೂರು, ಫೆ20(ಎಸ್‌ಬಿಡಿ)– ಮೈಸೂರು ಚಾಮುಂಡಿಬೆಟ್ಟದಲ್ಲಿ ಮಂಗಳವಾರ ಸಂವಿಧಾನ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ತಾಲೂಕು ಪಂಚಾಯ್ತಿ ಹಾಗೂ ಚಾಮುಂಡಿಬೆಟ್ಟ ಗ್ರಾಮ ಪಂಚಾಯ್ತಿ ಸಹಯೋಗದಲ್ಲಿ ಕಾಲ್ನಡಿಗೆ ಜಾಥಾ, ದ್ವಿಚಕ್ರ ವಾಹನಗಳ ರ್‍ಯಾಲಿ ಮೂಲಕ ಸ್ಥಳೀಯ ನಿವಾಸಿಗಳು ಹಾಗೂ ಪ್ರವಾಸಿಗರಿಗೆ ಸಂವಿಧಾನದ ಆಶಯ ಹಾಗೂ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಚಾಮುಂಡೇಶ್ವರಿ ದೇವಸ್ಥಾನ, ಮಹಿಷಾಸುರ ಪ್ರತಿಮೆ, ಸಾರಿಗೆ ಬಸ್ ನಿಲ್ದಾಣ, ಖಾಸಗಿ ವಾಹನಗಳ ನಿಲ್ದಾಣ ಸೇರಿದಂತೆ ಹೆಚ್ಚು ಜನದಟ್ಟಣೆ ಇರುವಲ್ಲಿ ಸಂವಿಧಾನ ಪೀಠಿಕೆ ವಾಚಿಸಲಾಯಿತು. ಶಾಲಾ ಮಕ್ಕಳು ವೃತ್ತಾಕಾರದಲ್ಲಿ ನಿಂತು ಸಂವಿಧಾನ ಪೀಠಿಕೆ ಹೇಳುವ ಮೂಲಕ ಗಮನ ಸೆಳೆದರು. ಸ್ಥಳೀಯ ಮುಖಂಡರು, ಅಧಿಕಾರಿಗಳು ಜಾಥಾದಲ್ಲಿ ಭಾಗಿಯಾಗಿದ್ದರು.

ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ಗಿರಿಧರ್, ಸಹಾಯಕ ನಿರ್ದೇಶಕ ಡಿ.ಸಿ. ಶಿವಣ್ಣ, ತಾಲೂಕಿನ ಎಲ್ಲಾ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಎಸ್‌ಡಿಎಎ, ಡಿಇಒ, ಬಿಲ್ ಕಲೆಕ್ಟರ್‌ಗಳು, ಶಾಲಾ ಮಕ್ಕಳು ಸೇರಿದಂತೆ ನೂರಾರು ಮಂದಿ ಸಂವಿಧಾನ ಪೀಠಿಕೆಯನ್ನು ಓದುವ ಮೂಲಕ ಸಂವಿಧಾನದ ಆಶಯಕ್ಕೆ ಬದ್ಧರಾಗಿರುತ್ತೇವೆ ಎಂದು ಪ್ರತಿಜ್ಞೆ ಸ್ವೀಕರಿಸಿದರು.

ಸರ್ವಜ್ಞ ಬಹುದೊಡ್ಡ ಸಮಾಜ ಸುಧಾರಕ

● ಹಿರಿಯ ಸಾಹಿತಿ ಬನ್ನೂರು ರಾಜು ಅಭಿಮತ ● ಮೈಸೂರಲ್ಲಿ ತ್ರಿಪದಿಗಳ ಬ್ರಹ್ಮ ಸರ್ವಜ್ಞ ಜಯಂತ್ಯುತ್ಸವ



ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆ ವತಿಯಿಂದ ಅಗ್ರಹಾರ ಮಾಧವರಾವ್ ವೃತ್ತದಲ್ಲಿ ಸರ್ವಜ್ಞ ಜಯಂತ್ಯುತ್ಸವ ಆಚರಿಸಲಾಯಿತು.

ಮೈಸೂರು, ಫೆ.20(ಎಸ್‌ಬಿಡಿ)– ಸರಳ ತ್ರಿಪದಿಗಳ ಮೂಲಕ ಮಾನವ ಕುಲಕ್ಕೆ ಜ್ಞಾನಾಮೃತ ನೀಡಿದ ಸರ್ವಜ್ಞ, ಬಹುದೊಡ್ಡ ಸಮಾಜ ಸುಧಾರಕ ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆ ವತಿಯಿಂದ ಅಗ್ರಹಾರ ಮಾಧವರಾವ್ ವೃತ್ತದಲ್ಲಿ ಮಂಗಳವಾರ ಏರ್ಪಡಿಸಿದ್ದ ತ್ರಿಪದಿಗಳ ಬ್ರಹ್ಮ ಸರ್ವಜ್ಞ ಜಯಂತ್ಯುತ್ಸವದಲ್ಲಿ ಮಾತನಾಡಿ, ಸಂತ ಕವಿ, ಆಶುಕವಿ, ದೇವಕವಿ ಸರ್ವಜ್ಞ, ಕಾಯಕ ಸಮಾಜದ ಕುಂಬಾರ ಕುಲದಲ್ಲಿ ಜನಿಸಿ, ತಮ್ಮ ಮೇಲ್ಮಟ್ಟದ ಚಿಂತನೆಗಳಿಂದ ಮಾನವ ಕುಲಕ್ಕೆ ದಾರಿದೀಪವಾಗಿದ್ದಾರೆ ಎಂದರು.

'ಜಾತಿ ಹೀನರ ಮನೆಯ ಜ್ಯೋತಿ ತಾ ಹೀನವೇ? ಜಾತಿ ವಿಜಾತಿ ಎನಬೇಡ ದೇವ ನೊಲಿದಾತನೇ ಜಾತ ಸರ್ವಜ್ಞ' ಎಂದು ಸಮಾನತೆಯ ಸಂದೇಶವನ್ನು ಜಗತ್ತಿಗೆ ಸಾರಿದರು. ಎಲ್ಲರಿಗೂ ಮನದಟ್ಟಾಗುವಂತೆ ಸರಳ ತ್ರಿಪದಿಗಳ ಮೂಲಕ ಮಹತ್ತರ ವಿಚಾರಗಳನ್ನು ತಿಳಿಸಿಕೊಟ್ಟರು. ಸಹಸ್ರಾರು ತ್ರಿಪದಿಗಳಲ್ಲಿ ಜಗತ್ತಿಗೆ ಜ್ಞಾನಾಮೃತ ಉಣಬಡಿಸಿರುವ ತ್ರಿಪದಿಗಳ ಬ್ರಹ್ಮ ಸರ್ವಜ್ಞ, ಜಗತ್ತು ಕಂಡ ಬಹು ದೊಡ್ಡ ಸಮಾಜ ಸುಧಾರಕರೂ ಹೌದು ಎಂದು ತಿಳಿಸಿದರು.

ತೆಲುಗಿಗೆ ವೇಮನಕವಿ, ತಮಿಳಿಗೆ ತಿರುವಳ್ಳುವರ್ ಕವಿ ಹಾಗೂ ಹಿಂದಿಗೆ ಕವಿ ಕಬೀರರಂತೆ ಕನ್ನಡಕ್ಕೆ ಸರ್ವಜ್ಞ ಶ್ರೇಷ್ಠ ಕವಿ. ತಮ್ಮ ಅಗಾಧ ಪಾಂಡಿತ್ಯದಿಂದ ಅತ್ಯಂತ ಸರಳ, ಸುಲಲಿತ ಹಾಗೂ ಅರ್ಥಪೂರ್ಣ ತ್ರಿಪದಿಗಳ ಕೊಡುಗೆ ನೀಡಿದರು. ಜಗತ್ತಿಗೊಬ್ಬರೇ ಸರ್ವಜ್ಞ ಎಂಬ ಕೀರ್ತಿಗೂ ಭಾಜನರಾದರು. 10ನೇ ಶತಮಾನದಲ್ಲಿ ಆದಿ ಕವಿ ಪಂಪ 'ಮನುಷ್ಯ ಕುಲ ತಾನೊಂದೇ ವಲಂ' ಎಂದರು. 12ನೇ ಶತಮಾನದಲ್ಲಿ ಬಸವಣ್ಣ 'ಇವನಾರವ ಇವನಾರವನೆನ್ನದೆ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ' ಎಂದರು. ಹಾಗೆಯೇ 16ನೇ ಶತಮಾನದಲ್ಲಿ ಸರ್ವಜ್ಞರು 'ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು, ಸುಡುವಗ್ನಿಯೊಂದೇ ಇರುತಿರಲು ಕುಲ ಗೋತ್ರ ನಡುವೆ ಎತ್ತಣದು' ಎನ್ನುವ ಮೂಲಕ ಎಲ್ಲರೂ ಒಂದೇ ಎಂಬ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿದರು. ಸರ್ವಜ್ಞರ ಕುರಿತಂತೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಸರ್ವರಲಿ ಒಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞರಿಗೆ ಗರ್ವ ತಾಕಲೇ ಇಲ್ಲ. ಇವರು ನಾಡು ಕಂಡ ಮಹಾಜ್ಞಾನಿ, ಮಹಾ ದಾರ್ಶನಿಕ, ಎಲ್ಲಕ್ಕಿಂತ ಮುಖ್ಯವಾಗಿ ಮಹಾನ್ ಮಾನವತಾವಾದಿ. ಇವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆಯ ಗೌರವಾಧ್ಯಕ್ಷೆ ಸಿ.ರೇಣುಕಾಂಬ, ಅಧ್ಯಕ್ಷ ಮಹೇಶ್, ಉಪಾಧ್ಯಕ್ಷರಾದ ಉತ್ತನಹಳ್ಳಿ ಕೆ.ಶಂಕರ್, ವೆಂಕಟಾಚಲ, ಪ್ರಧಾನ ಕಾರ್ಯದರ್ಶಿ ನಾಗರಾಜ್, ಸಹ ಕಾರ್ಯದರ್ಶಿ ಮಹದೇವಸ್ವಾಮಿ, ಖಜಾಂಚಿ ಯಶವಂತ ಕುಮಾರ್, ಸಂಘಟನಾ ಕಾರ್ಯದರ್ಶಿಗಳಾದ ಎಂ.ಎಂ. ಯೋಗೇಶ್, ಶಿವರಾಜ್, ಲಕ್ಷ್ಮೀನಾರಾಯಣ, ವೆಂಕಟೇಶ್, ಸಿ.ನಾಗರಾಜ್, ಹೆಚ್.ಶ್ರೀನಿವಾಸ್, ನಿರ್ದೇಶಕರಾದ ದಿನೇಶ್, ರಾಮಕೃಷ್ಣ, ಎನ್.ಕುಮಾರ್, ಸೋಮಶೇಖರ್, ಜಿ.ಯದುನಂದನ್, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಎಂ.ಮೋಹನ್ ಕುಮಾರ್ ಗೌಡ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ, ತಾಪಂ ಮಾಜಿ ಸದಸ್ಯ ಉತ್ತನಹಳ್ಳಿ ಶಿವಣ್ಣ, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸಪ್ಪ ಶ್ಯಾಮ ಸುಂದರ್, ಕಶ್ಯಪ ಮತ್ತಿತರರು ಪಾಲ್ಗೊಂಡಿದ್ದರು.

ಚಾಮುಂಡೇಶ್ವರಿ ದೇವಸ್ಥಾನದ ಸ್ವಚ್ಛತಾ ಸಿಬ್ಬಂದಿ ಹೃದಯಾಘಾತದಿಂದ ಸಾವು



ಮೈಸೂರು, ಫೆ.20(ಎಸ್‌ಬಿಡಿ)– ಮೈಸೂರು ಚಾಮುಂಡಿಬೆಟ್ಟ ದೇವಸ್ಥಾನದ ಸ್ವಚ್ಛತಾ ನೌಕರ ಹೃದಯಾಘಾತದಿಂದ ಮಂಗಳವಾರ ಸಾವನ್ನಪ್ಪಿದ್ದಾರೆ.

ಚಾಮುಂಡಿಬೆಟ್ಟದ ನಿವಾಸಿ, ದೇವಸ್ಥಾನದ ಹೊರ ಸ್ವಚ್ಛತೆ ನೌಕರ ಗೋಪಾಲ್(46)ಗೆ ಮಂಗಳವಾರ ಬೆಳಿಗ್ಗೆ ಸುಮಾರು 8.30ರ ವೇಳೆಯಲ್ಲಿ ವಿಶೇಷ ದರ್ಶನ ಪ್ರವೇಶ ದ್ವಾರದ ಬಳಿ ಕಾರ್ಯ ನಿರ್ವಹಿಸುವಾಗ ಹೃದಯಾಘಾತವಾಗಿದೆ. ಕೂಡಲೇ ಅವರನ್ನು ಆಂಬುಲೆನ್ಸ್‌ನಲ್ಲಿ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲೇ ಸಾವನ್ನಪ್ಪಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಚಾಮುಂಡೇಶ್ವರಿ ದೇವಸ್ಥಾನದ ನಿರ್ವಹಣಾಧಿಕಾರಿ ಸಿ.ಜಿ.ಕೃಷ್ಣ, ಬೆಳಗ್ಗೆ ಸ್ವಚ್ಛತಾ ಕಾರ್ಯ ನಡೆಸುವಾಗ ಗೋಪಾಲ್ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ದೇವಸ್ಥಾನಕ್ಕೆ ದಾನಿಗಳು ನೀಡಿರುವ ಆಂಬುಲೆನ್ಸ್‌ನಲ್ಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪರೀಕ್ಷಿಸಿದ ವೈದ್ಯರು ಗೋಪಾಲ್ ಮೃತಪಟ್ಟಿರುವುದಾಗಿ ತಿಳಿಸಿದರು. ಶವಸಂಸ್ಕಾರಕ್ಕೆ ಗೋಪಾಲ್ ಕುಟುಂಬದವರಿಗೆ ದೇವಸ್ಥಾನದ ವತಿಯಿಂದ 10 ಸಾವಿರ ರೂ. ನೀಡಲಾಗಿದ್ದು, ವಾರದಲ್ಲಿ ಮರಣ ಉಪದಾನ 35 ಸಾವಿರ ರೂ. ನೀಡಲಾಗುವುದು. ಗೋಪಾಲ್ ಅವರದು ಅನುವಂಶಿಕ ಹುದ್ದೆಯಾಗಿದ್ದು, ಅವರ ಪತ್ನಿ ಅಥವಾ ಮಕ್ಕಳಿಗೆ ಉದ್ಯೋಗ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮೈಸೂರಿನ ವೃದ್ಧರ ಆರೈಕೆ ಕೇಂದ್ರದ ಮಹಿಳಾ ಸಿಬ್ಬಂದಿ ಅನುಮಾನಾಸ್ಪದ ಸಾವು

ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಫೆ.20(ಎಸ್‌ಬಿಡಿ)– ಮೈಸೂರಿನ ವೃದ್ಧರ ಆರೈಕೆ ಕೇಂದ್ರ ವೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಯುವತಿ ಸಾವನ್ನಪ್ಪಿರುವ ಸಂಬಂಧ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಯುಡಿಆರ್ ದಾಖಲಾಗಿದೆ.

ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ತಾಮರ ಹೆಲ್ತ್ ಕೇರ್‌ನಲ್ಲಿ ಕೆಲ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ ಚಾಮರಾಜನಗರ ಜಿಲ್ಲೆ, ಯಳಂದೂರು ತಾಲೂಕು, ಅಂಬಳೆ ಗ್ರಾಮದ ಮಮತಾ(25) ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಯುವತಿ.

ಈಕೆ ಫೆ.15ರಂದು ಮುಂಜಾನೆ ಸುಮಾರು 2.30ರ ಸಮಯದಲ್ಲಿ ಬಾತ್‌ರೂಂನಲ್ಲಿ ಬಿದ್ದು ಸಾವನ್ನಪ್ಪಿದ್ದಾಗಿ ಸಂಸ್ಥೆಯವರು ಆಕೆಯ ಪೋಷಕರಿಗೆ ತಿಳಿಸಿ, ಶವವನ್ನು ಹಸ್ತಾಂತರಿಸಿದ್ದಾರೆ. ಅದೇ ದಿನ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆಯನ್ನೂ ನಡೆಸಲಾಗಿದೆ. ಆದರೆ ಮಮತಾ ದೇಹದ ಮೇಲೆ ಗಾಯದ ಗುರುತುಗಳನ್ನು ಗಮನಿಸಿದ್ದವರು ಆಕೆಯ ತಾಯಿಗೆ ತಿಳಿಸಿದ್ದಾರೆ. ಸಂಸ್ಥೆಯ ಯಾರೊಬ್ಬರೂ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿರಲಿಲ್ಲವಂತೆ. ಹಾಗಾಗಿ ಮಮತಾಳ ತಾಯಿ ತಮ್ಮ ಮಗಳ ಸಾವಿನ ಬಗ್ಗೆ ಅನುಮಾನವಿರುವುದಾಗಿ ಹೆಬ್ಬಾಳು ಪೊಲೀಸ್ ಠಾಣೆಗೆ ನಿನ್ನೆ ದೂರು ನೀಡಿದ್ದಾರೆ.

ಸಂಸ್ಥೆಯ ಮಂದಣ್ಣ, ಆಶಿಕಾ ಮಂದಣ್ಣ ಹಾಗೂ ಅಭಿ ಎಂಬುವವರ ಮೇಲೆ ದೂರಿನಲ್ಲಿ ಅನುಮಾನ ವ್ಯಕ್ತಪಡಿಸಿದ್ದಾರೆ. ದೂರಿನನ್ವಯ ಯುಡಿಆರ್ ದಾಖಲಿಸಿಕೊಂಡಿರುವ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಸಮಾಧಿಯಿಂದ ಮಮತಾ ಶವವನ್ನು ಹೊರತೆಗೆದು ವೈದ್ಯಕೀಯ ಪರೀಕ್ಷೆ ನಡೆಸಲು ಚಾಮರಾಜನಗರ ಉಪವಿಭಾಗಾಧಿಕಾರಿಗಳ ಅನುಮತಿ ಕೋರಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ವಿನಯ್, ತಾಮರ ಹೆಲ್ತ್ ಕೇರ್‌ನಲ್ಲಿ ಕೆಲಸ ಮಾಡುತ್ತಿದ್ದ ಮಮತಾ ಫೆ.15ರಂದು ಮುಂಜಾನೆ ಬಾತ್‌ರೂಂನಲ್ಲಿ ಬಿದ್ದಿದ್ದು, ಅವರನ್ನು ಜಯದೇವ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿರುವುದಾಗಿ ತಿಳಿಸಿ ಆಕೆಯ ಪೋಷಕರಿಗೆ ಶವ ಹಸ್ತಾಂತರಿಸಿ, ಅಂತ್ಯ ಸಂಸ್ಕಾರವನ್ನೂ ನಡೆಸಿದ್ದಾರೆ. ಆದರೆ ಈ ಬಗ್ಗೆ ಸಂಸ್ಥೆಯವರಾಗಲೀ ಮಮತಾ ಪೋಷಕರಾಗಲೀ ಮಾಹಿತಿ ನೀಡಿರಲಿಲ್ಲ. ಇದೀಗ ಮಮತಾ ಸಾವಿನ ಬಗ್ಗೆ ಅನುಮಾನವಿರುವುದಾಗಿ ಅವರ ತಾಯಿ ದೂರು ನೀಡಿದ್ದಾರೆ. ಈ ಬಗ್ಗೆ ಅನುಮಾನಾಸ್ಪದ ಸಾವಿನ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಶವ ಪರೀಕ್ಷೆ ನಡೆಸಲು ಚಾಮರಾಜನಗರ ಎಸಿಯವರಿಗೆ ಪತ್ರ ಬರೆಯಲಾಗಿದೆ. ತಾಮರ ಹೆಲ್ತ್ ಕೇರ್‌ನಲ್ಲೂ ಪರಿಶೀಲನೆ ನಡೆಸಿ, ವಿಚಾರಣೆ ನಡೆಸಲಾಗಿದೆ. ಶವ ಪರೀಕ್ಷೆಯ ವರದಿ ನಂತರವಷ್ಟೇ ಸಾವಿಗೆ ನಿಖರ ಕಾರಣ ತಿಳಿಯಲಿದೆ. ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬಿಜೆಪಿ–ಜೆಡಿಎಸ್ ಮೈತ್ರಿಯನ್ನು ಮತದಾರ ಒಪ್ಪಿಲ್ಲ: ಸಿದ್ದರಾಮಯ್ಯ

ಬೆಂಗಳೂರು, ಫೆ.20– ಬಿಜೆಪಿ ಮತ್ತು ಜೆಡಿಎಸ್ ನಾಯಕರು ನಡುವೆ ಮೈತ್ರಿಯಾಗಿದೆಯೇ ವಿನಃ ಇದಕ್ಕೆ ಮತದಾರರ ಒಪ್ಪಿಗೆ ಇಲ್ಲ ಎಂಬುದನ್ನು ವಿಧಾನಪರಿಷತ್ ಉಪಚುನಾವಣೆ ಫಲಿತಾಂಶ ಸ್ಪಷ್ಟಪಡಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್‌ನ ಜಾತ್ಯತೀತ ಮುಖವಾಡ ಕಳಚಿದೆ. ಜೆಡಿಎಸ್‌ನ ಕೋಮುವಾದಿ ಅವತಾರಕ್ಕೆ ಮತದಾರ ಕಪಾಳಮೋಕ್ಷ ಮಾಡಿದ್ದಾನೆ. ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಜಯಗಳಿಸಿರುವ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣನವರಿಗೆ ಅಭಿನಂದನೆಗಳು. ಇದು ನಮ್ಮ ಸರ್ಕಾರದ 9 ತಿಂಗಳ ಜನಪರವಾದ ಆಡಳಿತ ಮತ್ತು ಸರ್ಕಾರದ ಬಗ್ಗೆ ಪ್ರಜ್ಞಾವಂತ ಮತದಾರರು ಇಟ್ಟಿರುವ ವಿಶ್ವಾಸದ ಗೆಲುವಾಗಿದೆ ಎಂದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಒಟ್ಟಾಗಿ ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಿದ ಹೊರತಾಗಿಯೂ ಸೋಲು ಕಂಡಿವೆ. ಇದು ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರು, ಕುಮಾರಸ್ವಾಮಿ ಹಾಗೂ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ನಡುವಿನ ಮೈತ್ರಿಯೇ ಹೊರತು ಎರಡೂ ಪಕ್ಷಗಳ ಮತದಾರರ ನಡುವಿನ ಮೈತ್ರಿ ಯಲ್ಲ ಎಂಬುದು ಸಾಬೀತಾಗಿದೆ ಎಂದು ಟೀಕೆ ಮಾಡಿದರು.

ಕುಟುಂಬದ ಹಿತಕ್ಕಾಗಿ ಕೋಮು ವಾದಿಗಳ ಜೊತೆ ಕೈಜೋಡಿಸಿರುವ ಜೆಡಿಎಸ್ ಪಕ್ಷವನ್ನು ಹಾಗೂ ಸದಾಕಾಲ ಕುಟುಂಬ ರಾಜಕಾರಣದ ವಿರುದ್ಧ ಟೀಕೆ ಮಾಡಿ, ಒಂದು ಕುಟುಂಬವೇ ರಾಜಕೀಯ ಪಕ್ಷದಂತಿರುವ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡ ಬಿಜೆಪಿಯನ್ನು ಮತದಾರ ಬಂಧುಗಳ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ ಎಂದು ಹೇಳಿದರು.

ಕುಂಬಾರಕೊಪ್ಪಲು ಆದಿಶಕ್ತಿ ಶ್ರೀ ಬನ್ನಿ ಮರದಮ್ಮನ ಜಾತ್ರಾ ಮಹೋತ್ಸವ







ಮೈಸೂರು, ಫೆ.20(ಎಸ್‌ಪಿಎನ್)– ಮೈಸೂರಿನ ಕುಂಬಾರಕೊಪ್ಪಲಿನ ಆದಿಶಕ್ತಿ ಶ್ರೀ ಬನ್ನಿ ಮರದಮ್ಮನ ಜಾತ್ರಾ ಮಹೋತ್ಸವ ಭಕ್ತಿ–ಭಾವದಿಂದ ಮಂಗಳವಾರ ನೆರವೇರಿತು.


ಗೃಹಿಣಿಯರು ಕುಟುಂಬ ಸಮೇತ ಆಗಮಿಸಿ ಆದಿಶಕ್ತಿ ಶ್ರೀ ಬನ್ನಿ ಮರದಮ್ಮನಿಗೆ ದೇವಸ್ಥಾನದ ಮುಂಭಾಗವೇ ಶ್ರದ್ಧಾ ಭಕ್ತಿಯಿಂದ ಕಟ್ಟಿಗೆ ಮೂಲಕ ಎಡೆ ತಯಾರಿಸಿ, ಹರಕೆ ತೀರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ದೇವಾಲಯದ ಆವರಣದಲ್ಲಿ ಇಂದು ಬೆಳಗ್ಗೆಯಿಂದಲೇ ವಿವಿಧ ಪೂಜಾ ಕಾರ್ಯ ನೆರವೇರಿದವು. ನಂತರ ಪ್ರಮುಖ ರಸ್ತೆಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ನೆರವೇರಿತು. ಈ ವೇಳೆ ಮಹಿಳೆಯರು ಹಣ್ಣು–ಕಾಯಿ ನೀಡಿ, ಬನ್ನಿಮರದಮ್ಮನಿಗೆ ಪೂಜೆ ಸಲ್ಲಿಸಿದರು.

ಈ ಸಂಬಂಧ ಕುಂಬಾರಕೊಪ್ಪಲು ಅಭ್ಯುದಯ ಸಂಘದ ಅಧ್ಯಕ್ಷ ಕೆ.ಟಿ.ಚೆಲುವೇಗೌಡ ಮಾಧ್ಯಮಗಳೊಂದಿಗೆ ಮಾತನಾಡಿ, ಆದಿಶಕ್ತಿ ಶ್ರೀ ಬನ್ನಿಮರದಮ್ಮನಿಗೆ ನಮ್ಮ ಪೂರ್ವಜರ ಕಾಲದಿಂದಲೂ ಸಂಭ್ರಮ–ಸಡಗರದಿಂದ ಜಾತ್ರೆ ನೆರವೇರಿಸಲಾಗುತ್ತಿದೆ. ಈ ವೇಳೆ ವಿವಿಧೆಡೆ ನೆಲೆಸಿರುವ ಗ್ರಾಮಸ್ಥರು, ಕುಟುಂಬ ಸಮೇತ ಆಗಮಿಸಿ ಈ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವಿಗೆ ಭಕ್ತಿ ಸಮರ್ಪಣೆ ಮಾಡುತ್ತಾರೆ.

ಅಲ್ಲದೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಆಚರಣೆಯು ಗ್ರಾಮೀಣ ಸೊಗಡನ್ನು ಉಳಿಸಿಕೊಂಡಿದೆ. ಅಲ್ಲದೆ, ಇಂದಿನ ಯುವಕ–ಯುವತಿಯರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಬನ್ನಿಮರದಮ್ಮನ ಕೃಪೆಗೆ ಪಾತ್ರರಾಗಿದ್ದಾರೆ. ಈ ಜಾತ್ರೆ ಯಶಸ್ವಿಗೆ ನೂರಾರು ಯುವಕರು ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಕುಂಬಾರಕೊಪ್ಪಲು ಅಭ್ಯುದಯ ಸಂಘದ ಕಾರ್ಯದರ್ಶಿ ಶಿವಪ್ಪ, ಉಪಾಧ್ಯಕ್ಷ ವೈ.ಭೈರಪ್ಪ, ಸದಸ್ಯರಾದ ಅಂಗಡಿ ಸುರೇಶ್, ದಿನೇಶ್, ಆದರ್ಶ, ಪಟೇಲ್ ನಾಗರಾಜು, ಗಣೇಶ್, ಶಂಕರಪ್ಪ ನರಸಿಂಹ, ಪ್ರಸನ್ನ, ಲೋಕೇಶ್, ಶಂಕರೇಗೌಡ, ಅನಿಲ್‌ಕುಮಾರ್, ರಾಮಪ್ರಸಾದ್, ನವೀನ್‌ಕುಮಾರ್, ಮಂಜು, ವೆಂಕಟೇಶ್, ನಾಗಣ್ಣ, ನಗರ ಪಾಲಿಕೆ ಮಾಜಿ ಸದಸ್ಯರಾದ ಪೈ.ಶ್ರೀನಿವಾಸ್, ಕೆ.ವಿ.ಶ್ರೀಧರ್, ಉಷಾ ಕುಮಾರ್, ಶಿವಮಾದು, ಜಯರಾಂ, ವಕೀಲ ಸತೀಶ್ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಶಾಸಕ ಕೆ.ಹರೀಶ್‌ಗೌಡ, ಬಿಜೆಪಿ ನಗರ ಘಟಕದ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಆದಿಶಕ್ತಿ ಶ್ರೀ ಬನ್ನಿಮರದಮ್ಮನ ದರ್ಶನ ಪಡೆದರು.

ಮಾರ್ಚ್ 22ರಂದು ಐಪಿಎಲ್‌ಗೆ ಚಾಲನೆ



ನವದೆಹಲಿ, ಫೆ.20– ಬಹು ನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ ಮಾರ್ಚ್ 22 ರಂದು ಆರಂಭವಾಗಲಿದೆ. ಅದೇ ಸಮಯದಲ್ಲಿ ಸಾರ್ವತ್ರಿಕ ಚುನಾವಣೆ ಎದುರಾದರೂ ಲೀಗ್‌ನ ಎಲ್ಲ ಪಂದ್ಯಗಳು ದೇಶದಲ್ಲೇ ನಡೆಯಲಿವೆ ಎಂದು ಲೀಗ್‌ನ ಚೇರ್ಮನ್ ಅರುಣ್ ಧುಮಾಲ್ ಮಂಗಳವಾರ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆ ಏಪ್ರಿಲ್ ಅಥವಾ ಮೇ ತಿಂಗಳ ಆರಂಭದಲ್ಲಿ ನಡೆಯುವ ಸಾಧ್ಯತೆಯಿದೆ. ಈ ಕಾರಣದಿಂದಲೇ ಐಪಿಎಲ್ 17ನೇ ಆವೃತ್ತಿಯ ವೇಳಾಪಟ್ಟಿ ಇನ್ನೂ ಬಿಡುಗಡೆಯಾಗಿಲ್ಲ.

ಆರಂಭದಲ್ಲಿ ಮೊದಲ 15 ದಿನಗಳ ವೇಳಾಪಟ್ಟಿಯನ್ನು ಮಾತ್ರ ಪ್ರಕಟಿಸಲಾಗುವುದು. ಉಳಿದ ಪಂದ್ಯಗಳ ವೇಳಾಪಟ್ಟಿಯನ್ನು ಚುನಾವಣೆ ಘೋಷಣೆಯಾದ ನಂತರ ಬಿಡುಗಡೆ ಮಾಡಲಾಗುವುದು ಎಂದು ಧುಮಾಲ್ ಅವರು ಪಿಟಿಐಗೆ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯ ದಿನಾಂಕಗಳನ್ನು ಮಾರ್ಚ್ ಮೊದಲ ವಾರದಲ್ಲಿ ಪ್ರಕಟಿಸುವ ನಿರೀಕ್ಷೆಯಿದೆ. ಮಾರ್ಚ್ 22ರಂದು ಐಪಿಎಲ್‌ಗೆ ಚಾಲನೆ ನೀಡಲು ಎದುರುನೋಡುತ್ತಿದ್ದೇವೆ. ಮೊದಲ 15 ದಿನಗಳ ವೇಳಾಪಟ್ಟಿ ಮೊದಲು ಬಿಡುಗಡೆ ಮಾಡುತ್ತೇವೆ. ಇಡೀ ಟೂರ್ನಿ ಭಾರತದಲ್ಲೇ ನಡೆಯಲಿದೆ ಎಂದು ಧುಮಾಲ್ ತಿಳಿಸಿದರು.

ಐಪಿಎಲ್ ಒಮ್ಮೆ ಮಾತ್ರ 2009ರಲ್ಲಿ ಪೂರ್ಣ ಪ್ರಮಾಣದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿತ್ತು. 2014ರ ಆವೃತ್ತಿಯ ಕೆಲವು ಪಂದ್ಯಗಳು ಲೋಕಸಭಾ ಚುನಾವಣೆಯ ಕಾರಣ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದಿದ್ದವು. ಆದರೆ 2019ರಲ್ಲಿ ಸಾರ್ವತ್ರಿಕ ಚುನಾವಣೆ ಹೊರತಾಗಿಯೂ ಐಪಿಎಲ್ ಅಬಾಧಿತವಾಗಿ ನಡೆದಿತ್ತು.

ಶ್ರೀಮಂತ ಟೂರ್ನಿ ಐಪಿಎಲ್‌ಗೆ ಬೆನ್ನ ಹಿಂದೆಯೇ ಟಿ20 ವಿಶ್ವಕಪ್ ನಿಗದಿಯಾಗಿರುವ ಕಾರಣ, ಲೀಗ್‌ನ ಫೈನಲ್ ಮೇ 26ರಂದು ನಡೆಯುವ ಸಾಧ್ಯತೆಯಿದೆ.

ಭಾರತ ಐಸಿಸಿ ಟಿ20 ವಿಶ್ವಕಪ್‌ನ ಮೊದಲ ಪಂದ್ಯವನ್ನು ಐರ್ಲೆಂಡ್ ವಿರುದ್ಧ ಜೂನ್ 5ರಂದು ನ್ಯೂಯಾರ್ಕ್‌ನಲ್ಲಿ ಆಡಲಿದೆ. ಈ ಬಾರಿಯ ವಿಶ್ವಕಪ್ ಜೂನ್ 1 ರಂದು ಅಮೆರಿಕ ಮತ್ತು ಕೆನಡಾ ನಡುವಣ ಪಂದ್ಯದೊಡನೆ ಆರಂಭವಾಗಲಿದೆ.

ಸಂಪ್ರದಾಯದಂತೆ ಐಪಿಎಲ್‌ನ ಮೊದಲ ಪಂದ್ಯ ಹಿಂದಿನ ವರ್ಷದ ಫೈನಲ್‌ನಲ್ಲಿ ಮುಖಾಮುಖಿಯಾದವರ ನಡುವೆ ನಡೆಯಲಿದೆ. ಕಳೆದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ಫೈನಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಸೋಲಿಸಿತ್ತು. ಐಪಿಎಲ್‌ಗೆ ಆಟಗಾರರ ಖರೀದಿ ಪ್ರಕ್ರಿಯೆ ಕಳೆದ ಡಿಸೆಂಬರ್‌ನಲ್ಲಿ ನಡೆದಿತ್ತು. ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್, ಲೀಗ್‌ನ ಇತಿಹಾಸದಲ್ಲೇ ಅತಿ ಹೆಚ್ಚಿನ ಮೊತ್ತಕ್ಕೆ (24.75 ಕೋಟಿ) ಕೋಲ್ಕತ್ತ ನೈಟ್ ರೈಡರ್ಸ್ ಪಾಲಾಗಿದ್ದರು.

ರಾಷ್ಟ್ರಮಟ್ಟದ ರಾಜಕೀಯ ಬೆಳವಣಿಗೆಗಳಿಂದ ಖರ್ಗೆ ವಿಚಲಿತ!

ಬೀದರ್, ಫೆ.20– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಬೀದರ್‌ನಲ್ಲಿ ಮಾಡಿದ ಭಾಷಣದಲ್ಲಿ ರಾಷ್ಟ್ರಮಟ್ಟದ ರಾಜಕೀಯ ಬೆಳವಣಿಗೆಗಳಿಂದ ವಿಚಲಿತರಾಗಿರುವಂತೆ ಕಂಡುಬಂದರು. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಹಾಗೂ 371(ಜೆ) ಕಲಂ ತಿದ್ದುಪಡಿಯ ರೂವಾರಿ ಮಲ್ಲಿಕಾರ್ಜುನ್ ಖರ್ಗೆ ಅವರು ರಾಜಕೀಯ ಜೀವನಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಇಂದು ನೆಹರೂ ಕ್ರೀಡಾಂಗಣದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಖರ್ಗೆ, ಇತ್ತೀಚೆಗೆ ದೆಹಲಿಯಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ್ದೆ. ಈ ವೇಳೆ ಎನ್‌ಡಿಎ ಕಡೆಗೆ ಆಕರ್ಷಿಸಲು ವಿರೋಧ ಪಕ್ಷದ ನಾಯಕರಿಗೆ ಏನು ಔಷಧಿ ನೀಡುತ್ತಿದ್ದೀರಿ ಮತ್ತು ಇನ್ನೂ ಎಷ್ಟು ವಿರೋಧ ಪಕ್ಷದ ನಾಯಕರನ್ನು ಎನ್‌ಡಿಎ ಕಡೆಗೆ ಸೆಳೆಯಲು ಬಯಸುತ್ತೀರಿ ಎಂದು ಕೇಳಿದೆ. ಅದಕ್ಕೆ ಅವರು ನಮ್ಮ ಬಳಿಗೆ ಅವರೇ ಬಂದರೆ ನಾನೇನು ಮಾಡಬೇಕು ಎಂದು ಮೋದಿ ನಗುತ್ತಲೇ ಹೇಳಿದರು.

ಮಾಜಿ ಸಿಎಂ ಜಯಲಲಿತಾರ ಬೆಲೆ ಬಾಳುವ ವಸ್ತುಗಳ ಹಸ್ತಾಂತರ ಪ್ರಕ್ರಿಯೆ

ದಿನಾಂಕ ನಿಗದಿಪಡಿಸಿದ ಸ್ಪೆಷಲ್ ಕೋರ್ಟ್



ಬೆಂಗಳೂರು, ಫೆ.20– ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಅವರ ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯ, ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿಕೊಂಡ ಚಿನ್ನ ಮತ್ತು ವಜ್ರದ ಆಭರಣಗಳು ಸೇರಿದಂತೆ ಬೆಲೆಬಾಳುವ ವಸ್ತುಗಳನ್ನು ತಮಿಳುನಾಡು ಸರ್ಕಾರಕ್ಕೆ ಹಿಂದಿರುಗಿಸಲು ದಿನಾಂಕವನ್ನು ನಿಗದಿಪಡಿಸಿದೆ.

ಮೌಲ್ಯದ ವಸ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಕೃತ ಅಧಿಕಾರಿಗಳನ್ನು ಮಾರ್ಚ್ 6 ಮತ್ತು 7 ರಂದು ನಿಯೋಜಿಸಿ ತೆಗೆದುಕೊಂಡು ಹೋಗುವಂತೆ ತಮಿಳುನಾಡು ಸರ್ಕಾರಕ್ಕೆ ನ್ಯಾಯಾಲಯ ಸೂಚಿಸಿದೆ.

ವಿಶೇಷ ನ್ಯಾಯಾಲಯದ ನ್ಯಾಯಾಧೀಶ ನ್ಯಾಯಮೂರ್ತಿ ಎಚ್.ಎ.ಮೋಹನ್ ಆದೇಶ ನೀಡಿ, ವಿಚಾರಣೆಯ ಕೊನೆಯ ದಿನಾಂಕದಂದು ಹೊರಡಿಸಿದ ಆದೇಶದ ನಂತರ, ತಮಿಳುನಾಡು ಸರ್ಕಾರವು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರೀಕ್ಷಕ (IGP), ನ್ಯಾಯಾಲಯದ ಆದೇಶದ ಅನುಸಾರವಾಗಿ ಔಪಚಾರಿಕತೆಯನ್ನು ಪೂರ್ಣಗೊಳಿಸಲು ಮತ್ತು ಬೆಲೆಬಾಳುವ ವಸ್ತುಗಳನ್ನು ಹಿಂತಿರುಗಿಸಲು ತಮಿಳುನಾಡು ಸರ್ಕಾರಕ್ಕೆ ಅಧಿಕಾರ ನೀಡಿದೆ.

ಬೆಲೆಬಾಳುವ ವಸ್ತುಗಳನ್ನು ಸುರಕ್ಷಿತವಾಗಿ ತೆಗೆದುಕೊಂಡು ಹೋಗಲು ಆರು ಟ್ರಂಕ್‌ಗಳನ್ನು ತರುವಂತೆ ನ್ಯಾಯಾಲಯ ಇದೇ ಸಂದರ್ಭದಲ್ಲಿ ಸೂಚಿಸಿದೆ. ಮತ್ತು ಹಸ್ತಾಂತರವನ್ನು ದಾಖಲಿಸಿಕೊಳ್ಳಲು ಇಬ್ಬರು ಅಧಿಕೃತ ಅಧಿಕಾರಿಗಳು ಛಾಯಾಗ್ರಾಹಕ ಮತ್ತು ವೀಡಿಯೊಗ್ರಾಫರ್‌ನೊಂದಿಗೆ ಬರುವಂತೆ ಆದೇಶ ನೀಡಿದ್ದಾರೆ.

ಇದಲ್ಲದೆ, ಸಮಸ್ಯೆಯ ಗಂಭೀರತೆಯನ್ನು ಪರಿಗಣಿಸಿ, ಬೆಲೆಬಾಳುವ ವಸ್ತುಗಳ ಸುಗಮ ವರ್ಗಾವಣೆಯನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲು ನ್ಯಾಯಾಲಯವು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆ ನಡೆಸುವ ವೆಚ್ಚವನ್ನು ಭರಿಸುವಂತೆ ಕರ್ನಾಟಕ ಸರ್ಕಾರಕ್ಕೆ 5 ಕೋಟಿ ರೂಪಾಯಿ ಪಾವತಿಸಲು ಹೊರಡಿಸಿದ ಆದೇಶವನ್ನು ತಮಿಳುನಾಡು ಸರ್ಕಾರ ಇನ್ನೂ ಪಾಲಿಸಿಲ್ಲ ಎಂದು ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯಕ್ಕೆ ತಿಳಿಸಿದರು. ಮುಂದಿನ ವಿಚಾರಣೆ ಮಾರ್ಚ್ 6 ರಂದು ನಡೆಯಲಿದೆ.

ಆದಾಯ ಮೀರಿದ ಆಸ್ತಿ ಪ್ರಕರಣದ ವಿಚಾರಣೆಯನ್ನು ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಕರ್ನಾಟಕದಲ್ಲಿ ನಡೆಸಲಾಗಿತ್ತು ಅದಕ್ಕೆ ಸಂಬಂಧಪಟ್ಟ ಸಾಕ್ಷ್ಯ ವಸ್ತುಗಳು ಕರ್ನಾಟಕದಲ್ಲಿವೆ.

ವಿಶೇಷ ನ್ಯಾಯಾಲಯವು 2014 ರಲ್ಲಿ ಜಯಲಲಿತಾ ಮತ್ತು ಇತರರನ್ನು ತಪ್ಪಿತಸ್ಥರೆಂದು ಘೋಷಿಸಿತು. 2015 ರಲ್ಲಿ ಅದನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿತು. ನಂತರ ಇದನ್ನು 2017 ರಲ್ಲಿ ಸುಪ್ರೀಂ ಕೋರ್ಟ್ ರದ್ದುಗೊಳಿಸಿತು ಮತ್ತು ವಿಶೇಷ ನ್ಯಾಯಾಲಯದ ತೀರ್ಪನ್ನು ದೃಢಪಡಿಸಿತು, ಜಯಲಲಿತಾ ಅವರು ಆ ವೇಳೆಗೆ ನಿಧನರಾದರು.

ಕೋಟಿಗಟ್ಟಲೆ ಮೌಲ್ಯದ ವಸ್ತುಗಳು: ವಶಪಡಿಸಿಕೊಂಡ ಕೋಟ್ಯಂತರ ರೂಪಾಯಿ ಮೌಲ್ಯದ ವಸ್ತುಗಳಲ್ಲಿ 7,040 ಗ್ರಾಂ ಚಿನ್ನಾಭರಣಗಳಿದ್ದು, 468 ಬಗೆಯ ಚಿನ್ನ ಮತ್ತು ವಜ್ರಾಭರಣಗಳು, 700 ಕೆಜಿ ಬೆಳ್ಳಿ ಆಭರಣಗಳು, 11,344 ರೇಷ್ಮೆ ಸೀರೆಗಳು, 740 ದುಬಾರಿ ಚಪ್ಪಲಿಗಳು, 250 ಶಾಲುಗಳು, 12 ರೆಫ್ರಿಜರೇಟರ್‌ಗಳು, ಎಂಟು ವಿಸಿಆರ್‌ಗಳು, 10 ಟಿವಿ, 10 ಟಿವಿ ಸೆಟ್‌ಗಳು, 4 ಸಿಡಿ ಪ್ಲೇಯರ್‌ಗಳು, 2 ಆಡಿಯೊ ಡೆಕ್‌ಗಳು, 24 ಟು–ಇನ್–ಒನ್ ಟೇಪ್ ರೆಕಾರ್ಡರ್‌ಗಳು, 1,040 ವಿಡಿಯೋ ಕ್ಯಾಸೆಟ್‌ಗಳು, ಮೂರು ಕಬ್ಬಿಣದ ಲಾಕರ್‌ಗಳು ಹಾಗೂ 1,93,202 ನಗದು ಒಳಗೊಂಡಿವೆ.

ಜಮ್ಮು–ಕಾಶ್ಮೀರದಲ್ಲಿ 32,000 ಕೋಟಿ ಅಭಿವೃದ್ಧಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ



ಜಮ್ಮು, ಫೆ.20– ಜಮ್ಮು ಮತ್ತು ಕಾಶ್ಮೀರದಲ್ಲಿ 32,000 ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಶಿಕ್ಷಣ, ರೈಲ್ವೆ, ವಿಮಾನಯಾನ ಮತ್ತು ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ, ಮಂಗಳವಾರ ಚಾಲನೆ ನೀಡಿದರು.

ಜಮ್ಮುವಿನಿಂದ ಪ್ರಧಾನಿ ಮೋದಿ ದೇಶದಾದ್ಯಂತ 13,500 ಕೋಟಿ ರೂ. ವೆಚ್ಚದ ಹಲವು ಯೋಜನೆಗಳಿಗೆ ಚಾಲನೆ ನೀಡಿದರು. ಈ ಯೋಜನೆಗಳಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಮತ್ತು ಕೇಂದ್ರೀಯ ವಿಶ್ವವಿದ್ಯಾಲಯಗಳು ಸೇರಿವೆ.

ಇದರೊಂದಿಗೆ, ಜಮ್ಮು ಮತ್ತು ಕಾಶ್ಮೀರದ ಸುಮಾರು 1,500 ಹೊಸದಾಗಿ ನೇಮಕಗೊಂಡ ಸರ್ಕಾರಿ ನೌಕರರಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದರು ಮತ್ತು 'ವಿಕಸಿತ ಭಾರತ, ವಿಕಸಿತ ಜಮ್ಮು' ಕಾರ್ಯಕ್ರಮದ ಭಾಗವಾಗಿ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಪ್ರಧಾನಿ ಸಂವಾದ ನಡೆಸಿದರು.

ಬನಿಹಾಲ್–ಖಾರಿ–ಸುಂಬರ್–ಸಂಗಲ್ದನ್ (48 ಕಿಮೀ) ಮತ್ತು ಹೊಸದಾಗಿ ವಿದ್ಯುದ್ದೀಕರಿಸಿದ ಬಾರಾಮುಲ್ಲಾ–ಶ್ರೀನಗರ–ಬನಿಹಾಲ್–ಸಂಗಲ್ದನ್ ವಿಭಾಗ (185. 66 ಕಿಮೀ) ನಡುವಿನ ರೈಲುಮಾರ್ಗಗಳನ್ನು ಉದ್ಘಾಟಿಸಿದರು. ಸಂಗಲ್ದನ್ ಮತ್ತು ಬಾರಾಮುಲ್ಲಾ ನಿಲ್ದಾಣಗಳ ನಡುವಿನ ಮೊದಲ ಎಲೆಕ್ಟ್ರಿಕ್ ರೈಲು ಸೇವೆಗೆ ಚಾಲನೆ ನೀಡಿದರು.

ಪ್ರಧಾನಿ ಮೋದಿಯವರು ದೇಶದ ಇತರ ಭಾಗಗಳ ಸುಮಾರು 13,500 ಕೋಟಿ ರೂ.ಗಳ ಹಲವಾರು ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು.

ಐಐಟಿ ಭಿಲಾಯ್, ಐಐಟಿ ತಿರುಪತಿ, ಐಐಟಿ ಜಮ್ಮು, ಐಐಟಿಡಿಎಂ ಕಾಂಚಿಪುರಂ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಕಿಲ್ಸ್ (ಐಐಎಸ್), ಕಾನ್ಪುರದಲ್ಲಿರುವ ಸುಧಾರಿತ ತಂತ್ರಜ್ಞಾನಗಳ ಪ್ರವರ್ತಕ ಕೌಶಲ್ಯ ತರಬೇತಿ ಸಂಸ್ಥೆ ಮತ್ತು ದೇವಪ್ರಯಾಗ (ಉತ್ತರಾಖಂಡ) ಮತ್ತು ಅಗರ್ತಲಾ (ತ್ರಿಪುರ) ದಲ್ಲಿರುವ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳನ್ನು ಈ ಯೋಜನೆ ಒಳಗೊಂಡಿದೆ.

ಇದರೊಂದಿಗೆ ದೇಶದ ಮೂರು ಹೊಸ ಐಐಎಂಗಳಾದ ಐಐಎಂ ಜಮ್ಮು, ಐಐಎಂ ಬೋಧಗಯಾ ಮತ್ತು ಐಐಎಂ ವಿಶಾಖಪಟ್ಟಣಂಗಳನ್ನು ಉದ್ಘಾಟಿಸಿದರು. ಜೊತೆಗೆ ಕೇಂದ್ರೀಯ ವಿದ್ಯಾಲಯಗಳಿಗೆ (ಕೆವಿಗಳು) 20 ಹೊಸ ಕಟ್ಟಡಗಳು ಮತ್ತು ದೇಶದಾದ್ಯಂತ ಜವಾಹರ್ ನವೋದಯ ವಿದ್ಯಾಲಯಗಳಿಗೆ (ಜೆಎನ್‌ವಿ) ನಿರ್ಮಿಸಲಾದ ಹೊಸ 13 ಕಟ್ಟಡಗಳನ್ನು ಉದ್ಘಾಟಿಸಿದರು.

ಜಮ್ಮು ಮತ್ತು ಕಾಶ್ಮೀರದ ಜನರಿಗೆ ಸಮಗ್ರ, ಗುಣಮಟ್ಟದ ಮತ್ತು ಸಮಗ್ರ ಆರೋಗ್ಯ ಸೇವೆಗಳನ್ನು ಒದಗಿಸುವ ಕೇಂದ್ರ ಸರ್ಕಾರದ ಪ್ರಯತ್ನಗಳ ಭಾಗವಾಗಿ, ಪ್ರಧಾನಿ ಮೋದಿಯವರು ಜಮ್ಮುವಿನ ವಿಜಯಪುರ (ಸಾಂಬಾ)ದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಸಹ ಉದ್ಘಾಟಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಫೆಬ್ರವರಿ 2019ರಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಈ ಸಂಸ್ಥೆಯನ್ನು ಕೇಂದ್ರ ಸರ್ಕಾರದ 'ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ' ಅಡಿಯಲ್ಲಿ ಸ್ಥಾಪಿಸಲಾಗಿದೆ.

227 ಎಕರೆ ಪ್ರದೇಶದಲ್ಲಿ 1,660 ಕೋಟಿ ರೂ. ವೆಚ್ಚದಲ್ಲಿ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು, 720 ಹಾಸಿಗೆಗಳ ಸಾಮರ್ಥ್ಯ ಹೊಂದಿರುವ ಆಸ್ಪತ್ರೆ, 125 ಸೀಟುಗಳ ವೈದ್ಯಕೀಯ ಕಾಲೇಜು, 60 ಸೀಟುಗಳ ನರ್ಸಿಂಗ್ ಕಾಲೇಜು, 30 ಹಾಸಿಗೆಗಳ ಆಯುಷ್ ಬ್ಲಾಕ್, ವಸತಿ ಸೌಕರ್ಯಗಳನ್ನು ಹೊಂದಿದೆ. ಅಧ್ಯಾಪಕರು ಮತ್ತು ಸಿಬ್ಬಂದಿಗೆ, ಯುಜಿ ಮತ್ತು ಪಿಜಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವಸತಿ ಮತ್ತು ಇತರ ಸೌಲಭ್ಯಗಳ ಜೊತೆಗೆ ಶಾಪಿಂಗ್ ಕಾಂಪ್ಲೆಕ್ಸ್ ಅನ್ನು ಕೂಡ ಒಳಗೊಂಡಿದೆ.

ಜಮ್ಮು ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಕಟ್ಟಡಕ್ಕೆ ಸಹ ಮೋದಿ ಶಂಕುಸ್ಥಾಪನೆ ನೆರವೇರಿಸಿದರು. 40,000 ಚದರ ಮೀಟರ್‌ನಲ್ಲಿ ಹರಡಿರುವ ಹೊಸ ಟರ್ಮಿನಲ್ ಕಟ್ಟಡವು ಪೀಕ್ ಅವರ್‌ಗಳಲ್ಲಿ ಸುಮಾರು 2,000 ಪ್ರಯಾಣಿಕರಿಗೆ ಆಧುನಿಕ ಸೌಲಭ್ಯಗಳನ್ನು ಒದಗಿಸಲಿದೆ ಮತ್ತು ಪರಿಸರಸ್ನೇಹಿಯಾಗಿದೆ.

ದೆಹಲಿ–ಅಮೃತಸರ–ಕತ್ರಾ ಎಕ್ಸ್‌ಪ್ರೆಸ್‌ವೇಯ ಎರಡು ಸ್ಟ್ರೆಚ್‌ಗಳು (44.22 ಕಿಮೀ) ಸೇರಿದಂತೆ ಜಮ್ಮುವಿನಿಂದ ಕತ್ರಾ ಮತ್ತು ಎರಡನೇ ಹಂತದ ಶ್ರೀನಗರ ರಿಂಗ್ ರಸ್ತೆಯ ಚತುಷ್ಪಥಕ್ಕೆ ಶಂಕುಸ್ಥಾಪನೆ ಮಾಡಿದರು.

ಜಮ್ಮುವಿನಲ್ಲಿ ಸಿಯುಎಫ್ (ಸಾಮಾನ್ಯ ಬಳಕೆದಾರ ಸೌಲಭ್ಯ) ಪೆಟ್ರೋಲಿಯಂ ಡಿಪೋವನ್ನು ಅಭಿವೃದ್ಧಿಪಡಿಸುವ ಯೋಜನೆಗೆ ಅವರು ಅಡಿಪಾಯ ಹಾಕಿದರು.

ಸಂದೇಶ್‌ಖಾಲಿ ಪರಿಸ್ಥಿತಿ ಅತ್ಯಂತ ಭೀಕರವಾಗಿದೆ: ಸುವೆಂದು

ಸಂದೇಶ್‌ಖಾಲಿ (ಪಶ್ಚಿಮ ಬಂಗಾಳ), ಫೆ.20– ಹಿಂಸಾಚಾರ ಪೀಡಿತ ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಯ ಪರಿಸ್ಥಿತಿ ಅತ್ಯಂತ ಭೀಕರವಾಗಿದೆ ಮತ್ತು ಅರಾಜಕತೆಗೆ ಸ್ಪಷ್ಟ ನಿದರ್ಶನವಾಗಿದೆ ಎಂದು ಬಿಜೆಪಿ ಹಿರಿಯ ನಾಯಕ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೆಂದು ಅಧಿಕಾರಿ ಮಂಗಳವಾರ ಹೇಳಿದ್ದಾರೆ. ಕಲ್ಕತ್ತಾ ಹೈಕೋರ್ಟ್‌ನಿಂದ ಅನುಮತಿ ಪಡೆದ ನಂತರ ಮಂಗಳವಾರ ಮಧ್ಯಾಹ್ನ ಸಂದೇಶ್‌ಖಾಲಿಗೆ ಬಿಜೆಪಿ ಶಾಸಕ ಶಂಕರ್ ಘೋಷ್ ಅವರಿಗೊಂದಿಗೆ ಭೇಟಿ ನೀಡಿ, ಮಹಿಳೆಯರು ಸೇರಿದಂತೆ ಸ್ಥಳೀಯರೊಂದಿಗೆ ಮಾತನಾಡಿದರು. ತಲೆಮರೆಸಿಕೊಂಡಿರುವ ಶಹಜಹಾನ್ ಶೇಖ್ ಸೇರಿದಂತೆ ಸ್ಥಳೀಯ ಟಿಎಂಸಿ ನಾಯಕರಿಂದ ತಮಗೆ ಆಗಿರುವ ಅನುಭವವನ್ನು ಬಿಜೆಪಿ ನಾಯಕರೊಂದಿಗೆ ಹಂಚಿಕೊಂಡರು.

ಸ್ಥಳೀಯರ ಅನುಭವಗಳು ಭಯಾನಕವಾಗಿವೆ. ಅವರ ಭೂಮಿ ಕಬಳಿಸಲಾಗಿದೆ. ಮಹಿಳೆಯರ ಶೋಷಣೆ ಮಾಡಲಾಗಿದೆ. ಎಲ್ಲವೂ ಪೊಲೀಸ್ ಮತ್ತು ಆಡಳಿತದ ನೆರವಿನಿಂದಲೇ ನಡೆದಿದೆ. ಇಲ್ಲಿ ಅರಾಜಕತೆ ಉಂಟಾಗಿದೆ ಎಂಬುದಕ್ಕೆ ಈ ಪ್ರದೇಶ ಸ್ಪಷ್ಟ ನಿದರ್ಶನವಾಗಿದೆ ಎಂದು ಸುವೆಂದು ಹೇಳಿದರು.


ಇದು ವಾತಾವರಣ ಕೆಡಿಸುವ ಪ್ರಯತ್ನ: ಸುವೆಂದು ಅಧಿಕಾರಿ ಮತ್ತು ಶಾಸಕ ಶಂಕರ್ ಘೋಷ್ ಸಂದೇಶ್‌ಖಾಲಿಗೆ ಭೇಟಿ ನೀಡಿರುವುದಕ್ಕೆ ಪ್ರತಿಕ್ರಿಯಿಸಿದ ಟಿಎಂಸಿ, ಇದು ವಾತಾವರಣ ಹಾಳು ಮಾಡುವ ಪ್ರಯತ್ನ ಎಂದು ಹೇಳಿದೆ.

ಮೈಸೂರು ಮಿತ್ರ

ಸೇನಾಪತಿಹಳ್ಳಿ ಡೇರಿಗೆ ಶಿವರಾಜ್ ಅಧ್ಯಕ್ಷ, ಶ್ರೀನಿವಾಸ್ ಉಪಾಧ್ಯಕ್ಷ

ತಿ.ನರಸೀಪುರ, ಫೆ.20– ತಾಲೂಕಿನ ಸೇನಾಪತಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಶಿವರಾಜ್, ಉಪಾಧ್ಯಕ್ಷರಾಗಿ ಶ್ರೀನಿವಾಸ್ ಆಯ್ಕೆಯಾದರು.

ಗ್ರಾಮದ ಡೇರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಶಿವರಾಜು ಹಾಗೂ ಜಿ.ಎಸ್.ಉಮೇಶ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸ್ ಹಾಗೂ ಕೆ.ಜಿ.ಉಮಾಶಂಕರ್ ನಾಮಪತ್ರ ಸಲ್ಲಿಸಿದರು. ಆದರೆ ಕೆ.ಜಿ.ಉಮಾಶಂಕರ್ ನಾಮಪತ್ರ ವಾಪಸ್ ಪಡೆದಿದ್ದರಿಂದ ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾದರು.



ಸೇನಾಪತಿಹಳ್ಳಿ ಡೇರಿ ಅಧ್ಯಕ್ಷರಾಗಿ ಎಸ್.ಶಿವರಾಜು, ಉಪಾಧ್ಯಕ್ಷರಾಗಿ ಶ್ರೀನಿವಾಸ್ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಸ್.ಶಿವರಾಜು 8 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ ಜಿ.ಎಸ್.ಉಮೇಶ್ 5 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ರಾಜಣ್ಣ ಕಾರ್ಯ ನಿರ್ವಹಿಸಿದರು.

ನಿರ್ದೇಶಕರಾದ ಕೃಷ್ಣ, ಕಾಂತರಾಜು, ಮಂಜುನಾಥ್, ರಾಮೇಗೌಡ, ನಂಜುಂಡ, ಜೆ.ಶಿವಶಂಕರ್, ಆರ್.ಗಿರೀಶ್, ರೇಷ್ಮಾ ಹಾಗೂ ಸವಿತಾ ಚುನಾವಣೆ ಸಭೆಯಲ್ಲಿ ಪಾಲ್ಗೊಂಡು ಮತದಾನ ಮಾಡಿದರು.

ನೂತನ ಅಧ್ಯಕ್ಷ ಎಸ್.ಶಿವರಾಜು ಸೇನಾಪತಿಹಳ್ಳಿ ಡೇರಿಯನ್ನು ಮಾದರಿ ಸಂಘವಾಗಿ ಮಾಡಲು ಶ್ರಮಿಸುತ್ತೇನೆ. ಷೇರುದಾರರು ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಬೇಕು. ಸಂಘ ಉಳಿದರೆ ನಾವೆಲ್ಲರೂ ಉಳಿದಂತೆ. ಆದ್ದರಿಂದ ನನ್ನ ಅಧಿಕಾರವಧಿಯಲ್ಲಿ ಎಲ್ಲರ ಸಹಕಾರದೊಂದಿಗೆ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸೇನಾಪತಿಹಳ್ಳಿ, ಕಂಚನಹಳ್ಳಿ ಹಾಗೂ ಗಾಣಿಗನಕೊಪ್ಪಲ್ ಗ್ರಾಮದ ಗ್ರಾಮಸ್ಥರು, ಯಜಮಾನರು, ಹಾಲು ಉತ್ಪಾದಕರು, ಸಂಘದ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಅಜಯ್ ಕುಮಾರ್, ಹಾಲು ಪರೀಕ್ಷಕ ಶ್ರವಣ್ ಕುಮಾರ್, ಸಹಾಯಕ ಎಸ್.ವಿಜಯ್ ಕುಮಾರ್ ಹಾಜರಿದ್ದರು.

ನಂ.ಗೂಡು ನಗರಸಭೆಗೆ ಐವರು ಸದಸ್ಯರ ನಾಮ ನಿರ್ದೇಶನ



ಬಸವರಾಜು



ರಮೇಶ್



ಎಸ್.ರವಿ



ಸೌಭಾಗ್ಯ



ದೀಪು

ನಂಜನಗೂಡು, ಫೆ.20– ನಗರದ ಕೆ.ಎಂ.ಬಸವರಾಜು, ಹೌಸಿಂಗ್ ಬೋರ್ಡ್ ಕಾಲೋನಿ ರಮೇಶ್, ಥಾಮಸ್ ಲೇಔಟ್ ನಿವಾಸಿ ಎಸ್.ರವಿ, ಚಾಮಲಾಪುರ ಬಡಾವಣೆ ಸೌಭಾಗ್ಯ, ಆರ್.ಪಿ.ರಸ್ತೆ 8ನೇ ಕ್ರಾಸ್ ನಿವಾಸಿ ದೀಪು ಅವರನ್ನು ನಂಜನಗೂಡು ನಗರಸಭೆ ನಾಮ ನಿರ್ದೇಶಿತ ಸದಸ್ಯರನ್ನಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧೀನ ಕಾರ್ಯದರ್ಶಿ ಸೂಚನೆ ಮೇರೆಗೆ ನಂಜನಗೂಡು ಪೌರಾಯುಕ್ತ ನಂಜುಂಡಸ್ವಾಮಿ ಆಯ್ಕೆ ಮಾಡಿ ಆದೇಶ ಹೊರಡಿಸಿದ್ದಾರೆ.

ಮಡಿವಾಳ ಕೆ.ಎಂ.ಬಸವರಾಜು ಮಾತನಾಡಿ, ನಾವು ಕಾಂಗ್ರೆಸ್‌ನ ಸಕ್ರಿಯ ಸದಸ್ಯರಾಗಿದ್ದು, ನಮ್ಮ ಸೇವೆ ಗುರ್ತಿಸಿ ಮತ್ತು ಮಡಿವಾಳ ಜನಾಂಗಕ್ಕೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿಕೊಡುವ ಸಲುವಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ಮತ್ತು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಸಲಹೆ ಮೇರೆಗೆ ನಗರಸಭೆಗೆ ನಾಮ ನಿರ್ದೇಶಿತ ಸದಸ್ಯರಾಗಿ ಆಯ್ಕೆಗೊಳಿಸಿರುವುದು ಸಂತಸ ತಂದಿದೆ. ಈ ಸದಾವಕಾಶ ಬಳಸಿಕೊಂಡು ನಂಜನಗೂಡಿನ ಅಭಿವೃದ್ಧಿಗೆ ಕೈ ಜೋಡಿಸಿ ಸೇವೆ ಮಾಡುತ್ತೇನೆ ಎಂದರು.

ಬನ್ನೂರಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಅದ್ದೂರಿ ಸ್ವಾಗತ

ಬನ್ನೂರು, ಫೆ.20– ಪಟ್ಟಣದ ಕಾವೇರಿ ವೃತ್ತಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಇಲ್ಲಿನ ಎಂ.ಎಂ.ರಸ್ತೆಯಲ್ಲಿ ಸಂವಿಧಾನ ಜಾಗೃತಿ ಜಾಥಾವನ್ನು ಕಳಸ ಹೊತ್ತ ಮಹಿಳೆಯರು ಮತ್ತು ಶಾಲಾ ಮಕ್ಕಳು, ವಿವಿಧ ಜಾನಪದಕಲಾ ತಂಡಗಳೊಂದಿಗೆ ಸ್ವಾಗತಿಸಲಾಯಿತು. ಬಳಿಕ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಮಾಜಿ ಶಾಸಕ ಎಸ್.ಕೃಷ್ಣಪ್ಪ ಮಾತನಾಡಿ, ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದರ ಪ್ರಮುಖ ಉದ್ದೇಶ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದೇ ಆಗಿದೆ ಎಂದರು.



ಮಾಜಿ ಪುರಸಭಾ ಸದಸ್ಯ ಡಾ.ಬಿ.ಕೆ. ಜ್ಞಾನಪ್ರಕಾಶ್ ಮಾತನಾಡಿ, ಇಡೀ ವಿಶ್ವದಲ್ಲೇ ಭಾರತದ ಸಂವಿಧಾನ ಶ್ರೇಷ್ಠವಾಗಿದ್ದು, ಎಲ್ಲಾ ವರ್ಗದವರಿಗೂ ಸಂವಿಧಾನ ಸಮಾನ ಅವಕಾಶ ನೀಡಿದೆ. ಹೀಗಾಗಿ ಪ್ರತಿಯೊಬ್ಬರೂ ಸಂವಿಧಾನದ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂದರು. ಇದೇ ವೇಳೆ ಸಂವಿಧಾನ ಪೀಠಿಕೆ ಓದುವ ಮೂಲಕ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಈ ವೇಳೆ ಪುರಸಭಾ ಸದಸ್ಯರಾದ ಮುನಾವರ್ ಪಾಷ, ರಾಮಲಿಂಗೇಗೌಡ, ಲೋಕಾಂಬಿಕ, ಜಾಕೀರ್ ಹುಸೇನ್, ಉಮೇಶ್, ಮುಖ್ಯಾಧಿಕಾರಿ ಹೇಮಂತರಾಜ್, ಸಮಾಜ ಕಲ್ಯಾಣ ಇಲಾಖಾ ಅಧಿಕಾರಿ ಭೀಮರಾವ್ ವಡ್ಡರ್, ಪುಷ್ಪವತಿ, ಶಿವಮೂರ್ತಿ, ಪುರಸಭಾ ಸದಸ್ಯ ಶಿವಣ್ಣ, ಶಿವು ಸೇರಿದಂತೆ ಹಲವರಿದ್ದರು.

ಪ್ರತಿಯೊಬ್ಬರೂ ಸರ್ಕಾರಿ ಶಾಲೆ ಉಳಿಸಲು ಮುಂದಾಗಿ



ಸರಗೂರಿನ ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಸರಗೂರು, ಫೆ.20– ಪ್ರತಿಯೊಬ್ಬರೂ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸಲು ಮುಂದಾಗಬೇಕು ಎಂದು ಆರ್ಯಭಟ ಪ್ರಶಸ್ತಿ ಪುರಸ್ಕೃತ ರವಿ ಸಂತು ತಿಳಿಸಿದರು.

ತಾಲೂಕಿನ ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೋಟರಿ ಸಂಸ್ಥೆ ಸಹಯೋಗದಲ್ಲಿ ನಡೆದ ಸೇವಾರತ್ನ ಪ್ರಶಸ್ತಿ ಮತ್ತು ಮಕ್ಕಳಿಗೆ ಪಠ್ಯ ಸಾಮಗ್ರಿ ವಿತರಣೆ ಸಮಾರಂಭದಲ್ಲಿ ಮಾತನಾಡಿದರು.

ಶಾಲೆ ಮುಖ್ಯ ಶಿಕ್ಷಕ ಸಿದ್ದರಾಜು ಮಾತನಾಡಿ, ಪ್ರತಿಯೊಬ್ಬರೂ ಸರ್ಕಾರಿ ಶಾಲೆ ಮಕ್ಕಳ ನೆರವಿಗೆ ಧಾವಿಸಿ ತಮ್ಮ ಕೈಲಾದ ಸೇವೆ ಮಾಡುವ ಮೂಲಕ ಅವರ ವಿದ್ಯಾಭ್ಯಾಸಕ್ಕೆ ನೆರವಾಗಬೇಕು. ಗ್ರಾಮೀಣ ಕಾಡಂಚಿನ ಸರ್ಕಾರಿ ಶಾಲೆ ಗುರುತಿಸಿ ಶಿಕ್ಷಕರಿಗೆ ಸೇವಾರತ್ನ ಪ್ರಶಸ್ತಿ ಹಾಗೂ ಮಕ್ಕಳಿಗೆ ಪಠ್ಯ ಸಾಮಗ್ರಿ ವಿತರಿಸುತ್ತಿರುವುದು ಶ್ಲಾಘನೀಯ. ಇದ್ದವರು ಇಲ್ಲದವರಿಗೆ ಸಹಾಯ ಹಸ್ತ ಚಾಚುವುದೇ ಮಾನವ ಧರ್ಮ. ಕಲಾವಿದನಾಗಿ, ಹಿನ್ನೆಲೆ ಗಾಯಕ, ಮಿಮಿಕ್ರಿ ಕಲಾವಿದನಾಗಿ ಆರ್ಯಭಟ ಪ್ರಶಸ್ತಿ ಪಡೆದ ರವಿಸಂತು ಸೇವೆ ನಿರಂತರವಾಗಿ ಸಾಗಲಿ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತ ಪಿ.ಜವರನಾಯಕ, ರವಿಸಂತು ಬಳಗದ ಕಲಾವಿದರಾದ ಸಿಂಚನ, ಶ್ರೀಕಂಠ, ಮಮತಾ, ಶೃತಿ, ಪದ್ಮ, ಕಿರಣ್, ಗ್ರಾಪಂ ಸದಸ್ಯ ಮಹದೇವನಾಯಕ, ಮಾಜಿ ಸದಸ್ಯ ಜವರನಾಯಕ, ಮುಖಂಡರಾದ ತಿಮ್ಮನಾಯಕ, ವೈಕುಂಟನಾಯಕ, ಲಕ್ಷ್ಮಣ, ವೆಂಕಟನಾಯಕ, ಜವರೇಗೌಡ, ರಾಜೇಶ್, ಶಾಲಾ ಶಿಕ್ಷಕರಾದ ಸಿ.ಶಿವಣ್ಣ, ಬಂಗಾರಯ್ಯ, ಸಿಂಪಲ್ ಕುಮಾರಿ, ಜಯರಾಮ್, ಅರುಣ್ ಕುಮಾರಿ, ಅರುಣಾಕ್ಷಿ, ರೀಟಾ, ಚನ್ನಮ್ಮ, ಚಿಕ್ಕಮ್ಮ, ಮಂಜುಳ, ಶಾಲಾ ಮಕ್ಕಳು ಗ್ರಾಮಸ್ಥರು ಉಪಸ್ಥಿತರಿದ್ದರು.

ಮೂಗೂರು ಪಬ್ಲಿಕ್ ಶಾಲೆಯಲ್ಲಿ ವಾರ್ಷಿಕೋತ್ಸವ



ಮೂಗೂರು, ಫೆ.20– ಜನಪದ ಸಾಹಿತ್ಯದ ಮೂಲ ಹುಡುಕುವುದು ಹಾಗೂ ಅದನ್ನು ಉಳಿಸಿ ಬೆಳೆಸುವುದು ಕನ್ನಡಿಗರಿಗೆ ದೊಡ್ಡ ಸವಾಲು ಎಂದು ಅಂತಾರಾಷ್ಟ್ರೀಯ ಜನಪದ ಗಾಯಕ ಸಿ.ಎಂ.ನರಸಿಂಹ ಮೂರ್ತಿ ತಿಳಿಸಿದರು.

ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಶ್ರೀತ್ರಿಪುರ ಸುಂದರಿ ರಂಗ ವೇದಿಕೆಯಲ್ಲಿ ನಡೆದ ಪ್ರೌಢಶಾಲಾ ವಿಭಾಗದ ಶಾಲಾ ವಾರ್ಷಿಕೋತ್ಸವ ಹಾಗೂ ಶಾರದ ಪೂಜೆಯಲ್ಲಿ ಮಾತನಾಡಿದ ಅವರು, ಜಾನಪದ ಸಾಹಿತ್ಯ ಆಕಾಶದಷ್ಟು ವಿಶಾಲ ಸಾಗರದಷ್ಟು ಆಳವಾಗಿದೆ. ಪ್ರಸ್ತುತ ಸರ್ಕಾರಿ, ಖಾಸಗಿ ಶಾಲೆಗಳ ಮಧ್ಯೆ ಪೈಪೋಟಿ ಏರ್ಪಟ್ಟಿದೆ. ಹೀಗಾಗಿ ವಿದ್ಯಾರ್ಥಿಗಳು ಭವಿಷ್ಯವನ್ನು ಉಜ್ವಲಗೊಳಿಸುವತ್ತ ಕನಸು ಕಾಣಬೇಕು ಎಂದ ಅವರು, ಅಂಬೇಡ್ಕರ್ ಅವರು ತಮ್ಮದೇ ಆದ ತತ್ವ ಸಿದ್ಧಾಂತ ಮೈಗೂಡಿಸಿಕೊಂಡಿದ್ದರಿಂದ ವಿಶ್ವಜ್ಞಾನಿ ಎನಿಸಿಕೊಂಡರು. ಹಾಗೆಯೇ ವಿದ್ಯಾರ್ಥಿಗಳು ಆದರ್ಶ ಜೀವನದ ಮೌಲ್ಯ ಅರಿತು ಶಾಲೆಗೆ, ಪೋಷಕರಿಗೆ ಕೀರ್ತಿ ತರುವ ಸಾಧನೆ ಮಾಡಬೇಕೆಂದು ತಿಳಿಸಿದರು.

ಉಪ ಪ್ರಾಂಶುಪಾಲ ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು. ಗಣ್ಯರನ್ನು ಸನ್ಮಾನಿಸಿ, ಮುಖ್ಯ ಶಿಕ್ಷಕರಿಗೆ ಅಧ್ಯಾಪಕ ವೃಂದ ಬೀಳ್ಕೊಡುಗೆ ನೀಡಿದರು. ಈ ಸಂದರ್ಭ ಎಸ್‌ಡಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಬಿಆರ್‌ಸಿ ನಾಗೇಶ್, ಪ್ರಾಂಶುಪಾಲ ಮಹೇಶ್, ನಾಗಸ್ವಾಮಿ, ರಮೇಶ್, ಕಾವೇರಿ, ಮರಿಸ್ವಾಮಿ, ಕೇಶವ್, ಮಲ್ಲೇಶ್, ವೀಣಾ, ಅಧ್ಯಾಪಕ ವೃಂದ ಹಾಜರಿದ್ದರು.

ರತ್ನಪುರಿಯಲ್ಲಿ ಅದ್ದೂರಿ ಕೊಂಡೋತ್ಸವ



ರತ್ನಪುರಿ ಗ್ರಾಮದಲ್ಲಿ ಕೊಂಡೋತ್ಸವ ನಡೆಯಿತು


ಹುಣಸೂರು, ಫೆ.20– ತಾಲೂಕಿನ ರತ್ನಪುರಿಯಲ್ಲಿ ಆಂಜನೇಯಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಕೊಂಡೋತ್ಸವ ನಡೆಯಿತು.

ಕಳೆದ 10 ವರ್ಷಗಳಿಂದ ಸಂಪ್ರದಾಯದಂತೆ ಧರ್ಮಾಪುರ ಗ್ರಾಮಸ್ಥರು ನಡೆಸಿಕೊಂಡು ಬರುತ್ತಿರುವ ಕೊಂಡೋತ್ಸವ 2 ವರ್ಷಗಳಿಂದ ನಿಂತು ಹೋಗಿತ್ತು. ಆದರೆ ಈ ಬಾರಿ ಪೂಜಾರಿ ರುಕ್ಮಾಂಗದ ಅವರು ಸಾವಿರಾರು ಭಕ್ತರ ಸಮ್ಮುಖದಲ್ಲಿ ಕೊಂಡ ಹಾಯ್ದರು. ಈ ವೇಳೆ ಧರ್ಮಾಪುರದ ಯಜಮಾನ ಪುಟ್ಟಮಾದಯ್ಯ, ಚಂದ್ರನಾಯಕ, ಗ್ರಾಪಂ ಅಧ್ಯಕ್ಷ ಮಲ್ಲೇಶ್, ಸದಸ್ಯರಾದ ವಿ.ಮಹದೇವ್, ಮಹೇಶ್ ಮತ್ತಿತರರಿದ್ದರು.

ಅನ್ನ ಸಂತರ್ಪಣೆ: ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಉದ್ಯಮಿಗಳಾದ ಕೃಷ್ಣ, ರೈಸ್‌ಮಿಲ್ ಮಾಲೀಕ ಕರುಣ್ ಮತ್ತಿತರರು ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಹಮ್ಮಿಕೊಂಡಿದ್ದರು. ಇದೇ ವೇಳೆ ಪುರುಷರು, ಮಹಿಳೆಯರಿಗಾಗಿ ಹಗ್ಗ ಜಗ್ಗಾಟ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಜಾತ್ರಾ ಸಮಿತಿ ಅಧ್ಯಕ್ಷ ಪ್ರಭಾಕರ್, ಕಾರ್ಯದರ್ಶಿ ರಾಜು, ಸಹ ಕಾರ್ಯದರ್ಶಿ ಸುದರ್ಶನ್ ಸಿಂಗ್, ಗ್ರಾಪಂ ಅಧ್ಯಕ್ಷೆ ಮುಬಾರಕ್ ಭಾನು, ಮಾಜಿ ಅಧ್ಯಕ್ಷ ನಂದೀಶ, ಉಪಾಧ್ಯಕ್ಷೆ ಪದ್ಮಮ್ಮ, ಸದಸ್ಯರಾದ ಮೋಹನಾಚಾರಿ, ವಿಜೇಂದ್ರ ಕುಮಾರ್, ಅಲ್ತಾಫ್ ಷರೀಫ್, ಮನುಕುಮಾರ್, ಮುಖಂಡರಾದ ಆನಂದಸ್ವಾಮಿ, ಜಿಪಂ ಮಾಜಿ ಸದಸ್ಯ ಸುರೇಂದ್ರ, ತಾಪಂ ಮಾಜಿ ಸದಸ್ಯರಾದ ಅಜ್ಗರ್ ಪಾಷ, ಪ್ರೇಮೇಗೌಡ ಸೇರಿದಂತೆ ಇತರರಿದ್ದರು.

ವಿಜೃಂಭಣೆಯ ಆಂಜನೇಯಸ್ವಾಮಿ– ಜಮಾಲ್ ಬೀಬಿ ಅಮ್ಮನವರ ಉರುಸ್



ಹುಣಸೂರು, ಫೆ.20– ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಆಂಜನೇಯಸ್ವಾಮಿ– ಜಮಾಲ್ ಬೀಬಿ ಅಮ್ಮನವರ ಉರುಸ್ ಅದ್ದೂರಿಯಾಗಿ ನಡೆಯಿತು.

ಗ್ರಾಮದ ದರ್ಗಾ ಮುಂದೆ ಧರ್ಮಗುರು ಮುರ್ಷದ್ ನೇತೃತ್ವದಲ್ಲಿ ಆರಂಭವಾದ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಾಗಿತು. ಮೆರವಣಿಗೆಯಲ್ಲಿ ಹುಣಸೂರು, ತಾಲೂಕಿನ ಕುಡಿನೀರುಮುದ್ದನಹಳ್ಳಿ ಸೇರಿದಂತೆ ವಿವಿಧ ಮಸೀದಿಗಳಿಂದ ಆಗಮಿಸಿದ ದೇವರುಗಳನ್ನು ಜಮಾಲ್ ಬೀಬೀ ದರ್ಗಾದ ಬಳಿ ಒಗ್ಗೂಡಿಸಲಾಯಿತು. ಬಳಿಕ ಪವಿತ್ರ ಗಂಗೆಯೊಂದಿಗೆ ವಿವಿಧ ಮಸೀದಿಯಿಂದ ಆಗಮಿಸಿದ ಭಕ್ತರು ದರ್ಗಾ ಪ್ರವೇಶಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಚಾದರ ಹೊದಿಸಿ ಹರಕೆ ತೀರಿಸಿದ ಹಿಂದೂಗಳು: ಜಮಾಲ್ ಬೀಬೀ ದರ್ಗಾದಲ್ಲಿನ ಗೋರಿಗೆ ಹಿಂದೂಗಳು ಚಾದರ ಹೊದಿಸುವ ಮೂಲಕ ಹರಕೆ ತೀರಿಸಿದರು. ಇನ್ನೂ ಹಲವರು ಬೂಂದಿ ಹಾಗೂ ಹೂ ಖರೀದಿಸುವ ಮೂಲಕ ಹರಕೆ ತೀರಿಸಿದರು.

ಶಾಸಕ, ಮಾಜಿ ಶಾಸಕರ ಭೇಟಿ: ಜಮಾಲ್ ಬೀಬಿ ದರ್ಗಾಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಎಂಎಲ್‌ಸಿ ವಿಶ್ವನಾಥ್ ಪುತ್ರ ಅಮಿತ್, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ದಸಂಸ ಹೋರಾಟಗಾರ ಆನಂದಸ್ವಾಮಿ, ತಾಪಂ ಮಾಜಿ ಸದಸ್ಯ ಅಜ್ಗರ್ ಪಾಷ, ಪ್ರಭಾಕರ್, ಗ್ರಾಪಂ ಅಧ್ಯಕ್ಷ ಮುಬಾರಕ್ ಭಾನು, ಸದಸ್ಯರಾದ ಅಲ್ತಾಫ್ ಷರೀಫ್, ಮುಜೀಬ್, ಮೊಹಮ್ಮದ್, ಬಾಬು, ಮನುಕುಮಾರ್, ಮಣಿ, ಮಂಜು, ಮುಖಂಡರಾದ ಸುದರ್ಶನ್ ಸಿಂಗ್, ಪಿಡಿಓ ಅರುಣ್ ಸೇರಿದಂತೆ ಅನೇಕರು ಆಗಮಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಇದೇ ವೇಳೆ ದರ್ಗಾ ಆಡಳಿತ ಸಮಿತಿ ಸದಸ್ಯರು ಜನಪ್ರತಿನಿಧಿಗಳನ್ನು ಗೌರವಿಸಿದರು.

ಮಹಿಳಾ ಥ್ರೋಬಾಲ್ ತಂಡಕ್ಕೆ ಸುಬ್ರಹ್ಮಣ್ಯ ವ್ಯವಸ್ಥಾಪಕ



ನಂಜನಗೂಡು, ಫೆ.20– ಬೆಹರಾನ್‌ನಲ್ಲಿ ನಡೆಯುವ ಇಂಡೋ–ಗಲ್ಫ್ ಇಂಟರ್‌ನ್ಯಾಷನಲ್ ಮಹಿಳಾ ಥ್ರೋಬಾಲ್ ಚಾಂಪಿಯನ್‌ಶಿಪ್‌ನ ಭಾರತ ಮಹಿಳಾ ಥ್ರೋಬಾಲ್ ತಂಡದ ವ್ಯವಸ್ಥಾಪಕರಾಗಿ ನಂಜನಗೂಡಿನ ಸುಬ್ರಹ್ಮಣ್ಯ ಆಯ್ಕೆಯಾಗಿದ್ದಾರೆ.

ಫೆ.23ರಿಂದ 26ವರೆಗೆ ಬೆಹರಾನ್‌ನಲ್ಲಿ ಪಂದ್ಯಾವಳಿ ನಡೆಯಲಿದ್ದು, ಥ್ರೋಬಾಲ್ ಫೆಡರೇಷನ್ ಆಫ್ ಇಂಡಿಯಾ ಸುಬ್ರಹ್ಮಣ್ಯ ಅವರನ್ನು ಮಹಿಳಾ ಥ್ರೋಬಾಲ್ ತಂಡದ ವ್ಯವಸ್ಥಾಪಕರನ್ನಾಗಿ ಆಯ್ಕೆ ಮಾಡಿದೆ. ಮೈಸೂರು ಜಿಲ್ಲಾ ಥ್ರೋಬಾಲ್ ಅಸೋಸಿಯೇಷನ್ ಪದಾಧಿಕಾರಿಗಳೂ ಆಗಿರುವ ಸುಬ್ರಹ್ಮಣ್ಯ 7ನೇ ಬಾರಿ ವ್ಯವಸ್ಥಾಪಕರಾಗಿ ಆಯ್ಕೆಯಾಗಿರುವುದಕ್ಕೆ ಅಸೋಸಿಯೇಷನ್ ಪದಾಧಿಕಾರಿಗಳು ಶುಭ ಕೋರಿದ್ದಾರೆ.

ಆರೋಗ್ಯದಿಂದ ಇರಲು ದೇಹ ದಂಡಿಸಿ, ದುಶ್ಚಟಗಳಿಂದ ದೂರವಿರಿ

ತಹಸೀಲ್ದಾರ್ ಶ್ರೀನಿವಾಸ್ ಸಲಹೆ



ಹೆಚ್.ಡಿ.ಕೋಟೆ, ಫೆ.20– ಆರೋಗ್ಯದಿಂದ ಇರಲು ದೇಹ ದಂಡಿಸಿ, ದುಶ್ಚಟಗಳಿಂದ ದೂರವಿರಬೇಕು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದ ಮುಂಭಾಗದ ಆವರಣದಲ್ಲಿ ಯಶು ಹೆಲ್ತ್ ಪಾಯಿಂಟ್ ಮಲ್ಟಿ ಜಿಮ್ ವತಿಯಿಂದ ಏರ್ಪಡಿಸಿದ್ದ 14ನೇ ತಾಲೂಕು ಮತ್ತು ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಜನರು ದೇಹ ಸೌಂದರ್ಯಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಆದರೆ ದೇಹ ದಂಡಿಸುವವರ ಸಂಖ್ಯೆ ಕ್ಷೀಣಿಸುತ್ತಿದ್ದು, ಮನುಷ್ಯನ ಆಯಸ್ಸು ಕಡಿಮೆಯಾಗುತ್ತಿದೆ ಎಂದ ಅವರು, ಯುವಕರನ್ನು ಪ್ರೋತ್ಸಾಹಿಸಲು ಜಿಮ್ ಯಶವಂತ್ ಅವರು ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಮಿಸ್ಟರ್ ಏಷ್ಯಾ ಖ್ಯಾತಿಯ ನಜೀಬ್ ಖಾನ್ ಮಾತನಾಡಿ, ದೇಹ ದಂಡಿಸಲು ವಯಸ್ಸಿನ ಮಿತಿ ಇಲ್ಲ. ಆದ್ದರಿಂದ 50 ವರ್ಷ ಮೇಲ್ಪಟ್ಟವರೂ ದೇಹ ದಂಡಿಸಿ ದೇಹದ ಸೌಂದರ್ಯ ಉತ್ತಮಪಡಿಸಿಕೊಳ್ಳುವ ಜೊತೆ ಜೊತೆಗೆ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರು.

ಇದೇ ವೇಳೆ ಅಂತರರಾಷ್ಟ್ರೀಯ ಮಟ್ಟದಲ್ಲಿ ರನ್ನಿಂಗ್ ವಿಭಾಗದಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಪಡೆದ ಪೊಲೀಸ್ ಸಿಬ್ಬಂದಿ ಸರಗೂರಿನ ಎಂ.ಡಿ. ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ತಾಲೂಕು ಮಟ್ಟದ ವಿಭಾಗದಲ್ಲಿ ಮಿಸ್ಟರ್ ಕೋಟೆ ಉಲ್ಲಾಸ್, ಬೆಸ್ಟ್ ಮಾಸ್ ಸಂತು, 14ನೇ ತಾಲೂಕು ಮತ್ತು ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಪೋಸರ್ ಪ್ರವೀಣ್ ಕುಮಾರ್ ಮತ್ತು ಮೋಸ್ಟ್ ಮಸ್ಕಲರ್ ಸಾತ್ವಿಕ್ ಆಯ್ಕೆಯಾದರು.

ಜಿಲ್ಲಾ ಮಟ್ಟದ ವಿಭಾಗದಲ್ಲಿ ಮಿಸ್ಟರ್ ಮೈಸೂರು ಸತೀಶ್, ಬೆಸ್ಟ್ ಮಾಸ್ ಎಸ್.ಎಸ್.ಮಹದೇವಸ್ವಾಮಿ, ಬೆಸ್ಟ್ ಪೋಸರ್ ಎಸ್.ಪ್ರವೀಣ್ ಮತ್ತು ಮೋಸ್ಟ್ ಮಸ್ಕಲರ್ ಆಗಿ ಸರಗೂರಿನ ಧನರಾಜ್ ಆಯ್ಕೆಯಾದರು.

ಟ್ರೋಫಿ, ನಗದು ವಿತರಣೆ: ಮಿಸ್ಟರ್ ಮೈಸೂರು ಮತ್ತು ಮಿಸ್ಟರ್ ಕೋಟೆ ವಿಜೇತರಿಗೆ ಆಕರ್ಷಕ ಟ್ರೋಫಿ, 10 ಸಾವಿರ ರೂ. ಬಹುಮಾನ, ಇನ್ನುಳಿದ 3 ವಿಭಾಗಗಳಿಗೆ ಆಕರ್ಷಕ ಟ್ರೋಫಿ ಮತ್ತು ತಲಾ 2 ಸಾವಿರ ರೂ. ಬಹುಮಾನ ವಿತರಿಸಲಾಯಿತು.

ಈ ವೇಳೆ ಯಶು ಹೆಲ್ತ್ ಪಾಯಿಂಟ್ ಮಾಲೀಕ ಯಶವಂತ್, ಪುರಸಭಾ ಸದಸ್ಯರಾದ ವೆಂಕಟೇಶ್, ಮಧುಕುಮಾರ್, ಪ್ರೇಂ ಸಾಗರ್, ಅನಿತಾ, ಚಾಕಳ್ಳಿ ಕೃಷ್ಣ, ಸುರೇಶ್, ಲೋಕೇಶ್, ಮಹೇಂದ್ರ ದಿನೇಶ್, ಸೋಮಶೇಖರ್, ಜಯರಾಮ್, ಶಿವರಾಜ್, ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ಯುವ ಒಕ್ಕಲಿಗರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಸತೀಶ್, ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಮಂಜುಕೋಟೆ, ಶಿಕ್ಷಕರಾದ ಪ್ರಕಾಶ್ ಪುಟ್ಟಪ್ಪ, ಸಿದ್ದರಾಜು, ವಿಠಲ, ಚಿಕ್ಕನಾಯಕ, ರವಿಕುಮಾರ್ ಆರಾಧ್ಯ, ರವಿ, ಕುದಾಯ ಇಲಾಖೆ ಸಿಬ್ಬಂದಿ ಸುಣಾ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
5ಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
5ಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಸೈರನ್ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
5ಡಿ (ಕ)	2 ಪ್ರದರ್ಶನಗಳು
ಕೆಟಿಎಂ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
5ಡಿ (ಕ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರಣಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಉಚಿತ ತರಬೇತಿ ಕಾರ್ಯಾಗಾರ

ನಂಜನಗೂಡು, ಫೆ.20– ಮೈಸೂರಿನ ಸಾಮರಸ್ಯ ವೇದಿಕೆ ಸಹಯೋಗದಲ್ಲಿ ಅತ್ತಿಖಾನೆ ಇಂಗ್ಲಿಷ್ ಅಕಾಡೆಮಿ ನಂಜನಗೂಡು ವತಿಯಿಂದ ಆದರ್ಶ ಶಾಲೆ ಪ್ರವೇಶ ಪರೀಕ್ಷೆಗೆ 15 ದಿನಗಳ ಕಾಲ ಉಚಿತ ತರಬೇತಿ ಆಯೋಜಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ನಗರದ ಆರ್.ಪಿ.ರಸ್ತೆ, 13ನೇ ಕ್ರಾಸ್‌ನಲ್ಲಿರುವ ಅತ್ತಿಖಾನೆ ಇಂಗ್ಲಿಷ್ ಅಕಾಡೆಮಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮಹೇಶ್ ಅತ್ತಿಖಾನೆ ಮೊ. 9845276568 ಸಂಪರ್ಕಿಸಿ.

ಹಾವು ಕಚ್ಚಿ ರೈತ ಮಹಿಳೆ ಸಾವು



ಹುಣಸೂರು, ಫೆ.20– ಹಾವು ಕಚ್ಚಿ ರೈತ ಮಹಿಳೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಹಬ್ಬನಕುಪ್ಪೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಕೃಷ್ಣೇಗೌಡರ ಪತ್ನಿ ಸಣ್ಣಮ್ಮ(58) ಸಾವನ್ನಪ್ಪಿದವರು. ಈಕೆ ಸೋಮವಾರ ಸಂಜೆ ತಮ್ಮ ಜಮೀನಿನಲ್ಲಿ ರಾಗಿ ಕಟಾವು ಮಾಡುವ ವೇಳೆ ಹಾವು ಕಚ್ಚಿದೆ. ಈ ವೇಳೆ ಸ್ಥಳದಲ್ಲಿದ್ದ ಪುತ್ರ ಮಂಜು ಸಣ್ಣಮ್ಮ ಅವರನ್ನು ತಕ್ಷಣ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆಕೆ ಸಾವನ್ನಪ್ಪಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಪ್ಯಾರಜಾನ್ ನಿಧನ



ಹುಣಸೂರು, ಫೆ.20– ನಗರದ ಸ್ಟೋರ್ ಬೀದಿ ನಿವಾಸಿ ಸುಲೇಮಾನ್ ಅವರ ಪುತ್ರ ಪ್ಯಾರಜಾನ್(65) ಮಂಗಳವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶಬ್ಬೀರ್ ನಗರದ ಕಬರಸ್ತಾನದಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್ಲಿ ಆನೆ ತುಳಿದ್ರೆ 15 ಲಕ್ಷ ಕೊಡ್ತೀರಿ; ಇಲ್ಲಿ 5 ಲಕ್ಷ ನೀಡ್ತೀರಿ!

• ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕೆಂಡಾಮಂಡಲ • ನಮ್ಮ ತೆರಿಗೆ ನಮ್ಮ ಹಕ್ಕು ಅಂತೀರಾ; ತೆಲಂಗಾಣದಲ್ಲಿ ನಮ್ಮ ಹಣದಲ್ಲಿ ಜಾಹೀರಾತು ನೀಡ್ತಿರಾ; ಕೇರಳದಲ್ಲಿ ಆನೆ ತುಳಿದ್ರೆ ಅಲ್ಲಿ ಹೋಗಿ ಪರಿಹಾರ ಕೊಡ್ತಿರಾ; ಯಾವ ನ್ಯಾಯ ಸ್ವಾಮಿ

ಬೆಂಗಳೂರು, ಫೆ.20– ಕೇರಳದಲ್ಲಿ ಆನೆ ದಾಳಿಗೆ ಬಲಿಯಾದ ವ್ಯಕ್ತಿಗೆ ಕರ್ನಾಟಕ ಸರ್ಕಾರದಿಂದ ಪರಿಹಾರ ನೀಡುವ ವಿಚಾರ ಇದೀಗ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಸರ್ಕಾರದ ವಿರುದ್ಧ ಕೆಂಡಾಮಂಡಲರಾಗಿದ್ದಾರೆ.

ಈ ಸಂಬಂಧ ಮಾಧ್ಯಮಗಳ ಜೊತೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಅವರ ಸಲಹೆಗಾರರು ಹೇಳಿದಂತೆ ಮಹಾನುಭಾವರು ಕೇರಳದ ಮೃತ ವ್ಯಕ್ತಿಗೆ 15 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಅದೇ ಇಲ್ಲಿ ಏನಾದರೂ ಆನೆ ತುಳಿದು ವ್ಯಕ್ತಿ ಮೃತಪಟ್ಟರೆ ಕೇವಲ 5 ಲಕ್ಷ ಕೊಡ್ತೀರಿ. ಅದಕ್ಕೂ ಕಚೇರಿಗೆ ಅಲೆಯಬೇಕು ಎಂದು ಕಿಡಿಕಾರಿದ್ದಾರೆ.

ವಯನಾಡಿನ ಸಂಸದರು ಹೇಳಿದರು ಅಂತ ಸಿದ್ದರಾಮಯ್ಯನವರು ನಮ್ಮ ತೆರಿಗೆ ನಮ್ಮ ಹಕ್ಕಿನ 15 ಲಕ್ಷ ರೂ. ಕೊಟ್ಟಿದ್ದಾರೆ. ನಮ್ಮ ತೆರಿಗೆಯಲ್ಲಿ ತೆಲಂಗಾಣದಲ್ಲಿ ಜಾಹೀರಾತು ಕೊಟ್ಟಿದ್ದರು. ನಮ್ಮ ತೆರಿಗೆ ನಮ್ಮ ಹಕ್ಕು ಅಂತ ದೆಹಲಿಗೆ ಹೋದವರು ಇಲ್ಲಿ ಈ ರೀತಿ ನಮ್ಮ ತೆರಿಗೆ ಹಣ ಖರ್ಚು ಮಾಡುತ್ತಿರುವುದು ನಾಚಿಕೇಡಿನ ಸಂಗತಿ ಎಂದು ಹೆಚ್‌ಡಿಕೆ ಗರಂ ಆದರು.



ನಾನೆಲ್ಲೂ ಸರ್ಕಾರ ಗ್ಯಾರಂಟಿಯಿಂದ ದಿವಾಳಿ ಅಂತ ಹೇಳಿಲ್ಲ. ನಮ್ಮ ರೈತರಿಗೆ 2 ಸಾವಿರ ರೂ. ಕೊಡ್ತಾರೆ, ಅವರಿಗೆ 15 ಲಕ್ಷ ರೂ. ಕೊಡ್ತಾರೆ. ಈ ನಡುವೆ ಕೇಂದ್ರದಿಂದ ಪರಿಹಾರವೇ ಬಂದಿಲ್ಲ ಅಂತ ಹೇಳ್ತಾರೆ. ಕನ್ನಡಿಗರಿಗೆ ಅನ್ಯಾಯ ಆಗಿದೆ ಅಂತಾರೆ. ಸಾವಿರ ಸಾರಿ ಸುಳ್ಳು ಹೇಳಿ ನಿಜ ಮಾಡುವ ರೀತಿ ಮಾಡಲು ಹೊರಟಿದ್ದಾರೆ. ರಾಷ್ಟ್ರದ ಹಲವು ಆರ್ಥಿಕ ತಜ್ಞರ ಜೊತೆ ಬಹಿರಂಗ ಚರ್ಚೆ ಮಾಡೋಣ. ಕೇಂದ್ರದಿಂದ ಅನ್ಯಾಯ ಆಗ್ತಿದೆ ಅಂತಾ ಹೇಳಿದ್ದೀರಿ. ಅನ್ಯಾಯ ಆಗಿದೆ ಅಂತ ಒಬ್ಬರು ಹೇಳಿದರೆ ಅವರು ಹೇಳಿದ ಹಾಗೆ ಕೇಳೋಕೆ ಸಿದ್ಧ ಎಂದು ಸವಾಲೆಸೆದರು.

ವೀರಾವೇಷದಿಂದ ಒಳಗೆ ಭಾಷಣ ಮಾಡ್ತಿರಬಹುದು, ಕನ್ನಡಿಗರಿಗೆ ಅನ್ಯಾಯ ಆಯ್ತು ಅಂತಾರೆ. ನಿಮ್ಮ ಸದಸ್ಯರು ಯಾಕೆ ಬೆಂಬಲ ಕೊಡಲಿಲ್ಲ. ತಮಟೆ ಹೊಡೆದು ಪ್ರತಿಭಟನೆ ಮಾಡಿದ್ರಲ್ಲವಾ. ಕೇಂದ್ರದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿದ್ದಾರಲ್ಲ. ಇಲ್ಲಿ ಅನ್ಯಾಯ ಆಗಿದ್ರೆ ಅವರು ಬಾಯಿ ತೆಗೆಯಬೇಕಿತ್ತಲ್ಲವಾ ಎಂದು ಪ್ರಶ್ನಿಸಿದರು.

ಜರ್ಮನಿ ಫುಟ್‌ಬಾಲ್ ತಾರೆ ಬ್ರೀಮ್ ನಿಧನ

ಬರ್ಲಿನ್, ಫೆ.20– ಇಟಲಿಯಲ್ಲಿ ನಡೆದ 1990ರ ವಿಶ್ವಕಪ್ ಫೈನಲ್‌ನಲ್ಲಿ ಪಶ್ಚಿಮ ಜರ್ಮನಿ ಪರ 'ಪೆನಾಲ್ಟಿ' ಮೂಲಕ ನಿರ್ಣಾಯಕ ಗೋಲು ಗಳಿಸಿದ್ದ ಆ್ಯಂಡ್ರಿಯಾಸ್ ಬ್ರೀಮ್ (63) ಮಂಗಳವಾರ ನಿಧನರಾದರು ಎಂದು ಬಯರ್ನ್ ಮ್ಯೂನಿಕ್ ಕ್ಲಬ್ ತಿಳಿಸಿದೆ.



ಲೆಫ್ಟ್ ಬ್ಯಾಕ್ ಆಗಿ ಆಡುತ್ತಿದ್ದ ಬ್ರೀಮ್ ಎರಡು ವರ್ಷ (196–88) ಬಯರ್ನ್ ಕ್ಲಬ್‌ಗೆ ಆಡಿದ್ದರು. 1987ರಲ್ಲಿ ಈ ಕ್ಲಬ್ ಬುಂಡೆಸ್‌ಲೀಗಾ (ಜರ್ಮನಿಯ ಕ್ಲಬ್ ಚಾಂಪಿಯನ್‌ಷಿಪ್) ಗೆದ್ದುಕೊಂಡಿತ್ತು.

ಬಯರ್ನ್ ಜೊತೆಗೆ ಅವರು ಯುರೋಪ್‌ನ ಕೈಸರ್ಸ್‌ಲಾಟರ್ನ್, ಇಂಟರ್ ಮಿಲಾನ್, ಸಾರ್‌ಬ್ರುಕೆನ್ ಮತ್ತು ರಿಯಲ್ ಜಾರ್ಗೊರಝಾ ಕ್ಲಬ್‌ಗಳಿಗೆ ಆಡಿದ್ದಾರೆ.

ಬ್ರೀಮ್ ಅವರು ಪಶ್ಚಿಮ ಜರ್ಮನಿ (ಮತ್ತು ನಂತರ ಜರ್ಮನಿ) ಪರ 86 ಪಂದ್ಯಗಳಲ್ಲಿ ಆಡಿದ್ದಾರೆ. ಆದರೆ ರೋಮ್‌ನಲ್ಲಿ ನಡೆದ 1990ರ ವಿಶ್ವಕಪ್ ಫೈನಲ್‌ನ 85ನೇ ನಿಮಿಷ 'ಪೆನಾಲ್ಟಿ'ಯಲ್ಲಿ ಗಳಿಸಿದ ಗೋಲು ಅವರಿಗೆ ಜಗದ್ವಿಖ್ಯಾತಿ ತಂದುಕೊಟ್ಟಿತ್ತು. ಈ ಗೋಲು ನಿರ್ಣಾಯಕವಾಗಿ ಪಶ್ಚಿಮ ಜರ್ಮನಿ 1–0 ಯಿಂದ ಡೀಗೊ ಮರಡೊನಾ ನೇತೃತ್ವದ ಅರ್ಜೆಂಟೀನಾ ತಂಡವನ್ನು ಸೋಲಿಸಿತ್ತು. ಇದರೊಂದಿಗೆ 1986ರ ಮೆಕ್ಸಿಕೊ ವಿಶ್ವಕಪ್ ಫೈನಲ್‌ನಲ್ಲಿ ಅನುಭವಿಸಿದ 3–2 ಸೋಲಿಗೆ ಜರ್ಮನಿ ಮುಯ್ಯಿ ತೀರಿಸಿಕೊಂಡಿತ್ತು. ಪೆನಾಲ್ಟಿ ಯತ್ನವನ್ನು ನಾಯಕ ಲೋಥರ್ ಮಥಾಯಸ್ ಬದಲಿಗೆ ಬ್ರೀಮ್ ತೆಗೆದುಕೊಂಡಿದ್ದರು. 'ಏರ್‌ಪೋರ್ಟ್, ಶಾಪಿಂಗ್... ಹೀಗೆ ನಾನೆಲ್ಲೇ ಹೋದರೂ ಜನರು ಅದರ ಬಗ್ಗೆ ಕೇಳುತ್ತಿದ್ದರು' ಎಂದು ಈ ಹಿಂದೆ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದರು. ಜರ್ಮನಿಯ ಇನ್ನೊಬ್ಬ ದಂತಕತೆ ಆಟಗಾರ ಫ್ರಾಂರಝ್ ಬೆಕೆನ್‌ಬಾರ್ ಕಳೆದ ತಿಂಗಳು ಮೃತಪಟ್ಟಿದ್ದರು.

'ಆ್ಯಂಡಿ ನಮ್ಮ ವಿಶ್ವಕಪ್ ಹೀರೊ, ನನಗೆ ಅವರು ಅದಕ್ಕಿಂತ ಹೆಚ್ಚು. ಅವರು ನನ್ನ ಆಪ್ತ ಮಿತ್ರ ಮತ್ತು ಜೊತೆಗಾರ' ಎಂದು ಇನ್ನೊಬ್ಬ ತಾರೆ ರೂಡಿ ವಾಲರ್ ಶೋಕ ಸೂಚಿಸಿದರು.

8ನೇ ವರ್ಷದ ಪುಣ್ಯಸ್ಮರಣೆ



ಎನ್.ರಾಘವನ್ (ವಾಸು) ಪ್ರಾಧ್ಯಾಪಕರು

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖಿತಪ್ತರು:
ತಾಯಿ ಗೌರಮ್ಮ, ಮಕ್ಕಳಾದ, ಕಾರ್ತಿಕ್, ಕೋಮಲಹಂಸ ಮತ್ತು ಕುಟುಂಬವರ್ಗ

ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ, ಮೈಸೂರು ಜಿಲ್ಲೆ, ಮೈಸೂರು
ಪಿ.ಟಿ.ಸಿ.ಎಲ್ ಮೇಲ್ಮನವಿ ಸಂಖ್ಯೆ: 5/2020

ಮೇಲ್ಮನವಿದಾರರು: ಶ್ರೀ. ಗೋಪಾಲಕೃಷ್ಣಶೆಟ್ಟಿ ಮತ್ತು ಇನ್ನೊಬ್ಬರು.
ವಿರುದ್ಧ
ಎದುರುದಾರರು: ಉಪ ವಿಭಾಗಾಧಿಕಾರಿಗಳು ರವರು, ಮೈಸೂರು ಉಪ ವಿಭಾಗ, ಮೈಸೂರು ಮತ್ತು ಇತರರು ಎದುರುದಾರ ಸಂಖ್ಯೆ 11 : ಸಣ್ಣಪಾಪಯ್ಯ ಬಿನ್ ಸಣ್ಣಮರಯ್ಯ @ ಚಿಕ್ಕಮರಯ್ಯ.
ಎದುರುದಾರ ಸಂಖ್ಯೆ 12 : ಶ್ರೀಮತಿ. ಜಯಮ್ಮ ಬಿನ್ ಸಣ್ಣಮರಯ್ಯ @ ಚಿಕ್ಕಮರಯ್ಯ. ಎದುರುದಾರರ ಸಂಖ್ಯೆ: 11 ಮತ್ತು 12 ರವರುಗಳ ವಾಸ: ಉಡ್ಡೂರು ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಮನವಿದಾರರು ಎದುರುದಾರರ ವಿರುದ್ಧ ಮೇಲ್ಕಂಡ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ: ಪಿ.ಟಿ.ಸಿ.ಎಲ್. (ಅ) 5/2020 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ಎದುರುದಾರ ಸಂಖ್ಯೆ: 11 ಮತ್ತು 12 ರವರಿಗೆ ನ್ಯಾಯಾಲಯದಿಂದ ಸಮನ್ಸ್ ನೀಡಿದ್ದು, ಸದರಿ ವಿಳಾಸದಲ್ಲಿ ಎದುರುದಾರ ಸಂಖ್ಯೆ: 11 ಮತ್ತು 12 ಸಮನ್ಸ್ ಜಾರಿಯಾಗಿರುವುದಿಲ್ಲ. ಆದುದರಿಂದ, ಈ ಮೂಲಕ ನಿಮಗೆ ತಿಳಿಯ ಪಡಿಸುವುದೇನೆಂದರೆ, ಈ ಪ್ರಕರಣದಲ್ಲಿ ನೀವು ಎದುರುದಾರ ಸಂಖ್ಯೆ: 11 ಮತ್ತು 12 ಆಗಿದ್ದು, ಸದರಿ ಪ್ರಕರಣ ಈ ಘನ ನ್ಯಾಯಾಲಯಕ್ಕೆ ದಿನಾಂಕ 01.03.2024 ರಂದು ಸುನಾವಣೆ ಇರುತ್ತದೆ. ಆ ದಿನ ನೀವು ತಪ್ಪದೇ ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮಧ್ಯಾಹ್ನ 03.00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ತಿಳಿಯತಕ್ಕದ್ದು. ತಪ್ಪಿದಲ್ಲಿ ಘನ ನ್ಯಾಯಾಲಯವು ಮೇಲ್ಕಂಡ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಚೌಡಹಳ್ಳಿ ಗ್ರಾಮಕ್ಕೆ ಸೇರಿದ ಹಳೆ ಸರ್ವೆ ನಂ.66, ಹೊಸ ಸರ್ವೆ ನಂ.66/2 ರಲ್ಲಿ ಪದ್ಮಾವತಿ ರವರ ಹೆಸರಿನಲ್ಲಿರುವ 1 ಎಕರೆ 35 ಗುಂಟೆ ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚೆಕ್ಕುಬಂದಿ:
ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ರಸ್ತೆ ಮತ್ತು ಸೋಮಯ್ಯ ರವರ ಜಮೀನು, ಉತ್ತರಕ್ಕೆ: ಮರಿರಾಮಯ್ಯ ರವರ ಜಮೀನು, ದಕ್ಷಿಣಕ್ಕೆ: ಕೋಡಿಮರಯ್ಯ ಬಿನ್ ಶಿವಾಲ ರವರ ಜಮೀನು

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಜಿಲ್ಲಾಧಿಕಾರಿಗಳ ಪರವಾಗಿ, ಜಿಲ್ಲಾಧಿಕಾರಿಗಳ ನ್ಯಾಯಾಲಯ, ಮೈಸೂರು ಜಿಲ್ಲೆ, ಮೈಸೂರು
ಮೇಲ್ಮನವಿದಾರರ ಪರ ವಕೀಲರು
ಸಹಿ/- ಜಿ.ಸುರೇಶ್, ಬಿಕಾಂ. ಎಲ್‌ಎಲ್‌ಬಿ, ವಕೀಲರು, ನಂ.1, 1ನೇ ಕ್ರಾಸ್, 2ನೇ ಮುಖ್ಯರಸ್ತೆ, ಜಯನಗರ, ಮೈಸೂರು.
ಸ್ಥಳ: ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು 570020, ಕರ್ನಾಟಕ ಇವರು ಎಲಿವೇಟರ್‌ಗಳ ತಯಾರಿಕೆಯಲ್ಲಿ ಖ್ಯಾತಿ ಹೊಂದಿರುವ, ಸಾಕಷ್ಟು ಆರ್ಥಿಕ ಸುದೃಢತೆ ಹೊಂದಿರುವ, ಸೂಕ್ತ ಸ್ಥಾಪನಾ ಸಲಕರಣೆಗಳನ್ನು ಮತ್ತು ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಈ ಕಾರ್ಯದಲ್ಲಿ ಅನುಭವವಿರುವ ವ್ಯಕ್ತಿಗಳಿಂದ 'ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವಕೇಂದ್ರ ವಿವೇಕಸ್ಮಾರಕ' ಕಟ್ಟಡ, ಮೈಸೂರು 570004 ಇಲ್ಲಿ 3 ಎಲಿವೇಟರ್‌ಗಳನ್ನು ಸರಬರಾಜು, ಸ್ಥಾಪನೆ ಮತ್ತು ನಿರ್ವಹಣೆ ಮಾಡಲು ಸೀಲು ಮಾಡಿದ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ.

ಸೀಲು ಮಾಡಿದ ಕೊಟೇಶನ್‌ಗಳನ್ನು ದಿನಾಂಕ 03.03.2024ರಂದು ಸಂಜೆ 4.00 ಘಂಟೆಯೊಳಗೆ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಕಛೇರಿಯಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಆಶ್ರಮದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ಅಥವಾ ಆಶ್ರಮದ ಜಾಲತಾಣ:- https://srkmys.org/tender ಗೆ ಭೇಟಿ ನೀಡುವ ಮೂಲಕ ಅಥವಾ mysuru@rkmm.org ಇಲ್ಲಿಗೆ ಸಂದೇಶ ಕಳುಹಿಸುವ ಮೂಲಕ ಪಡೆಯಬಹುದು.

ದಿನಾಂಕ: 17.02.2024 ಭಗವತ್ಸೇವೆಯಲ್ಲಿ ತಮ್ಮವ
ಸಹಿ/-ಸ್ವಾಮಿ ಮುಕ್ತಿದಾನಂದ, ಅಧ್ಯಕ್ಷರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು
ಮೈಸೂರು–ನಂಜನಗೂಡು ರಸ್ತೆ, ಬಂಡಿಪಾಳ್ಯ, ಮೈಸೂರು–570025
E-mail:apmcmysore@rediffmail.com
apmcmys@gmail.com
ದೂರವಾಣಿ : 0821–2482389

ಸಂ.ಕೃ.ಉ.ಮಾ.ಸ(ಮೈ)/272/2023–24 ದಿನಾಂಕ: 12–02–2024

ಪ್ರಕಟಣೆ

ಈ ಮೂಲಕ ಸಮಿತಿಯು ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ ಹಾಗೂ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ತರಕಾರಿ ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ದಲ್ಲಾಲರುಗಳಿಗೆ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರ ಕಲಂ (78)ರನ್ವಯ ದಲ್ಲಾಲರುಗಳು ಸಂಬಂಧಪಟ್ಟ ಖರೀದಿದಾರರುಗಳಿಂದ ಮಾತ್ರ ನಿಗದಿತ ಕಮಿಷನ್ (ದಲ್ಲಾಲಿ) ಪಡೆಯಲು ಅವಕಾಶವಿದ್ದು, ರೈತರಿಂದ ಯಾವುದೇ ರೀತಿಯ ಕಮಿಷನ್ ವಸೂಲಿ ಮಾಡಲು ಅವಕಾಶ ವಿರುವುದಿಲ್ಲ. ಈ ಕುರಿತು ರೈತರುಗಳಿಂದ ಸಮಿತಿಗೆ ಕಮಿಷನ್ (ದಲ್ಲಾಲಿ) ಪಡೆದ ಬಗ್ಗೆ ಬಿಕರಿಗೆ ಸಂಬಂಧಿಸಿದಂತೆ ಹಾಗೂ ಇತರೆ ಯಾವುದೇ ದೂರುಗಳು ಬಂದಲ್ಲಿ ನಿಮ್ಮ ವಿರುದ್ಧ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರ ಕಲಂ (78) ಮತ್ತು (79) ರ ಉಲ್ಲಂಘನೆಗಾಗಿ ನೀವು ಸಮಿತಿಯಿಂದ ಪಡೆದಿರುವ ಪರವಾನಗಿಯನ್ನು ರದ್ದುಪಡಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ತಿಳಿಯಿರಿ

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ, ಮೈಸೂರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅದ https://www.kppp.karnataka.gov.in ಅಪ್‌ಲೋಡ್ ಮಾಡಲಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2023-24 /IND0629	ಒಕ್ಕೂಟಕ್ಕೆ ಅಗತ್ಯವಿರುವ ಪೇಪರ್ ಕೋರ್ ಹಾಗೂ ಪಂಚಿಂಗ್ ಕೋರ್‌ಗಳನ್ನು ಖರೀದಿಸುವ ಬಗ್ಗೆ.	27.02.2024 ಮಧ್ಯಾಹ್ನ 12.00 ಗಂಟೆಯವರೆಗೆ
2	KMF/2023-24 /SE1585	ಒಕ್ಕೂಟದ ವ್ಯಾಪ್ತಿಗೊಳಪಡುವ ಕಟ್ಟಡ / ಯಂತ್ರೋಪಕರಣಗಳು ಹಾಗೂ ಇತ್ಯಾದಿಗಳನ್ನು ಬೆಂಕಿ ಅಪಘಾತ /ಕಳ್ಳತನ /ಎಂ.ಬಿ.ಡಿ /ನಗದು ವಿಮಾ ಸುರಕ್ಷತೆಗೊಳಪಡಿಸಲು ಹಾಗೂ ಒಕ್ಕೂಟದ ನೌಕರರುಗಳಿಗೆ ಮತ್ತು ಅವರ ಅವಲಂಬಿತರಿಗೆ ಆರೋಗ್ಯ ವಿಮೆಯನ್ನು 2024–25ನೇ ಸಾಲಿಗೆ ಐ.ಆರ್.ಡಿ.ಎ ನೋಂದಾಯಿತ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ ಮಾಡಿಸುವ ಬಗ್ಗೆ.	26.02.2024 ಮಧ್ಯಾಹ್ನ 03.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (7411654265) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.

PUBLIC NOTICE

My client intends to purchase the schedule property which is more-fully described in the schedule given hereunder from its present owner/s
1. Smt. Devamma, 2. Sri. Puttaiah, 3. Sri. Venkataswamy, 4. Sri. Madappa, 5. Sri. Govinda 6. Smt. Chikkathayamma and 7. Sri. Shankara and others, all are residing at Halagaiahnahundi Village, 2nd Cross, Near Anganavadi, Vajamangala Post, Varuna Hobali, Mysuru Talluk and Mysuru District.

That if any person/s having right/s, title, interest or claim over the schedule property shall file their written objections with relevant documents within **7 DAYS** from the date of this publication of notice to undersigned counsel. In the event of non- receiving any objection/s, claims within the above period, it is presumed that there is no claim/objection/rights whatsoever of nature over the below mentioned schedule property from any person/s and my client will proceed with the sale transaction in respect of the schedule property.

SCHEDULE PROPERTY

All the piece and parcel of agricultural land bearing Survey No.102/1, measuring 01 Acre 0-21 Guntas, (One Acre Twenty One Guntas), situated at Vajamangala Village, Varuna Hobali, Mysuru Talluk and Mysuru District and which is bounded by;

EAST By : Property belongs to Muddegowda and Nale
WEST By : Property belongs to Ningegowda
NORTH By : Property belongs to Chikkanna and Mari Swamy
SOUTH By : Property belongs to Suresh

SD/-
Nagendra Prasad. S,
Advocate
KAR/1537/2004
Office at No.1493/1, 2nd Floor, Dr.B.R.Ambedkar Road, Krishnamurthypuram, Mysuru-04.
Phone : 99865-75456

Date:20.02.2024
Mysuru.

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ, ಮೈಸೂರು
ಜಿ.ಐ.ಟಿ.ಬಿ. ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು-570 011
पी एम श्री केन्द्रीय विद्यालय मैसूरु,
जी.आई.टी.बी प्रेस परिसर सिद्धार्थनगर, मैसूरु - ५७००११
(शिक्षा मंत्रालय, भारत सरकार के अधीन एक स्वायत्त निकाय)
PM SHRI KEDRIYA VIDYALAYA, MYSURU
GITB, Press Campus, Siddharthnagar, Mysuru-570011
(An Autonomous Body Under MOE, Government of India)
080-2473515, Website : https://mysore.kvs.ac.in
Email : kvmysore@gmail.com

ನೇರ ಸಂದರ್ಶನ

ನೇರ ಸಂದರ್ಶನ 28.02.2024 ರಂದು ವಿದ್ಯಾಲಯ ಆವರಣದಲ್ಲಿ 2024-2025 ರ ಅವಧಿಗೆ ಒಪ್ಪಂದದ ಆಧಾರದ ಮೇಲೆ ಸಮಿತಿಯನ್ನು ತಯಾರಿಸಲು ವಿವಿಧ ಹುದ್ದೆಗಳಿಗೆ 28.02.2024ರಂದು ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರಿನಲ್ಲಿ ನೇರಸಂದರ್ಶನಕ್ಕಾಗಿ ಅರ್ಹ ಅಭ್ಯರ್ಥಿಗಳನ್ನು ಕರೆಯಲಾಗಿದೆ. ಅರ್ಹ ಅಭ್ಯರ್ಥಿಗಳು ತಮ್ಮ ಪ್ರಮಾಣಪತ್ರಗಳೊಂದಿಗೆ ದಿನಾಂಕ : 28.02.2024ರಂದು ಸ್ವತಃ ಹಾಜರಾಗಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

ನೋಂದಣಿ ಸಮಯ : ಬೆಳಗ್ಗೆ 8.30 ರಿಂದ 10.00ರ ವರೆಗೆ । ಸಂದರ್ಶನ ಸಮಯ : ಬೆಳಗ್ಗೆ 10.00 ರಿಂದ

ದಿನಾಂಕ ಮತ್ತು ಸಮಯ	ಹುದ್ದೆ ಮತ್ತು ವಿಷಯ
28.02.2024	ಹುದ್ದೆ: ಪಿ.ಜಿ.ಟಿ.: ಭೌತಿಕ ವಿಜ್ಞಾನ ಟಿ.ಜಿ.ಟಿ : ಇಂಗ್ಲಿಷ್, ಹಿಂದಿ, ಸಂಸ್ಕೃತ, ವಿಜ್ಞಾನ, ಗಣಿತ
28.02.2024	ಹುದ್ದೆ: ಪ್ರಾಥಮಿಕ ಶಿಕ್ಷಕರು ಇತರೆ ಪೋಸ್ಟ್‌ಗಳು : ಕಂಪ್ಯೂಟರ್ ಮಾರ್ಗದರ್ಶಕರು, ಟಿ.ಜಿ.ಟಿ - ಕೃತಕ ಬುದ್ಧಿಮತ್ತೆ
28.02.2024	ಇತರೆ ಹುದ್ದೆಗಳು : ಕನ್ನಡ ಶಿಕ್ಷಕರು, ವೈದ್ಯರು, ಸ್ಟಾಫ್ ನರ್ಸ್, ಸಲಹೆಗಾರರು ವಿಶೇಷ ಶಿಕ್ಷಣ ತಜ್ಞರು, ಕ್ರೀಡಾ ಕೋಚ್, ಯೋಗ, ನೃತ್ಯ ಶಿಕ್ಷಕರು, ಕಲೆ ಮತ್ತು ಕರಕುಶಲ ಶಿಕ್ಷಕರು.
ಸೂಚನೆ :	1. ಅಭ್ಯರ್ಥಿಗಳು ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರಗಳ ಒಂದು ಸೆಟ್ ಸ್ವಯಂ ದೃಢೀಕರಿಸಿದ ಪ್ರಮಾಣಪತ್ರ ಮತ್ತು (ಎರಡು) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ನೋಂದಣಿಗಾಗಿ ಹಾಜರುಪಡಿಸಬೇಕು. 2. ಸಂದರ್ಶನಕ್ಕೆ ಯಾವುದೇ ಟಿ.ಎ/ಡಿ.ಎ ನೀಡಲಾಗುವುದಿಲ್ಲ. 3. ಅರ್ಜಿ ನಮೂನೆ ಅರ್ಹತಾ ಮಾನದಂಡಗಳು ಕನಿಷ್ಠ ವಿದ್ಯಾರ್ಹತೆ, ವೇತನ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು ದಯವಿಟ್ಟು ನಮ್ಮ ವೆಬ್‌ಸೈಟನ್ನು ನೋಡಿ. https://mysore.kvs.ac.in /

- PRINCIPAL